CC-O. In Public Domain. Digitized by eGangotri

ನಿಮ್ಮ ಜನ್ಮ

1 ದಿನಾಂಕ 3 ದಲ್ಲಿ

ನಿಮ್ಮ ಭವಿಷ್ಯ

Sri Vijayabharathi Book Centre, Shimoga

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಜನ್ಮ ದಿನಾಂಕದಲ್ಲಿ ನಿಮ್ಮ ಅದೃಷ್ಟ

ಡಾ|| ಇ. ವೇದವ್ಯಾಸ, I. A.S., Ph.D.

SRI VIDYA BHARATHI
BOOK CENTRE
Bharathi Street
SRINGERI-577 139

ಪ್ರಕಾಶಕರು :
ಶ್ರೀ ವೇದವ್ಯಾಸ ಭಾರತಿ ಪ್ರಕಾಶನ
ಯೋಗಮಿತ್ರ ಮಂಡಲಿ
ಹೈದರಾಬಾದ್ – ಬೆಂಗಳೂರು.

Rs 9 = 00
Sri Vidyabharathi Book Centre, Sringeri

CC-0. In Public Domain. Digitized by eGangotri

ಕೃತಿ ಹೆಸರು : ನಮ್ಮ ಟ್ಯೂನ್ಮ ಬಿನೋಕಕ್ಲರ್ಲ್ಲಿ ನಡೆಸ್ಮ ಅಧ್ಯಯನ

ಪುಟಗಳು : xii+72=84

ಲೇಖಕರು : ಡಾ|| ಇ. ವೇದವ್ಯಾಸ, I.A.S.Ph.D.

ಕನ್ನಡಕ್ಕೆ : ಎಂ.ಎಲ್. ರಾಘವೇಂದ್ರರಾವ್

ಪ್ರಥಮ ಮುದ್ರಣ : 1991

ಹಕ್ಕುಗಳು : ಲೇಖಕರದು.

ಬೆಲೆ : ಒಂಬತ್ತು ರೂಪಾಯಿಗಳು.

ಉತ್ತಮ ಪ್ರತಿ : ಹತ್ತೊಂಬತ್ತು ರೂಪಾಯಿಗಳು

ಪ್ರತಿಗಳಿಗೆ :

ಕಾರ್ಯದರ್ಶಿ, ಯುಸ್ಸೆಫಿ
56, ರಸ್ತೆ ಸಂಖೆ 8, ಜೂಬಿಲಿ ಹಿಲ್ಸ್
ಹೈದರಾಬಾದ್-500034.

ಕಾರ್ಯದರ್ಶಿ. ಯುಸ್ಸೆಫಿ
677, 14ನೇ ಅಡ್ಡರಸ್ತೆ
ಜೆ. ಪಿ. ನಗರ 2ನೇ ಫೇಸ್
ಬೆಂಗಳೂರು-560 078.

ಮುದ್ರಣ :
ಸತ್ಯಾನಂದ ಪ್ರೆಸ್,
ಕಾಟನ್‌ಪೇಟೆ, ಬೆಂಗಳೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ|| ಇ. ವೇದವ್ಯಾಸರ ಕೃತಿಗಳು

ಹಿಂದೂ ಮತದ ಮೇಲೆ ವೈಜ್ಞಾನಿಕ ಪರಿಶೋಧನೆ	40-00
ವಿಜಯ ವಿದ್ಯಾರಣ್ಯರು	40-00
ವಿದೇಶಗಳಲ್ಲಿ ಹಿಂದೂ ಮತ	16-00
ಭಗವಾನ್ ವೇದವ್ಯಾಸ	25-00
ಸೋವಿಯಟ್ ರಷ್ಯಾಗಳಲ್ಲಿ ಆಧ್ಯಾತ್ಮಿಕ ಪರಿಶೋಧನೆ	20-00
ಮಹಾಭಾರತ ಕಾಲ ನಿರ್ಣಯ	40-00
ಜ್ಯೋತಿಷ್ಯ ವೈಜ್ಞಾನಿಕವೇ ? ಮೂಢ ವಿಶ್ವಾಸವೇ ?	20-00
ನಿತ್ಯ ಜೀವನದಲ್ಲಿ ಯೋಗ ಸಾಧನೆ	20-00
ಸಾಧನೆಯ ರಹಸ್ಯಗಳು	16-00
ನಿಮ್ಮ ಜೀವನದಲ್ಲಿ ಅದೃಷ್ಟ ಫಳಿಗೆಗಳು	8-00
ನಿಮ್ಮ ಮನೆ-ನಿಮ್ಮ ಅದೃಷ್ಟ	8-00
ನಿಮ್ಮ ಜನ್ಮ ದಿನಾಂಕದಲ್ಲಿ ನಿಮ್ಮ ಅದೃಷ್ಟ	9-00
ನಕ್ಕರೆ ನವರತ್ನಗಳು	16-00
ವಿಷ್ಣು ಸಹಸ್ರನಾಮ-ನಾರಾಯಣತತ್ವ	16-00
ಶ್ರೀ ಸೂಕ್ತ-ರಹಸ್ಯಾರ್ಥ ದೀಪಿಕಾ	8-00
ಪುರುಷ ಸೂಕ್ತ ರಹಸ್ಯ	12-00
ಸತ್ಸಂಗ	5-00
ಪ್ರಾಚೀನ ಭಗವದ್ಗೀತಾ	25-00
ಶ್ರೀ ಸಾಯಿನಾಥ ಚರಿತ್ರೆ	35-00
1999-ಕಲಿಯುಗಾಂತ್ಯ ಕಾಲಜ್ಞಾನ	30-00

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯ ಸೂಚಿ

ಅಧ್ಯಾಯ–1

ನಿಮ್ಮ ಹೆಸರಿನಿಂದ ನಿಮ್ಮ ಅದೃಷ್ಟ 1
ಬದಲಾಯಿಸಿಕೊಳ್ಳುವ ರಹಸ್ಯ ವಿಜ್ಞಾನ

ಅಧ್ಯಾಯ–2

ಅಂಕೆಗಳಲ್ಲಿ ಭವಿಷ್ಯ 13

ಅಧ್ಯಾಯ–3

ದೇಶಗಳ ಭವಿಷ್ಯತ್ತು–ಸಂಖ್ಯಾಶಾಸ್ತ್ರ 33

ಅಧ್ಯಾಯ-4

ಸಂಖ್ಯಾ ಜ್ಯೋತಿಷ್ಯ–ಆಧ್ಯಾತ್ಮಿಕ ವಿಜ್ಞಾನ 44

ಅಧ್ಯಾಯ–5

ನಿಮ್ಮ ಹೆಸರಿನಲ್ಲಿ ಅಂಕೆ ನಿಮ್ಮ ಅದೃಷ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಚೀನ ವಿಜ್ಞಾನವನ್ನು ವೈಜ್ಞಾನಿಕ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕಾದ ಸಂಸ್ಕಾರ, ಬುದ್ಧಿವಿಕಾಸವಿದ್ದು ಆಸಕ್ತಿ ಶ್ರದ್ಧೆಯಿದ್ದರೆ–ನಿಮ್ಮ ಮನೆಯ ಅಂಗಳದಲ್ಲಿ ತುಳಸೀ ಸಸಿಯಂತೆ ನಿಮ್ಮ ಮನೆಯಲ್ಲಿ ವಿಜ್ಞಾನವನ್ನು ಬೆಳೆಸಿಕೊಳ್ಳಬಹುದು. ಮನೆ-ಮನೆಗೂ ಒಂದು ದೀಪ-ವಿಜ್ಞಾನ ದೀಪ ಹಚ್ಚಬಹುದು.

—ಇ. ವೇದವ್ಯಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಈ ಗೋಚರ ಪ್ರಪಂಚವೆಲ್ಲಾ ಒಂದಾನೊಂದು 'ಅಗೋಚರ ಶಕ್ತಿ' ಯಿಂದ ನಡೆಸಲ್ಪಡುತ್ತಿದೆ. ಇದು ಇಂದಿನ ವಿಜ್ಞಾನ ಕಂಡು ಕೊಂಡ ವೈಜಾನಿಕ ಸತ್ಯ–ಆಂದರೆ, 'ಸೈಂಟಿಫಿಕ್ ಯಥಾರ್ಥ' (Scientific Fact).

ಈ ಗೋಚರ ಜಗತ್ತು ಎಲ್ಲಾ ಅಗೋಚರವಾದ 'ಪರಮಾತ್ಮ'ನಿಂದ ನಡೆಸಲ್ಪಡುತ್ತಿದೆ ! ಇದು, ಎಂದೋ ವೇದಗಳು ಕಂಡು ಕೊಂಡ ಆಥ್ಯಾತ್ಮಿಕ ಸತ್ಯ !

ಈ ಎರಡೂ ಸಮನ್ವಯ ದೃಷ್ಟಿಯಿಂದಗ್ರಹಿಸುವುದೇ ಜ್ಞಾನಿಯವೊಂದು ದೃಷ್ಟಿಪಥ ! ಎರಡಕ್ಕೂ, ವಿರೋಧಗಳನ್ನು ಕಲ್ಪಿಸಿಕೊಂಡು - ಮಾನವರನ್ನು ಎರಡು ವರ್ಗವಾಗಿ ಛೇದಿಸಿ ಪ್ರತ್ಯೇಕವಾದವನ್ನು ಸೃಜಿಸಿ 'ವರ್ಗಗಳಾಗಿ' ವಿಂಗಡಿಸಿ ಚಿತ್ರಿಸುವುದು ರಾಜಕೀಯ ದೃಕ್ಪಥ ! ಒಂದು ಮಾನವ ಕಲ್ಯಾಣಕ್ಕೆ ನಾಂದಿಗೀತೆ ಉಲಿದರೆ, ಮತ್ತೊಂದು ಮಾನವ ವಿನಾಶಕ್ಕೇ ದಾರಿತೆಗೆಯುತ್ತಿದೆ. ವಿಜ್ಞಾನಿ ವಿಜ್ಞಾನವನ್ನು ನೀಡುತ್ತಾನೆ–ರಾಜಕೀಯ ವ್ಯಕ್ತಿ ಅದನ್ನು ಅಣು ಬಾಂಬುಗಳನ್ನಾಗಿ ಮಾಡಿ ಮಾನವ ಕುಲವನ್ನು ಬೆದರಿಸುತ್ತಾ. ಆಳುತ್ತಾನೆ, ಮೆರೆಯುತ್ತಾನೆ - ಇತರರ ವಿನಾಶದ ಮೇಲೆ !

ಪ್ರಾಚೀನ ಋಶಿಗಳು ಕಂಡ .ವೇದಗಳಲ್ಲಿನ ವಿಜ್ಞಾನವನ್ನು ಇಂದಿನ (ಸೈನ್ಸ್‌ನಂತೆ) ಅಧ್ಯಯನ ಮಾಡಬೇಕೆಂದು -ಅದನ್ನು ಬೋಧಿಸುವ ಅಧ್ಯಾಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರನ್ನು ಸಕ್ರಿಯವಾಗಿ ರೂಪಿಸಬೇಕು ಅನ್ನೋ ಸಂಕಲ್ಪದಿಂದಲೇ ಈ 'ಯೋಗ ಮಿತ್ರ ಮಂಡಲಿ' ಹುಟ್ಟಿ ಕೊಂಟಿತು ! ಈ ವಿಜ್ಞಾನವನ್ನು ಎಲ್ಲರಿಗೂ ಅರ್ಥ ವಾಗುವ ರೀತಿ ತಲುಪಿಸಬೇಕು ಎಂದೇ ಕಳೆದ 40 ವರ್ಷಗಳ ನನ್ನ ಶ್ರಮ !

ಹೇಗಾದರೆ ಇಂದಿನ ವಿಜ್ಞಾನವನ್ನಾಗಲಿ, ಮತ್ತೆ ಯಾವ ಇತರ ವಿಷಯ (Subject) ವಾಗಲಿ ಸಕ್ರಿಯವಾಗಿ ಅರ್ಥೈಸಿಕೊಳ್ಳುವ ಅರ್ಹನಾದ (Qulified) ವ್ಯಕ್ತಿಗಳೇ ಹೇಗೆ ಹೇಳಬೇಕೋ ಹಾಗೆಯೇ ಹೇಳುವುದಕ್ಕೆ ಸಮರ್ಥರೋ (ಅರ್ಹರೋ) -ಪ್ರಾಚೀನ ವೇದ ಶಾಸ್ತ್ರಗಳು ಹೇಳಬೇಕೆಂದರೆ ಕೂಡ ಅನಕ್ಕೆ ಕ್ಯಾಲಿಫೈ (ಅರ್ಹ) ಆದವರೇ ಹೇಳಲು ಅಗತ್ಯ ! ಆದರೆ ಪ್ರಾಚೀನ ವಿಜ್ಞಾನವೆಂದರೇನೇ ತೆಗಳುವ ಈ ಕಾಲದಲ್ಲಿ 'ಅರ್ಹರಾದ' ಅಧ್ಯಾ ಪಕರು ಹೇಗೆ ಬರುತಾರೆ ? ನಮ್ಮ ಕಣ್ಣುಗಳನ್ನು ನಾವೇ ಇರಿದು ಕೊಂಡರೆ ಬೆಳಕು ಕಾಣದೆಂದು ಅತ್ತರೆ ಬೆಳಕಿನದೇ ದೋಷ ?

ಪ್ರಾಚೀನ ವಿಜ್ಞಾನವನ್ನು ವೈಜ್ಞಾನಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳ ಬೇಕಾದ ಸಂಸ್ಕರ, ಬುದ್ಧಿವಿಕಾಸ ಇದ್ದೂ ಆಸಕ್ತಿ ಶ್ರದ್ಧಾಲೋಪವಿಲ್ಲದೆ ಇದ್ದರೆ-ನೀವು ಅದನ್ನು ಅಧ್ಯಯನ ಮಾಡಬಹುದು ! ನಿಮ್ಮ ಅಂಗಳದಲ್ಲಿ ತುಳಸಿ ಸಸಿಯಂತೆ ನಿಮ್ಮ ಮನೆಯಲ್ಲಿ ವಿಜ್ಞಾನವನ್ನು ಬೆಳೆಸಿಕೊಳ್ಳಬಹುದು. ಇದಕ್ಕೆ ಯಾರಿಂದಲೂ ಏನೂ ಅಕ್ಷೇಪಿಸುವ ಅಗತ್ಯವಿಲ್ಲ. ಯಾರಿಗೆ ಯಾವ ಪ್ರಚಾರ ಉಪನ್ಯಾಸಗಳು ಕೊಡಬೇಕಾದುದಿಲ್ಲ. ಮನೆ ಮನೆಗೂ ಒಂದು ದೀಪ–ವಿಜ್ಞಾನ ದೀಪ ಹಚ್ಚಬಹುದು ; ಈ ಜಗವೇ ಆನಂದ ದೀಪಾವಳಿ ಮಾಡಿಕೊಳ್ಳಲೂಬಹುದು ನಿತ್ಯ. ಇದಕ್ಕಾಗಿ ಹೋರಾಟಗಳು, ಹಾರಟಗಳು, ಕ್ರಾಂತಿಗಳು, ರಕ್ತಪಾತಗಳು, ಉಗ್ರವಾದಿಗಳು, ನರರೂಪ ರಾಕ್ಷಸರು ಅಗತ್ಯ ವಿಲ್ಲ ! ಹೋರಾಡಬೇಕಾದ್ದು-ನಿನ್ನೊಂದಿಗೆನೆ ! ನಿನ್ನಲ್ಲಿನ ಮೂಢತ್ವ ದೊಂದಿಗೆನೆ ! ಇದು ಒಬ್ಬ ಮನುಷ್ಯ ಸೈನ್ಯದೊಂದಿಗೆ ನಡೆಯುವ ಯುದ್ಧ !

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪ್ರಾಚೀನ ವಿಜ್ಞಾನದಲ್ಲಿ ನಮಗೆ ನಿತ್ಯ ಜೀವನದಲ್ಲಿ ಉಪಯೋಗಕ್ಕೆ ಬರುವುದನ್ನು ಮೊದಲು ತೆಗೆದುಕೊಂಡಿದ್ದೇನೆ. ಏಕೆಂದರೆ-ಪ್ರತಿಯೊಬ್ಬರೂ ಅಶಾಂತಿ, ದುಃಖ, ಅನಾರೋಗ್ಯ, ಆರ್ಥಿಕ ತೊಳಲಾಟ, ಮನೆಯಲ್ಲಿ ಸಮಸ್ಯೆಗಳಿಂದ ನರಳಾಡುವವರೇ !-ಸಾಮಾನ್ಯ ಗೃಹಸ್ಥನಿಗೆ-ಬೇಕಾಗಿರುವುದು ಮೋಕ್ಷವಲ್ಲ. ಮೊದಲು ಸಮಸ್ಯೆಯ ನಿವಾರಣೆ !

ನಮ್ಮ ಸಮಸ್ಯೆಗಳಿಗೆ ಎದುರು ವ್ಯಕ್ತಿ ಕಾರಣ ಎಂದು ಬೊಟ್ಟು ಮಾಡಿ ತೋರಿದರೆ ಅದು ರಾಜಕೀಯ-ವರ್ಗ ಹೋರಾಟ. ಕೊನೆಯಿಲ್ಲದ ತೊಳಲಾಟ !

ಹಾಗಲ್ಲದೆ ನಮ್ಮ ಸಮಸ್ಯೆಗಳಿಗೆ ಕಾರಣ ಈ ಪಕೃತಿಯನ್ನು ನಡೆಸುವ ಕೆಲವು ವೈಜ್ಞಾನಿಕ ಸತ್ಯಗಳೆಂದು ಅವನ್ನು ತಿಳಿದುಕೊಳ್ಳದೆ ಕುರುಡಾಗಿ ಬಯಕೆಗಳು ಎತ್ತ ನಡೆಸಿದರೆ ಅತ್ತ ಹೋದರೆ, ಬರುವ ಫಲಗಳೇ-ಈ 'ಕಷ್ಟ ಗಳು', ಎಂದು ತಿಳಿಯುವುದೇ ಪ್ರಾಚೀನ ಮಹರ್ಷಿಗಳ ಜ್ಞಾನಕ್ಕೆ ಮೊದಲ ಮೆಟ್ಟಿಲು ಆದ್ಯತೆ !

ಅದು ಏನು ? ಯಾವ ಸೂತ್ರಗಳನ್ನು ನಾವು ನಿತ್ಯ ಜೀವನದಲ್ಲಿ ಅತಿ ಕ್ರಮಿಸುತ್ತಿದ್ದೇವೋ ? ಅವು ನಮ್ಮನ್ನು ಹೇಗೆ ಬಗ್ಗೆ ಬಡಿಯುತ್ತಿದೆ ಎಂದು ಯೋಚಿಸಬೇಕೆಂದರೆ ಚಿಂತನೆ ಸಾಲದು ! ಸ್ವಲ್ಪ ವಿಜ್ಞಾನ (Wisdom) ಬೇಕು ! ಅದು ನಿಮಗೆ ತಲುಪಿಸಿ-ಜೀವನಲ್ಲಿ ನಡೆದು ಹೋಗಲಿಕ್ಕೆ ಒಂದು ಕೈಗೋಲು-ಊರುಗೋಲಾಗಿ ಕೊಡುವುದೇ ಈ ನನ್ನ ಪ್ರಯಾಸ-ಪ್ರಯತ್ನ ಗಳಿಗೆ ಪ್ರಯೋಜನ.

ನೀವಿರುವ ಮನೆ, ನಿಮ್ಮ ಹೆಸರು, ನೀವು ಹೊರಡಲಿರುವ ಸಮಯ-ಈ ಮೂರು, ಮೂರು ಗಂಟುಗಳು-ನಿಮ್ಮ 'ಕರ್ಮ' ಸೂತ್ರವನ್ನು ಬಿಚ್ಚಿ ಕೊಳ್ಳಬೇಕೆಂದರೆ !

CC-O. In Public Domain. Digitized by eGangotri

ಒಂದು-'ವಾಸ್ತು' ಶಾಸ್ತ್ರ ತಿಳಿಸುವ ಸತ್ಯ. ಎರಡು-ನಿಮ್ಮ ಜೀವನದಲ್ಲಿ 'ಅದೃಷ್ಟ ಘಳಿಗೆ' ಯಾವಾಗ ಬರುತ್ತದೆ-ನಮಗೆ ಗೊತ್ತಿಲ್ಲದೇನೆ ಯಾವಾಗ ಅಳಿದು ಹೋಗುತ್ತಿವೆ ? ನಿದ್ದೆಯಲ್ಲೇ ? ಗೊಡ್ಡು ಕಾಲಹರಣದಲ್ಲೇ ? ವಿನೋದದಲ್ಲೇ ? ಎಂದು, ಕಾಲ ಕುರಿತು ತಿಳಿಸುವ 'ಕಾಲ-ವಿಜ್ಞಾನ' (Secret of Time).

ಮೂರನೆಯದು–ಸಂಖ್ಯೆಗಳು, ನಿಮ್ಮ ಜೀವನವನ್ನು ನಿಮ್ಮ ಜನ್ಮ ದಿನಾಂಕದಿಂದ ಹೇಗೆ ಪರಿಪಾಲಿಸುತ್ತದೆ ? ಅದನ್ನು ತಿಳಿಸುವ ವಿಜ್ಞಾನ ಎಲ್ಲಿ ? ಯಾವುದು ? ಯಾವ ಸಂಖ್ಯೆಗಳು ಎಂಥಕ ಪ್ರಭಾವವನ್ನು ಉಂಟಾಗಿಸುತ್ತದೆ ? ಯಾವ ಸಮಯದಲ್ಲಿ ಯಾವ ಯಾವ ಕೆಲಸಗಳು ಜರಗುತ್ತದೆ ? ಇದನ್ನು ತಿಳಿಸುವುದೇ ಸಂಖ್ಯಾ ಶಾಸ್ತ್ರ ! ಅದು ಬಜಾರಿನಲ್ಲಿ ದೊರೆಯುವ ಅಗ್ಗದ ಲಕ್ಕೀಚಾರ್ಟ್ಸ ಪುಸ್ತಕಗಳ ಮೂಲಕ ಸಿಗುವುದಿಲ್ಲ. ಪ್ರಾಚೀನ ಋಷಿಗಳು ರಹಸ್ಯವಾಗಿ ಕಾಪಾಡಿದ ವಿಜ್ಞಾನ ಇದು.

ಸಂಖ್ಯೆಗಳು ಮಾನವ ನಿರ್ಮಿತ ಅಲ್ಲವಲ್ಲ ! ಇವುಗಳಿಗೆ ಫಲಗಳೇನು ? ಅದು ನಾವು ಊಹಿಸಿಕೊಳ್ಳುವ ಮೂಢವಿಶ್ವಾಸ ಅಲ್ಲವೇ ? ಎಂದು ಪ್ರಶ್ನೆ ಹಾಕಿಕೊಳ್ಳಬೇಕು. ಅಂಕೆ (Numerals)ಗಳು, ಮಾನವ ಸಂಕೇತಗಳೇ! ರೋಮನರ ಅಂಕೆಗಳು (Roman Numerals) ಅರಬ್ಬರ ಅಂಕೆಗಳು, ತೆಲುಗು ಅಂಕೆಗಳು-ಕನ್ನಡ ಅಂಕೆಗಳು-ಹೀಗೆ ಇವು ಮಾನವ ನಿರ್ಮಿತಗಳು ! ಇವುಗಳಿಗೇನೂ ಪ್ರಭಾವವಿರುವುದಿಲ್ಲ. ಆದರೆ ಅಂಕೆ ಬೇರೆ ಸಂಖ್ಯೆ ಬೇರೆ !

ಅಂಕೆ ಸಂಕೇತ ಮೇಲೆ ಕಾಣಿಸುವ, ನಾವು ಏರ್ಪಡಿಸಿಕೊಂಡ ಗುರುತು. ಆದರೆ ಸಂಖ್ಯೆ ದೈವ ನಿರ್ಮಿತ-ಪ್ರಕೃತಿಯಲ್ಲಿ ಸಹಜವಾಗೇ ಏರ್ಪಟ್ಟಿದೆ ! ಸೃಷ್ಟಿಯೊಂದಿಗೆ -ಸಂಖ್ಯೆಗಳು ಬಂದುವು ! 'ಎರಡು' ವಸ್ತುಗಳು 'ಮೂರು'

Sri Vidyabharathi Book Centre, Sringeri

CC-O. In Public Domain. Digitized by eGangotri

ಹಣ್ಣುಗಳು-ಇವುಗಳ ಸಂಖ್ಯೆ (Number) ಇಲ್ಲವೆ ಅಳೆದರೆ ಕಾಣಿಸುವ ಪರಿಣಾಮ. ಎಲ್ಲ ದೇಶದ ಗಣಿತದಲ್ಲೂ ಒಂದೇ ! ಎಂತಲೇ ಭಾಷೆಗಳು ಬೇರೆ ಯಾದರೂ ಸಂಖ್ಯೆಗಳು ಎಲ್ಲ ದೇಶಗಳಿಗೂ ಒಂದೇ. ಈ ದೈವಿಕವಾದ ಸಂಖ್ಯೆ ಗಳಿಗೆ ನಮ್ಮ ಮೇಲೆ ಪ್ರಭಾವವಿರುತ್ತದೆ. ಸೃಷ್ಟಿಯಲ್ಲಿ ಎಲ್ಲದರ ಮೇಲೂ ಅವುಗಳ ಪ್ರಭಾವ ಇದ್ದಿರುವಂತೆಯೆ !

'ಸಂಖ್ಯೆಗಳು'—ಭಗವಂತನ ಕಸುಬುಗಾರಿಕೆ, ಎಂದಿದ್ದು ಹೇಳು ವುದಕ್ಕೇ ಇರಬೇಕು ವೇದದಲ್ಲಿ ನಾವು ನಿತ್ಯ ಪಾರಾಯಣ ಮಾಡುವ 'ಮಹಾ ರುದ್ರ'ದಲ್ಲಿ, ಸಂಖ್ಯೆಗಳನ್ನೇ, ಹೇಳುತ್ತಾ ಅಭಿಷೇಕ ಮಾಡುತ್ತಾರೆ.

'ಏಕಾಚಮೇ ದ್ವೇಚಮೇ' ಎಂದೂ

ಇನ್ನೂ 'ಚತುಶ್ಚತ್ವಾರಿಂಶಚ್ಚಮೇ (44) ಎನ್ನುತ್ತಾ

ಅಂಕೆಗಳನ್ನೇ ಹೇಳುತ್ತವೆ ವೇದ ಮಂತ್ರಗಳು. ಏಕೆಂದರೆ ಸಂಖ್ಯೆಗಳು ದೇವತೆಗಳು ! ವೇದದಲ್ಲಿ ವಿಗ್ರಹಾರಾಧನೆ ಇಲ್ಲ. ಸಂಖ್ಯೆಗಳೇ ದೇವತೆಗಳು. ಬೀಜಾಕ್ಷರಗಳೇ ಅವರನ್ನು ಕರೆದ ಹೆಸರುಗಳು ! ರೇಖಾಗಣಿತ (ಜ್ಯಾಮೆಟ್ರಿ) ಆಕಾರಗಳಾದ ತ್ರಿಭುಜ ವೃತ್ತದಲ್ಲಿ ಉಂಟಾಗುವ 'ಯಂತ್ರಗಳೇ' ಅವರನ್ನು ಆಕರ್ಷಿಸಿ ಸ್ಥಾಪಿಸುವ ಸಲಕರಣೆಗಳು (ಯಂತ್ರಗಳು-Machine)

ಹಾಗಾದರೆ ಸಂಖ್ಯೆಗಳು ಪ್ರಪಂಚವನ್ನೆಲ್ಲವನ್ನೂ ಕೂಡಾ ತನ್ನ ಪ್ರಭಾವ ದಿಂದ ಆಳ್ವಿಕೆ ನಡೆಸುತ್ತವೆಯೇ ? ಇದು ಗೊತ್ತಿಲ್ಲದೆನೇ ನಿತ್ಯ ಜೀವನದಲ್ಲಿ ಸಾಮಾನ್ಯವ್ಯಕ್ತಿ ತಾನೇ ತಂದು ಕೊಳ್ಳುವ 'ಕಷ್ಟಗಳಿಗೆ' ಅರ್ಥ ! ಅದನ್ನು ಅರಿತುಕೊಂಡು ಜೀವನವನ್ನು ಹಸನಾಗಿಸಿಕೊಳ್ಳುವುದು ಮಹರ್ಷಿಗಳ ಮಾರ್ಗ. ಕೈಕಟ್ಟಿಕೊಂಡು ಕಷ್ಟಗಳನ್ನು ಬೈಡು ಕೊಂಡರೆ, 'ಕರ್ಮ' ಎಂದು ಕೊಂಡರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಾನಸ್ಥನೆ ಅದಕ್ಕೆ ಕಾರಣ ಅಂದುಕೊಳ್ಳುವುದು, ಅದು ಸಾಮಾನ್ಯನ ಮಾರ್ಗ ! ಮತ್ತೆ ಇದಕ್ಕೆ ಕಾರಣ ಸಾಕ್ಷ್ಯಾಧಾರಗಳೇನು ? ಇತಿಹಾಸವೇ ರುಜು ವಾತು ! ಕಣ್ಣಿದೆಯೇ ವಿನಾ ನೋಡರು ಬಹಳ ಮಂದಿ. ಚರಿತ್ರೆಯನ್ನು ಅರ್ಥೈಸಿಕೊಳ್ಳಬೇಕು, ಪರಿಶೋಧಿಸಿ ಈ ಸಂಖ್ಯಾಶಾಸ್ತ್ರದ ಮುಖಾಂತರ ! ಅದರ ಸವಿ ಮುಂದಿನ ಅಧ್ಯಾಯದಲ್ಲಿ ನಿಮಗೆ ತೋರಿದ್ದೇನೆ. ಆದರೆ ಅಡಿಗೆ ಯನ್ನೆಲ್ಲ ನೀವೇ ಮಾಡಿಕೊಳ್ಳಬೇಕಾದ್ದೇ !

ಈಗಾಗಲೇ ಬಹಳ ಸಮಯ ಮಿಂಚಿಹೋಗಿದೆ. ಬಹಳಷ್ಟು ಹೇಳ ಬೇಕು. ನಿಮ್ಮ ಹೆಸರು, ಊರು, ಊರ ಹೆಸರು, ಜನ್ಮದಿನ-ಹೇಗೆ ಯಾವ ಯಾವ ಫಲಗಳನ್ನು ಕೊಡುತ್ತದೋ-ಅವುಗಳನ್ನು 'ನಂಬಿ' ಭಯಪಡುವ ಮೂಢವಿಶ್ವಾಸದಂತೆ ಆಗದೆ ಅವುಗಳನ್ನು ತಿಳಿದು ವಿನಿಯೊಗಿಸುವ 'ಯೋಗ ವಿಜ್ಞಾನ' ಬೇಕು !

ಬೆಂಕಿಯನ್ನು ನೀರನ್ನೂ ವಿದ್ಯುತ್ತನ್ನು ನೋಡಿ ಭಯಪಡ ಬೇಡಿ ! ವೈಜ್ಞಾನಿಕ ದೃಷ್ಟಿಯಿಂದ (ಈ ಕಾಲೇಜಿನಲ್ಲಿ ಹೇಳುವ ಸೈನ್ಸ್ ಅಲ್ಲ ಪ್ರಾಚೀನ ವೇದ ಋಷಿಗಳು ಕೊಟ್ಟ ವೈದಿಕ ವಿಜ್ಞಾನ (ಸೈನ್ಸ್) ದಿಂದ ಈ ಸಂಖ್ಯೆಗಳನ್ನು ಹೇಗೆ ವಿನಿಯಾಗಿಸಿಕೊಳ್ಳಬೇಕೋ ಹೇಳುತ್ತೇನೆ, ಅಲಿಸಿದರೆ ಮತ್ತೆ !

—ಇ. ವೇದವ್ಯಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಜನ್ಮ ದಿನಾಂಕದಲ್ಲಿ ನಿಮ್ಮ ಅದೃಷ್ಟ !

ನಿಮ್ಮ ಹೆಸರಿನಿಂದ ನಿಮ್ಮ ಅದೃಷ್ಟ ಬದಲಾಯಿಸಿಕೊಳ್ಳುವ ರಹಸ್ಯ ವಿಜ್ಞಾನ !

ಜ್ಯೋತಿಷ್ಯ, ಸಂಖ್ಯಾಶಾಸ್ತ್ರ, ಹಸ್ತ ಸಾಮುದ್ರಿಕದಂಥ ಪ್ರಾಚೀನ ಋಷಿಗಳ ವಿಜ್ಞಾನವನ್ನು 'ಮೂಢ ನಂಬಿಕೆಗಳು'—ಎಂಬ ಒಂದು ಪ್ರಚಾರದ ಮಾತಿನಿಂದ ಹೊಡೆದು ಬಿಸಾಡಬೇಕು ಎಂದು–ನಾಸ್ತಿಕ ಪ್ರಚಾರ ಮಾಡುವ ಕೆಲವರ ವಿಮರ್ಶೆ ವಿಚಿತ್ರವಾಗಿರುತ್ತದೆ. ಇವು ಮೂಢ ನಂಬಿಕೆಯೋ, ನಿಜವಾಗಲೂ ಸತ್ಯವೋ, ಪ್ರಚಾರದಿಂದ ನಿರ್ಧಾರವಾಗುವುದಿಲ್ಲ ! ನಿನಾದದಿಂದ ಸ್ಪಷ್ಟವಾಗುವುದಿಲ್ಲ ! ಮತ್ತೆ ಯಾವುದರಿಂದ ನಿರ್ಧಾರವಾಗುತ್ತದೆ ?

ಇದು ಕೇವಲ ಪರಿಶೋಧನೆ (Research) ಯಿಂದಲೇ ನಿರ್ಧಾರವಾಗುತ್ತದೆ. ಈ ಪ್ರಾಚೀನ ವೇದ ಶಾಸ್ತ್ರದಲ್ಲಿನ ಸತ್ಯವನ್ನು ಇತಿಹಾಸದಲ್ಲಿ ಸತ್ಯವಾಗಿ ನಡೆದ ಸಂಘಟನೆಗಳೊಂದಿಗೆ ಸರಿಹೋಲಿಸಿ ನೋಡದ ಹೊರತು ಇದು ನಿರ್ಧರಿತವಾಗಿ ಸ್ಪಷ್ಟವಾಗುವುದಿಲ್ಲ ! ಮಾಡಿ ತಿಳಯೋಣ !

ಅದನ್ನೇ ಈಗ ಮಾಡೋಣ !

ಚರಿತ್ರೆಯಲ್ಲಿನ ಸಂಘಟನೆಗಳು ಯಾರೂ ಕಲ್ಪಿಸಿದಲ್ಲ. ಆದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಂದ 'ಕುರುಡು ನಂಬಿಕೆ' ಅನ್ನೋ ವಿಮರ್ಶೆಗಳಿಗೆ ಆಸ್ಪದವಿಲ್ಲದಂತೆ ಸತ್ಯವಾಗಿ ನಡೆದ ಚರಿತ್ರೆಯಲ್ಲಿನ ಸಂಘಟನೆಗಳನ್ನೇ ಇಲ್ಲಿ ತೆಗೆದುಕೊಳ್ಳೋಣ! ಮೊದಲು ಸಂಖ್ಯಾ ಜ್ಯೋತಿಷ್ಯ (Astro Numeralogy) ಅಂದರೆ ಏನೆಂದು ಪರಿಶೀಲಿಸೋಣ.

ಸಂಖ್ಯಾಶಾಸ್ತ್ರ

ಜ್ಯೋತಿಷ್ಯದಿಂದಲೇ ಸಂಖ್ಯೆಗಳ ಮೂಲಕ ಕೂಡಾ ಗ್ರಹಗಳ ಒಂದು ಪ್ರಭಾವ ಹೇಗೆ ಕಾರ್ಯ ನಿರ್ವಹಿಸುತ್ತದೋ ತಿಳಿಸುವುದೇ ಈ ಸಂಖ್ಯಾ ಶಾಸ್ತ್ರ !

ಈ 'ಸಂಖ್ಯಾಶಾಸ್ತ್ರ' ಪ್ರಕಾರ 1 ರಿಂದ 9ರವರೆಗೂ ಇರುವ ಅಂಕೆಗಳು ಒಂಬತ್ತು ಗ್ರಹಗಳ ಪ್ರಭಾವವನ್ನು ನಮ್ಮ ನಿತ್ಯ ಜೀವನದಲ್ಲಿ ಬ್ರತಿಫಲಿಸುತ್ತದೆ. ಅದು ಹೇಗೆಂದರೆ–ಪ್ರತಿ ಅಂಕೆಗಳಿಗೂ ಅದರೊಂದಿಗೆ ಸಂಬಂಧಿಸಿದ ಗ್ರಹಗಳಿಗಿರುವ ಹೋಲಿಕೆಗಳಿಂದ ಯಾವ ಸಂಖ್ಯೆ ಯಾವ ಗ್ರಹದ ಒಂದು ಫಲವನ್ನು ನೀಡುತ್ತದೋ ಅದು, ಈ ಕೆಳಗೆ ತೋರಿಸಲಾಗಿದೆ.

1—(4)	= ಸೂರ್ಯ
2—[7]	= ಚಂದ್ರ
3	= ಗುರು
5	= ಬುಧ
6	= ಶುಕ್ರ
8	= ಶನಿ
9	= ಕುಜ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲಿನ ಸಂಖ್ಯೆಗಳಲ್ಲಿ ಒಂದೊಂದು ಗ್ರಹಗಳಿಗೆ ಒಂದೊಂದು ಅಂಕಿ ಮಾತ್ರವೇ ಕೊಡಲಾಗಿದೆ. ಆದರೆ ಸೂರ್ಯನಿಗೆ, ಚಂದ್ರನಿಗೆ ಮಾತ್ರವೇ ಎರಡು ಅಂಕಿಗಳು ಹೇಳಲಾಗಿದೆ ಏಕೆ ? ಇದರಲ್ಲಿ ಒಂದು ಹುಣ್ಣಿಮೆ ಚಂದ್ರನಿಗೆ ; ಎರಡನೆಯದು ಅಮಾವಾಸ್ಯೆಯ ಚಂದ್ರನಿಗೆ ! ಹಾಗೆಯೇ ಒಂದು ಹಗಲು ಸೂರ್ಯನಿಗೆ, ಮತ್ತೊಂದು ರಾತ್ರಿ ಕಾಲದಲ್ಲಿನ ಸೂರ್ಯನ ಪ್ರಭಾವಕ್ಕೆ, ಸಂಕೇತಗಳನ್ನಾಗಿ ಕೊಡಲಾಗಿದೆ ಎಂದಾಯಿತು !

ಮಾನವ ಜೀವನದಲ್ಲಿ ಸಂಖ್ಯೆಗಳು

ಈ 'ಸಂಖ್ಯೆಗಳು' ಒಬ್ಬ ಮನುಷ್ಯನ ಜೀವನವನ್ನು ಹೇಗೆ ಪ್ರಭಾವಿತ ಗೊಳಿಸುತ್ತದೆ ? ಎಂಬ ವಿಷಯವನ್ನು ಕೇವಲ ಚರ್ಚೆಗಳಿಂದ, ವಾದಗಳಿಂದ ನಿರ್ಧರಿಸುವುದಲ್ಲದೆ ಯಥಾರ್ಥವಾದ ಜೀವನದಲ್ಲಿ 'ಸಂಘಟನೆಗಳ' ಪರಿಶೀಲನೆಯಲ್ಲಿ ಒಂದು ವಿಜ್ಞಾನ (ಸೈನ್ಸ್) ಪರಿಶೋಧನೆಯಾಗಿ ಪರಿಶೀಲಿಸೋಣ.

ಇಂಗ್ಲೆಂಡ್ ಇತಿಹಾಸದಲ್ಲಿ—ಸಂಖ್ಯೆಗಳು

ಇದರಲ್ಲಿ ಮೊದಲನೆಯದು ಇಂಗ್ಲೆಂಡನ್ನು ಆಳಿದ 'ಎಡ್ವರ್ಡ್-VII ಚಕ್ರವರ್ತಿ, ಜಾತಕ !' ಈತನ ಜೀವನದಲ್ಲಿ ಅಂಕೆಗಳ ಪ್ರಭಾವ ಹೇಗೆ ಕಾರ್ಯ ಮಾಡಿತೋ ಉದಾಹರಣೆಯಾಗಿ ನೋಡಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಪ್ತಮ ಎಡ್ವರ್ಡ್ VII

ಈತ ವಿಕ್ಟೋರಿಯಾ ಮಹಾರಾಣಿಯ ಪುತ್ರ. ಭಾರತ ದೇಶವನ್ನು ಆಳಿದ ಇಂಗ್ಲೀಷ್ ಚಕ್ರವರ್ತಿ. ಈತನು ನವೆಂಬರ್ ಒಂಬತ್ತು ಹದಿನೆಂಟು ನೂರ ನಲವತ್ತೊಂದರಲ್ಲಿ (9-11-1841) ಜನಿಸಿದ.

ಸಂಖ್ಯಾಶಾಸ್ತ್ರದಿಂದ ನೋಡಿದರೆ ಈತನ 'ಜನ್ಮ ಸಂಖ್ಯೆ'ಗೆ ಅಧಿಪತಿ (ಕುಜ). ಈತ ಹುಟ್ಟಿದಾಗ ಆಲ್ಬರ್ಟ್ ಎಡ್ವರ್ಡ್ (ALBERT EDWARD) ಅಂತ ಹೆಸರಿಟ್ಟರು. ಸಂಖ್ಯಾ ಶಾಸ್ತ್ರ ಪ್ರಕಾರ ಹೆಸರಿನಲ್ಲಿನ ಅಕ್ಷರಗಳು ಕೂಡಾ ಹುಟ್ಟಿದ ದಿನಾಂಕದಂತೆಯೇ ಕಾರ್ಯ ನಿರ್ವಹಿಸುತ್ತದೆ. ಆದ್ದರಿಂದ ಈತನ ಹೆಸರು ಆಲ್ಬರ್ಟ್ (ALBERT)ನಲ್ಲಿ ಆರು ಅಕ್ಷರಗಳೂ ಹಾಗೆಯೇ ಎಡ್ವರ್ಡ್ (EDWARD)ನಲ್ಲಿಯೂ 6 ಅಕ್ಷರಗಳೂ ಕೂಡಿವೆ. ಆದ್ದರಿಂದ ಹೆಸರಿನಲ್ಲಿ ಆರು (6) ಸಂಖ್ಯೆ ಕೆಲಸ ಮಾಡುತ್ತದೆ. ಹುಟ್ಟಿದ ದಿನಾಂಕದಲ್ಲಿ ಒಂಬತ್ತು (9) ಸಂಖ್ಯೆ ಕೆಲಸ ಮಾಡುತ್ತದೆ. ಅವು ಹೇಗೆ ಕಾರ್ಯ ನಿರ್ವಹಿಸುತ್ತದೋ ನೋಡೋಣ.

ಈತನು 'ವೇಲ್ಸ್' ಯುವರಾಜನಾಗಿ ಮೊಟ್ಟ ಮೊದಲು ಮಾಡಿದ ರಾಜಕೀಯ ಪರ್ಯಟನೆ ಕೆನಡಾ (Canada)ದಲ್ಲಿ ; ಇದರಲ್ಲಿಯೂ ಕೂಡ ಆರು ಅಕ್ಷರಗಳೇ ಇವೆ. ಹಾಗೆಯೇ ನಂತರ ಯುನೈಟೆಡ್ ಸ್ಟೇಟ್ಸ್ (United States)ಗೆ ಹೋದ. ಅದರಲ್ಲೂ ಕೂಡಾ ಎರಡು ಹೆಸರುಗಳಲ್ಲಿ ಆರಾರು ಅಕ್ಷರಗಳು (ALBERT+EDWARDನಲ್ಲಿ) ಹಾಗೆಯೇ 6 ಅಂಕೆಗಳಿವೆ. ಈ ಪರ್ಯಟನೆ ಮಾಡಿದ ವರ್ಷ ಕೂಡಾ 1860ರಲ್ಲಿಯೇ ಇದನ್ನು ಸಂಖ್ಯಾಶಾಸ್ತ್ರ ಪ್ರಕಾರ ಬೆಲೆ ಕಟ್ಟಿದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

1860 = 1+8+7+0 = 15, 1+5 = 6 ಹುಟ್ಟಿದ ಸಂವತ್ಸರದಲ್ಲೂ ಕೂಡಾ ಈ 6 ಅಂಕೆ ಪ್ರಭಾವವೇ ಕಾಣಿಸುತ್ತದೆ.

ಈತನ ಜೀವನದಲ್ಲಿ ನಂತರ ನಡೆದ ಮುಖ್ಯವಾದ ಸಂಘಟನೆ. 1863ರಲ್ಲಿ 'ಅಲೆಗ್ಜಾಂಡ್ರಾ' ರಾಜಕುಮಾರಿಯೊಂದಿಗೆ ವಿವಾಹ ನಡೆಯಿತು. ಇದರಲ್ಲಿ ಈತನ ಹುಟ್ಟಿದ ದಿನಾಂಕದ ಪ್ರಭಾವ 9 ಹೀಗೆ ತೊರಿಸಿತು. ಮದುವೆಯಾದ ಸಂವತ್ಸರದಲ್ಲಿ 9 ಸಂಖ್ಯೆ ಬಂದಿತು. ಹೀಗೆ—

1863 = 1+8+6+3 = 18, 1+8 = 9

ಈತನ ಮಡದಿಯ ಹೆಸರು 'ಅಲೆಗ್ಜಾಂಡ್ರಾ' (Alexandra)ದಲ್ಲೂ =9 ಅಕ್ಷರಗಳೇ ! ಈಕೆ ಡೆನ್ಮಾರ್ಕ್ ರಾಜ ಕ್ರೈಶ್ಚಿಯನ್ ಒಬ್ಬನ ಮಗಳು. ಈತನ ಹೆಸರಿನಲ್ಲೂ ಕೂಡಾ 9 ಅಕ್ಷರಗಳೇ. ಈತನಿಗೆ ಕ್ರೈಶ್ಚಿಯನ್ (Christian) 9 ಅಕ್ಷರಗಳು ಎಂದು ಇದ್ದುದರಿಂದ ಮತ್ತೊಂದು ಒಂಬತ್ತು ಅಂಕೆ ಕೂಡ ಸೇರಿದಂತಾಯಿತು.

ಇನ್ನೊಂದು ವಿಸ್ಮಯ, ಎಡ್ವರ್ಡ ಚಕ್ರವರ್ತಿ ಯುವರಾಜನಾಗಿದ್ದಾಗ 1869ರಲ್ಲಿ ಈಜಿಪ್ಟಿಗೆ ಪರ್ಯಟನೆ ಹೊರಟ. ಇದರಲ್ಲಿಯೂ ಕೂಡಾ (1+8+6+9 = 24 = 2+4 = 6) ಆರು ಸಂಖ್ಯೆಯೇ ಬರುತ್ತದೆ. ಈತನ ಜಾತಕದಲ್ಲಿ ಹೀಗೆಯೇ 6, 9 ಅಂಕೆಗಳ ಪ್ರಭಾವ ಕಂಡುಬರುತ್ತದೆ. ಪರ್ಯಟಿಸಿದ ದೇಶ ಈಜಿಪ್ಟ್‌ನಲ್ಲಿ (Egypt) ಸೂಯೆಜ್ ಕೆನಾಲ್ (Suez Canal) ಈ ಹೆಸರಿನಲ್ಲಿಯೂ ಕೂಡಾ ಒಂಬತ್ತು (9) ಅಕ್ಷರಗಳೇ ಇವೆ. ಈ ಪರ್ಯಟ ನೆನಡೆದ ಸರಿಯಾಗಿ 6 ವರ್ಷಗಳಿಗೆ ಸೂಯಜ್‌ನ್ನು ಇಂಗ್ಲೆಂಡ್ ವಶಪಡಿಸಿಕೊಂಡಿತು. ಇದು ಕೂಡಾ ಆಗಿದ್ದು 1890ರಲ್ಲೇ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಂವತ್ಸರದ ಮೌಲ್ಯ ಕೂಡಾ 1+8+9+0=1+8+9 ಒಂಬತ್ತೇ ! ಆಶ್ಚರ್ಯ !

ನಂತರ ಕೂಡಾ 1899ನೇ ವರ್ಷದಲ್ಲಿ 'ಎಡ್ವರ್ಡ್'ನನ್ನು ಹತ್ಯೆ ಮಾಡಬೇಕೆಂದು 'ಸಿಪಿಡೋ' (Sipido) ಎಂಬ ಹಂತಕನು ತುಪಾಕಿ ಸಿಡಿಸಿದ. ಆದರೆ ಇದರಲ್ಲಿನ (6, 9) ಸಂಖ್ಯೆಗಳ ಪ್ರಭಾವ ಈತನನ್ನು ಕಾಪಾಡಿತು. ಅದು ಹೇಗೆಂದರೆ 1899=1+8+9+9=27 2+7 =9. ಇದು ನಡೆದ ಎರಡು ವರ್ಷಗಳ ನಂತರ ಅಂದರೆ 1901ರಲ್ಲಿ ವಿಕ್ಟೋರಿಯಾ ಮಹಾರಾಣಿ ಗತಿಸಿದಳು. ತತ್ಫಲವಾಗಿ ಆಲ್ಲಿಯವರೆಗೂ ಯುವರಾಜನಾಗಿದ್ದ ಎಡ್ವರ್ಡ್‌ಗೆ ಚಕ್ರವರ್ತಿ ಆಗುವ ಆರು (6) ಸಂಖ್ಯೆಯನ್ನೇ ಹೊಂದಿದೆ, ಏಕೆಂದರೆ 1841ರಲ್ಲಿ ಹುಟ್ಟಿದ್ದ ಎಡ್ವರ್ಡ್‌ನಿಗೆ 1901ಕ್ಕೆ ಸರಿಯಾಗಿ 60 ಸಂವತ್ಸರಗಳು, (6+6=6) ಬಂದುವು.

ಈ ಮಧ್ಯದಲ್ಲಿ 'ಬೋಯರ್' ಯುದ್ಧ 1899ರಲ್ಲಿ ಪ್ರಾರಂಭವಾಗಿ ಮೂರು ವರ್ಷಗಳ ಕಾಲ ಅಂದರೆ 1902ರವರೆಗೂ ನಡೆಯಿತು. ಈ ಯುದ್ಧ ದಿಂದ 'ಎಡ್ವರ್ಡ್'ಗೆ ಜರುಗಬೇಕಾದ ಪಟ್ಟಾಭಿಷೇಕ ಇದರಿಂದಾಗಿ ಮೂರು ವರ್ಷ ಮುಂದೂಡಲ್ಪಟ್ಟಿತು ! ಜಾತಕದಲ್ಲಿ ಈ ಬದಲಾವಣೆ ಹೇಗೆ ಏರ್ಪ ಟ್ಟಿತೋ ಆಶ್ಚರ್ಯ ಉಂಟಾಗುತ್ತದೆ.

1899= 1+8+9+ 9=27, 2+7=9
(ಬೋಯರ್ ಯುದ್ಧ ಪ್ರಾರಂಭ)
1902=60 ವರ್ಷ ವಯಸ್ಸು=1+9+0+2=12=
1+2=3

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದರೆ ಈ ಸಂವತ್ಸರದ ಹೊತ್ತಿಗೆ 60 ವರ್ಷ ಪೂರೈಸಿಕೊಂಡ ಸಂವತ್ಸರ ಕೂಡಿಸಿರೆ $60+3=9$.

ಈತ ಚಕ್ರವರ್ತಿಯಾಗುವ ದಿನಕ್ಕೆ 60 ವರ್ಷ ಪೂರ್ತಿಯಾದ್ದರಿಂದ (6) ಸಂಖ್ಯೆಯೊಂದರ ಅದೃಷ್ಟವನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ. ಈತನ ಹುಟ್ಟಿದ ಹೆಸರು 'ಆಲ್ಬರ್ಟ್' ಅನ್ನೋ ಹೆಸರು ಬಿಟ್ಟು ಎಡ್ವರ್ಡ್ (Edward) ಎಂಬ ಚಕ್ರವರ್ತಿ ಬಿರುದು ನೀಡಿಕೆಯಲ್ಲಿ (ಆರು) 6 ಅಕ್ಷರಗಳು ಕೂಡಿರುವ ಹೆಸರು ಏರ್ಪಟ್ಟಿತು.

ಪಟ್ಟಾಭಿಷೇಕದಲ್ಲಿ ನಡೆದ ವಿಚಿತ್ರ

ಪಟ್ಟಾಭಿಷೇಕ ಮಾಮೂಲಾಗಿ ಅಂದುಕೊಂಡ ಸಮಯಕ್ಕೆ ನಡೆಯಲಿಲ್ಲ. ಅದು ಮೊದಲು ದಿನಾಂಕ 28, ಜೂನ್‌ನಲ್ಲಿ ನಿಶ್ಚಯಿಸಲಾಗಿತ್ತು. ಆದರೆ ಸರಿಯಾಗಿ ಅದಕ್ಕೆ ನಾಲ್ಕು ದಿನಗಳ ಮೊದಲು ಅಂದರೆ 24ರಲ್ಲಿ 'ಎಡ್ವರ್ಡ್'ಗೆ ತೀವ್ರವಾದ ಕಾಯಿಲೆಯಾಗಿ ಸಾವು ಬದುಕಿನ ಮಧ್ಯೆ ಇರುವಾಗ ಈ ಪಟ್ಟಾಭಿಷೇಕ ಮುಂದಕ್ಕೆ ಹಾಕಲಾಯಿತು. ಅದರಲ್ಲೂ ಈ ಸಂಖ್ಯೆಗಳೇ ಕಂಡು ಬರುವುದು ವಿಚಿತ್ರ ! ಜೂನ್ ಕೂಡಾ 6ನೇ ತಿಂಗಳೇ ! ಹಾಗೆಯೇ ಈತನು ಕಾಯಿಲೆ ಬಿದ್ದ ದಿನಾಂಕ $24=2+4=6$, ಪುನಃ ಸರಿಯಾಗಿ 24ನೇ ದಿನಾಂಕ ಈತನ ಶ್ವಾಸಕೋಶಗಳಿಗೆ ಆಪರೇಷನ್ ಆಗಿ, ಬದುಕಿ ಪಾರಾದ. ಈ ಗಂಡಾಂತರದಿಂದ ಪಾರಾದ ಚಕ್ರವರ್ತಿಗಾಗಿ ಬ್ರಿಟಿಷ್

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಭುತ್ವ ಈ ಪಟ್ಟಾಭಿಷೇಕಕ್ಕೆ ಪ್ರತ್ಯೇಕ ಜ್ಯೋತಿಷ್ಯರನ್ನು ಕಂಡು ಚರ್ಚಿಸಿ ಮುಹೂರ್ತ ಇಡಿಸಿದರು.

ಇಂಗ್ಲೀಷ್ ಜ್ಯೋತಿಷಿ ಅನೇಕ ಸಾಮುದ್ರಿಕ ಗ್ರಂಥಗಳನ್ನು ಬರೆದ 'ಕೀರೋ' (CHEIRO) ಕೈಯಿಂದ ಈ ಎರಡನೇ ಬಾರಿ ಪಟ್ಟಾಭಿಷೇಕಕ್ಕೆ ಮುಹೂರ್ತ ಇಡಿಸಿದರು. ಆಗಸ್ಟ್ 9, 1902ರಲ್ಲಿ ! ಇದರಲ್ಲೂ ಕೂಡಾ ಮತ್ತೆ ಅದೇ ಸಂಖ್ಯೆಗಳು ಅಂದರೆ ದಿನಾಂಕದಲ್ಲಿ 9, 1902ರಲ್ಲಿ ! ಇದರಲ್ಲೂ 60 (ಹಾಗೆ ಎರಡು ಸಾರಿ 6 ಸಂಖ್ಯೆ ಈತನ ಹೆಸರಿನಲ್ಲಿರುವ ಅಕ್ಷರಗಳು (6) ಕಡೆಗೇ ಈತ ಚಕ್ರವರ್ತಿಯಾಗಿ ಆಳ್ವಿಕೆ ನಡೆಸಿದ್ದು ಕೂಡಾ 9 ವರ್ಷಗಳೇ !

ತನ್ನ ಜೀವನವನ್ನು ಆಳದ ಅಂಕೆ 6 ಅದರೊಂದಿಗೆ 9 ಈ ಎರಡು ಸಂಖ್ಯೆಗಳೂ, ಮೊಟ್ಟ ಮೊದಲ ಬಾರಿಗೆ ಹತ್ತಿರಕ್ಕೆ ಬಂದಿದ್ದು ಈತನ 69ನೇ ಸಂವತ್ಸರದಲ್ಲೆನೆ ! ಆ ಸಂವತ್ಸರವೇ ಆತನು ಮರಣಿಸಿದ. ಇದು ಸರಿಯಾಗಿ ಪಟ್ಟಾಭಿಷೇಕವಾದ 9ನೇ ಸಂವತ್ಸರ ಆದುದು ಮತ್ತೂ ಸೋಜಿಗ ! ಇದೆಲ್ಲಾ ಅಂಕೆಗಳಲ್ಲಿ ಕೆಲಸ ಮಾಡುವ ಶಕ್ತಿ ಅಂದುಕೊಂಡರೂ, ಈ ಸಂಖ್ಯಾಶಾಸ್ತ್ರ ಮೂಢನಂಬಿಕೆ ಎಂದುಕೊಂಡರೂ-ನೀಲಿನ ಚಾರಿತ್ರಿಕ ಸತ್ಯವನ್ನು ಮಾತ್ರ ಯಾರೂ ಅಲ್ಲವೆನ್ನಲಾರರು !

Sri Vidyabharathi Book Centre, Sringeri

CC-O. In Public Domain. Digitized by eGangotri

ಫ್ರೆಂಚ್ ರಾಜ ಹೆನ್ರೀನವಾರೇ

ಫ್ರಾನ್ಸನ್ನು ಆಳಿದ ಹೆನ್ರೀ IV ನಿಜವಾದ ಹೆಸರು ಹೆನ್ರೀನವಾರೇ. ಆತನ ಜಾತಕ ಕೂಡಾ ಸಂಖ್ಯಾಶಾಸ್ತ್ರ ರೀತ್ಯ ಒಳ್ಳೆ ಶಾಸ್ತ್ರೀಯವಾದ ರುಜುವಾಗಿ ದೃಢಪಡುತ್ತದೆ.

ಈತನ ಹೆಸರಿನಲ್ಲಿ 14 ಅಕ್ಷರಗಳಿವೆ–(Henry De Bourton ಹುಟ್ಟಿದ ಹೆಸರು). ಅದರ ಜೊತೆಗೆ ಈತನು ಅದೇ 14ನೇ ತಾರೀಖಿನಲ್ಲಿ ಜನಿಸಿದ.

ಸಂಖ್ಯಾಶಾಸ್ತ್ರ ಪ್ರಕಾರ ನೋಡಿದರೆ 14-12-1553 ಸೇರಿಸಲು 1553 = 1+5+5+3 = 14 (i) ಸಂವತ್ಸರಕ್ಕೆ 14 ಅಂಕೆ (ii) ಹುಟ್ಟಿದ ದಿನಾಂಕ ಕೂಡಾ–14 (iii) ಹೆಸರಿನಲ್ಲಿ 14 ಅಕ್ಷರಗಳಿವೆ. ಆದ್ದರಿಂದ ಅದೃಷ್ಟ ಸಂಖ್ಯೆ ಇಲ್ಲವೇ 'ಕರ್ಮ ಫಲಪ್ರದ' (Fadic Number) 14 ಆಗಿದೆ !

ಈತನ ಹೆಂಡತಿ ಮಾರ್ಗರೆಟ್ ಹುಟ್ಟಿದ್ದು ಕೂಡಾ ಮೇ 14.

ಈತನು A.D.ಯಿಂದ ಪ್ರಾರಂಭಿಸಿದ 1400 ಶತಾಬ್ದಗಳು

140 ದಶಾಬ್ದಗಳು,

14 ಸಂ. ಗಳು.

ಅಂದರೆ 1554ರ ಸಂವತ್ಸರದಲ್ಲೇ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಾಭಿಷೇಕ

ಈತ ರಾಜನಾಗಿ ಪಟ್ಟಾಭಿಷಿಕ್ತನಾಗಿದ್ದಾಗ ತನ್ನ ಹೆಸರಿನಲ್ಲಿ 4 ಸಂಖ್ಯೆಗಳನ್ನು ಕೂಡಿಸುತ್ತಾ 'ಹೆನ್ರೀ–IV' ಅನ್ನೋ ಹೆಸರು ಧರಿಸಿದರಿಂದ–4 ಸಂಖ್ಯೆ ಕೂಡಾ ಈತನ ಜಾತಕದಲ್ಲಿ ತನ್ನ ಪ್ರಭಾವ ತೋರಿಸಿತು.

ಹೆನ್ರೀ ಆಳ್ವಿಕೆಯಲ್ಲಿ ನಡೆದ ದಂಗೆಯನ್ನು ಅಡಗಿಸಿ ಯುದ್ಧದಲ್ಲಿ ಗೆದಿದ್ದು ಕೂಡಾ 14 ಮಾರ್ಚ್‌ನಲ್ಲಿ 'ಐವ್ರೀ' (Ivry) ಎಂಬ ನಗರ ಸಮೀಪ. (ಅಕ್ಷರಗಳು IVRYನಲ್ಲಿ ನಾಲಕ್ಕು, ಹೆನ್ರೀ IV ಕೂಡಾ ಜೊತೆಯಾಯಿತು) ಈತ ತನ್ನ ಮೊದಲನೇ ಹೆಂಡತಿ ಮಾರ್ಗರೇಟ್‌ಗೆ ವಿಚ್ಛೇದನ ನೀಡಿ 'ಮೇರಿ-ಡಿ-ಮೆಡಿಸೀನ್'ನನ್ನು ಮದುವೆ ಮಾಡಿಕೊಂಡ. ಇದರಲ್ಲಿಯೂ ಕೂಡಾ 14 ಸಂಖ್ಯೆಯೊಂದರ ಪ್ರಭಾವವೇ ಕಂಡು ಬರುತ್ತದೆ. ಏಕೆಂದರೆ ಈತನ ಮೊದಲ ಹೆಂಡತಿ ಹುಟ್ಟಿದ್ದು 14ನೇ ದಿನಾಂಕದಲ್ಲೇ. ಈತನ ಜೀವನದ ಮೇಲೆ ,ಕೆಲಸ ಮಾಡಿದ ಸಂಖ್ಯೆ 4 14 = 56 ಆಗುತ್ತದೆ. ಸರಿಯಾಗಿ ಆಕೆಗೆ 56 ವರ್ಷ ತುಂಬಿದ ಕೂಡಲೇ ವಿಚ್ಛೇಧನ ಉಂಟಾಯಿತು.

ಎರಡನೇ ಮಡದಿ ಮೇರಿ ಹೆಸರಿನಲ್ಲೂ ಕೂಡಾ 14 ಅಕ್ಷರಗಳೇ (Marie de Medicis) ಇದುದು ಮತ್ತೂ ವಿಚಿತ್ರ.

ಈತ ತನ್ನ ಜೀವನವನ್ನು ಹಿಂಬಾಲಿಸುತ್ತಿದ್ದ 14 ಸಂಖ್ಯೆಯನ್ನು ತಪ್ಪಿಸಿಕೊಳ್ಳಬೇಕೆಂದು ಈ ಎರಡನೇ ಪತ್ನಿಯನ್ನು ರಾಣಿಯಾಗಿ ಅಭಿಷೇಕ ಸಲಿಕ್ಕೆ, 14ನ್ನು ತಪ್ಪಿಸಿ ಮೇ 13ರಂದು ಏರ್ಪಾಡು ಮಾಡಿದಬೇಕಂತಲೇ !

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕೆ ಪ್ಯಾರೀಸ್ (Paris) ರಾಜಧಾನಿಯಲ್ಲಿ 16ಕ್ಕೆ ಪ್ರವೇಶಿಸುವಂತೆ ವ್ಯವಸ್ಥೆ ಮಾಡಿದ! ಅಂದುಕೊಂಡ ಹಾಗೆ ಆಕೆ ಪಟ್ಟದ ರಾಣಿ ಅಭಿಷೇಕ 13ಕ್ಕೆ ಮುಗಿಯಿತು! ಇನ್ನು ರಾಣಿ 16ಕ್ಕೆ ರಾಜಧಾನಿಗೆ ಬರಬೇಕು. ಸಂತೋಷದಿಂದ ಆ ದಿನ ಮಧ್ಯಾಹ್ನ ಒಬ್ಬ ಗೆಳೆಯನ ಮನೆಯ ಸಮಾರಂಭದಲ್ಲಿ ಪಲ್ಗೊಂಡು ಹಿಂದಿರುಗಿ ಬರುತ್ತಿರುವಾಗ ತಿರುವಿನಲ್ಲಿದ್ದ ಮನೆಯಿಂದ ಥಟ್ಟನೆ ಹೊರಬಂದ ವ್ಯಕ್ತಿಯಿಂದ ರಾಜ ಹತ್ಯೆಗೆ ಈಡಾದ. ಆ ದಿನಾಂಕ ಕೂಡಾ– ಸರಿಯಾಗಿ ತಾನು ತಪ್ಪಿಸಿಕೊಳ್ಳಬೇಕು ಅಂದುಕೊಂಡ 14 ರಂದೇ ಆಯಿತು.

ಅದು ಇಷ್ಟಕ್ಕೇ ಮುಗಿಯಲಿಲ್ಲ! ಈತ ಹತ್ಯೆ ಮಾಡಲ್ಪಟ್ಟ ಬೀದಿ ಹೆಸರು Rae do la Ferronierre ಆ ಹೆಸರಿನಲ್ಲಿನ ಅಕ್ಷರಗಳು ಕೂಡಾ ಸರಿಯಾಗಿ 14+4 ಅಂಕೆಗಳೇ ಆಗಿದ್ದುವು.

ಈ ಎರಡೂ 1'+4 ಕೂಡಿ=18 ತನ್ನ ಮಡದಿ ಮಾರ್ಗರೇಟ್ ಹೆಸರಿನಲ್ಲಿನ ಅಕ್ಷರಗಳು 18 ಆಗುತ್ತದೆ. (Marguerte do valois) ಈತನ ಹತ್ಯೆ ಕುರಿತು ತನಿಖೆ ಮಾಡಿದ ಚರಿತ್ರೆಯಲ್ಲಿನ ಪ್ರತ್ಯಕ್ಷ ಸಾಕ್ಷಿಗಳ ಕಥನದಲ್ಲಿ ನಮಗೆ ನೀಡಿದ ಈ ರಾಜನ ಮಂತ್ರಿಯಾದ ಫ್ರಾಂಕೋಯ್ಸ್ ಡಿವಲ್ಲಾತ್ಸ್. ಈತನ ಹೆಸರಿನಲ್ಲಿನ ಅಕ್ಷರಗಳು ಸಹಾ ಸರಿಯಾಗಿ 14+4 ಇರುವುದು (Francois do malherbe) ಮಹಾ ಚಿತ್ರ! ಊಹೆಗಿಂತಲೂ ಆಶ್ಚರ್ಯವಾಗಿರುವ ಈ ಸಂಘಟನೆಗಳು ಯಾರೂ ಕಲ್ಪಿಸಿದುದಲ್ಲ. ಯಾವ ಕಾದಂಬರಿಕಾರನ ಅದ್ಭುತ ಕಥಾ ಚಾಮತ್ಕಾರವೂ ಅಲ್ಲ. ಇದು ಫ್ರೆಂಚ್ ದೇಶದ ಇತಿಹಾಸದಲ್ಲಿ ನಡೆದ ವಿಷಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲ ಪುರುಷನ ಕಥಾ ಚಾಮತ್ಕೃತ. ಯಾವ ಕಾದಂಬರಿಕಾರನೂ ವ್ಯಕ್ತಪಡಿಸಲಾಗದ ಈ ಸಂಖ್ಯೆಗಳೂ, ಇವುಗಳು ಕಾರ್ಯ ನಿರ್ವಹಿಸುವ ಪರಿ, ಶಕ್ತಿಯಹಿಂದೆ ವಿಚಿತ್ರವಾದ ' ಕರ್ಮ ಸಿದ್ಧಾಂತವೂ' ಮಾನವನ ಊಹೆಗೆ ಎಟುಕದ್ದು. ಎಲ್ಲವೂ ಸೋಜಿಗ, ಎಲ್ಲವೂ ಕಟು ವಾಸ್ತವ !

ಈ ಸಂಖ್ಯಾಶಾಸ್ತ್ರ ಕಂಡು ಹಿಡಿದ ಪ್ರಾಚೀನ ಋಷಿಗಳಿಗೆ ನಮನ ಹೇಳದಿರಲಾಗದು ಎಂತಹ ಮೇಧಾವಿಗಳಿಗಾದರೂ !

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ-2

ಅಂಕೆಗಳಲ್ಲಿ ಭವಿಷ್ಯ

ಹಿಂದಿನ ಅಧ್ಯಾಯದಲ್ಲಿ ಕಂಡದಲ್ಲದೆ 'ಸಂಖ್ಯಾ ಶಾಸ್ತ್ರ'ದಲ್ಲಿ ಪ್ರಾಚೀನ ಋಷಿಗಳು ಕಂಡುಕೊಂಡ ಇನ್ನೊಂದು ರಹಸ್ಯವನ್ನು ಕೂಡಾ ನಿಮಗೆ ತಿಳಿಸುತ್ತೇನೆ, ಈ ಅಧ್ಯಾಯದಲ್ಲಿ.

ಯಾವ ಸಂಘಟನೆ-ನಡೆಯಿತೋ ಅದಕ್ಕೆ ಸಂಬಂಧಿಸಿದ ದಿನಾಂಕ, ವರ್ಷಗಳನ್ನು ಆ ವಿವರಗಳಲ್ಲೇ–ಮತ್ತೆ ಅವುಗಳಿಗೆ ಬರಲಿರುವ ಭವಿಷ್ಯತ್ ಕರ್ಮ ನಿರ್ಣಯಿಸಲ್ಪಟ್ಟಿರುತ್ತದೆ ಇದೇ 'ಕರ್ಮ ಸಿದ್ಧಾಂತ' (Law of Karma). ಇದು ಮತ್ತೆ ಸಂಖ್ಯಾಶಾಸ್ತ್ರದ ಮೂಲಕ ದೃಢಪಡುತ್ತದೆ. ವ್ಯಕ್ತಿಗಳಿಗೆ, ದೇಶಗಳಿಗೆ ಕೂಡಾ ಈ ಕರ್ಮಸಿದ್ಧಾಂತ ಹೋಲುತ್ತದೆ.

ಬಹಳಷ್ಟು ಜನ ಈ 'ಕರ್ಮ ಸಿದ್ಧಾಂತ' ಒಂದು ವೇದಾಂತ ಎಂದು ಕೊಳ್ಳುತ್ತಾರೆ. ಅಂದರೆ ಹಿಂದೂಗಳು ಊಹಿಸುವ, ನಂಬುವ, 'ಮೂಢ ನಂಬಿಕೆ' ಎಂದೇ ಭಾವಿಸುತ್ತಾರೆ. ಇದು ನಿಜ ಅಲ್ಲವೆಂದು, ಯಥಾರ್ಥವಾಗಿ ಕರ್ಮಸಿದ್ಧಾಂತ ಒಂದು 'ವಿಜ್ಞಾನ-ಸೂತ್ರ (Law of Science)' ಎಂದು, ಸ್ಪಷ್ಟಪಡಿಸುತ್ತದೆ ; ಈ ಅಂಕೆಗಳ ರಹಸ್ಯ ವಿಜ್ಞಾನ ! ಇದು ಕರ್ಮ ಸಿದ್ಧಾಂತಕ್ಕೆ, ಬುನಾದಿ ! ಒಂದು ವೈಜ್ಞಾನಿಕ ನಿರೂಪಣೆ (Scientific Proof) ನಂಥಾದ್ದು ! ಏಕೆಂದರೆ 'ಗಣಿತ'ವು ಒಂದು ಸೈನ್ಸ್ ! ಈ ವಿಷಯ ಸ್ಪಷ್ಟಪಡಿಸಲೆಂದೇ, ಒಂದು ಉದಾಹರಣೆ ತೆಗೆದುಕೊಳ್ಳೋಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಟ್ಲರ್ ಜಾತಕ

ಜರ್ಮನಿಯನ್ನು ಆಳಿದ ಹಿಟ್ಲರ್ ಎರಡನೇ ಪ್ರಪಂಚ ಯುದ್ಧದಲ್ಲಿ ಪ್ರಪಂಚವನ್ನೇ ಗಡಗಡನೆ ನಡುಗಿಸಿದ. ಇತಿಹಾಸ ಹುಟ್ಟಿದ ನಂತರ ಮಾನವ ಜಾತಿ ಇಂತಹ ಯುದ್ಧವನ್ನು ಎಂದು ನೋಡಲಿಲ್ಲ !

'ಸಂಖ್ಯಾಶಾಸ್ತ್ರ' (Numerology) ಮೂಲಕ ಇದರಲ್ಲಿನ ರಹಸ್ಯ ವೇನೋ ಪರಿಶೀಲಿಸೋಣ.

ಹಿಟ್ಲರನ ಜನ್ಮ ದಿನ =20-4-1889. ಮೇಲಿನ ಸಂಖ್ಯೆಯಲ್ಲೇ, ಅಂದರೆ ಈತ ಹುಟ್ಟಿದ ಸಂಖ್ಯೆಯಲ್ಲಿನ ಅಂಕೆಗಳಲ್ಲೇ–ಆತನಿಗೆ ಜರುಗಲಿರುವ ಭವಿಷ್ಯವೆಲ್ಲಾ ಅಡಗಿವೆ! ಅದು ಹೇಗೆಂದರೆ ಎಲ್ಲವನ್ನೂ ಕೂಡಿದರೆ, 1889 = 1+8+8+9=26 ಬರುತ್ತದೆ ! ಅಂದರೆ 26ನೇ ವರ್ಷದಲ್ಲಿ ಒಂದು ಅತಿ ಮುಖ್ಯ ಸಂಘಟನೆ ನಡೆಯುತ್ತದೆ ಅನ್ನೋ ಸೂಚನೆ ಪುನಃ ಅದನ್ನು ಕೂಡಿದರೆ—

1889
ವಯಸ್ಸು=26
1915

ಮೊದಲ ಪ್ರಪಂಚ ಯುದ್ಧ ನಡೆದ

1915 ಸಂ. ಬಂದಿತು.

ಈ ಅಂಕೆಗಳನ್ನು ಮೇಲಿನಂತೆ ಮತ್ತೆ ಕೂಡಿದರೆ=1+9+1+5 =16 ಬರುತ್ತದೆ.

ಅಂದರೆ—
1915
ವಯಸ್ಸು= 16
1931

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಜೀ (Nazi) ಪಾರ್ಟಿ ಸ್ಥಾಪನೆ ಮಾಡಿದ ಸಂವತ್ಸರ ಬರುತ್ತದೆ.

	1931
ಇದರಲ್ಲಿನದು ಮತ್ತೆ	$= 1+9+3+1 = 14$
	1931
ಆ ಸಂವತ್ಸರಕ್ಕೆ ಕೂಡಿಸಿದರೆ	14
ಈ ಸಂವತ್ಸರದಲ್ಲೇ ಹಿಟ್ಲರ್ ಮರಣಿಸಿದ್ದು	1945

ಎರಡನೇ ಪ್ರಪಂಚ ಯುದ್ಧ ಮುಗಿದಿದ್ದು ಕೂಡಾ ನಡೆಯಿತು !

ಮೇಲಿನ ಲೆಕ್ಕ ಪ್ರಕಾರ ನೋಡಿದರೆ ಹಿಟ್ಲರ್ ಜೀವನದಲ್ಲೂ, ಪ್ರಪಂಚ ಚರಿತ್ರೆಯಲ್ಲೂ ನೋಡಿದರೆ ಅತಿ ಮುಖ್ಯವಾದ ಸಂಘಟನೆಯಲ್ಲಿ—ಆತನು ಹುಟ್ಟಿದ 1889 ಸಂವತ್ಸರದಲ್ಲಿನ ಅಂಕೆಗಳಿಂದಲೇ ಏರ್ಪಡುತ್ತಿದೆ !

ಅಂದರೆ ಅರ್ಥ ಹಿಟ್ಲರ್ ಜನಿಸಿದ ಕಾಲ-ಮಾನವ ಚರಿತ್ರೆಯಲ್ಲೇ ಒಂದು ಮೈಲಿಗಲ್ಲಿನಂಥ ಸಂವತ್ಸರ! ಬರಲಿರುವ ಭವಿಷ್ಯತ್ ಎಲ್ಲವೂ ಕೂಡಾ ಹಿಟ್ಲರನು ಜನಿಸಿದ ಸಂವತ್ಸರದಲ್ಲಿನ ಅಂಕೆಗಳಲ್ಲೇ ಅಡಗಿದೆ ! ಹೀಗೆ ಪರಿಶೋಧಿಸಿ ನೋಡಿದರೆ ಸಂಖ್ಯಾಶಾಸ್ತ್ರಿ 'ಕರ್ಮ ಸಿದ್ಧಾಂತವನ್ನು' ರುಜುವಾತು ಗೊಳಿಸುತ್ತದೆ.

ಇದು ಯಾವುದೋ ಕುರಡು ಬೇಟೆಯಾಗಿ ತಗುಲಿದ ಉದಾಹರಣೆ ಅಂದುಕೊಳ್ಳದೆ ಇನ್ನೂ ಅನೇಕ ನಿದರ್ಶನಗಳು, ಈ ತೆರನಾದವು ತೋರಿಸ ಬಹುದು. ಪ್ರತಿಯೊಬ್ಬರ ಜೀವನದಲ್ಲಿನ ಸಂಘಟನೆಗಳು ಹೀಗೆಯೇ ಲೆಕ್ಕ ಹಾಕಿ ಮುಂಚಿತವಾಗಿ ತಿಳಿದುಕೊಳ್ಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದು ಉದಾಹರಣೆ : ಹಿಟ್ಲರನೊಂದಿಗೆ ಉನ್ನತಕ್ಕೆ ಏರಿ ಪತನವಾದ ಅತನ ಸಹಚರ, ಇಟಲೀ ದೇಶದ ಸರ್ವಾಧಿಕಾರಿಯಾದ 'ಬೆನಿಟೋ ಮುಸ್ಸೊಲಿನಿ' (Benilo Mussolini)

ಈತ ಹುಟ್ಟಿದ್ದು = 1883

ಇವುಗಳನ್ನು ಸೇರಿಸಿದಾಗ = 1+8+3=20

1883

ಅದಕ್ಕೆ ಕೂಡಿದರೆ 20

ಮಿಲಿಟರಿ ಸೈನ್ಯದಲ್ಲಿ ಅಪರಾಧ — 1903

ಬರುತ್ತದೆ.

ಮೇಲಿನ ಅದೃಷ್ಟ ಸಂಖ್ಯೆ 20ನ್ನು ಮತ್ತೆ ಸೇರಿಸಿದಾಗ 1903

20

1923

ಇಟಲಿಗೆ ಸರ್ವಾಧಿಕಾರಿ ಮಿಲಿಟರಿ

ಪರಿಪಾಲಕನಾಗಿ ಆದ ಸಂವತ್ಸರ 1923

ಮತ್ತೆ ಅದೃಷ್ಟ ಸಂಖ್ಯೆ 20ನ್ನು ಸೇರಿಸಿದರೆ — 1923

20

ಮುಸ್ಸೋಲಿನೀ ಪತನ = 1943

Sri Vidyabharathi Book Centre, Sringeri

CC-O. In Public Domain. Digitized by eGangotri

ಇಟಲೀ ಚರಿತ್ರೆಯಲ್ಲಿ ಒಂದು ಅಧ್ಯಾಯ ಪೂರ್ಣ.

ಇನ್ನೊಂದು ವಿಚಿತ್ರವೇನೆಂದರೆ ಮೇಲಿನ ಉದಾಹರಣೆಯಲ್ಲಿನ ಆದೃಷ್ಟ ಸಂಖ್ಯೆ 20 ಆಗಿದೆ–ಸರಿಯಾಗಿ ಆದೇ ದಿನ–ಅಂದರೆ 20ನೇ ದಿನಾಂಕದಲ್ಲಿ ಹಿಟ್ಲರ್, ಜನಿಸಿದ ! ಇದು ಕಾಕತಾಳೀಯ ಅನ್ನೋಣವೇ? 'ಕಾಲಪುರುಷನ' ಸಂಕಲ್ಪ ಎಂದು ಕೊಳ್ಳುವುದೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಪೋಲಿಯನ್ ಚಕ್ರವರ್ತಿ

'ಫ್ರಾನ್ಸ್' (France) ದೇಶವನ್ನು ದೇಶಭಕ್ತಿಯಿಂದ ತುಂಬಿತುಳುಕಿಸಿದ 'ನೆಪೋಲಿಯನ್' ಸರ್ವಾಧಿಕಾರಿ; ಫ್ರೆಂಚ್ ಚರಿತ್ರೆಯಲ್ಲೇ ಒಬ್ಬ 'ಯುಗ ಪುರುಷ'ನಂಥವನು ! ಜರ್ಮನ್‌ಗೆ ಹಿಟ್ಲರನು ಹೇಗೋ, ಇಟಲಿಗೆ ಮುಸ್ಸೋಲಿನೀ ಹೇಗೋ, ಭಾರತ ದೇಶದಲ್ಲಿ ನೇತಾಜೀ ಸುಭಾಷ್‌ಬೋಸ್ ಹೇಗೋ ಫ್ರಾನ್ಸ್ ಇತಿಹಾಸದಲ್ಲಿ ನೆಪೋಲಿಯನ್ ಕೂಡಾ ಹಾಗೆಯೇ ಜನತೆಯ ಹೃದಯವನ್ನು ಸ್ಪಂದಿಸಿದ ಮಹಾನಾಯಕ !

ಪ್ರಪಂಚ ಪ್ರಖ್ಯಾತ ಸೇನಾನಿ ! ನೆಪೋಲಿಯನ್ ಚಕ್ರವರ್ತಿ !

ಸಂಖ್ಯಾಶಾಸ್ತ್ರ ಪ್ರಕಾರ ಆತ ಇಷ್ಟೊಂದು ತನ್ನ ದೇಶವನ್ನು ಪ್ರಭಾವಿತ ಮಾಡುವುದಕ್ಕೆ ಕಾರಣ—ಈತನ ಜಾತಕದಲ್ಲಿನ ಅಂಕೆಗಳೇ ! ಫ್ರೆಂಚ್ ಚರಿತ್ರೆಯನ್ನು ಬದಲಾಯಿಸಿದ ಚಾರಿತ್ರಿಕ ಸಂಘಟನೆಗಳನ್ನು ಕೂಡಾ ಸೂಚಿಸುತ್ತವೆ! ಅಂದರೆ ಏನೋ ?

ಈತನ ಜನ್ಮದಿನದಲ್ಲಿನ ಅಂಕೆಗಳಲ್ಲಿನ ಸಂಖ್ಯಾಶಕ್ತಿ ಮುಂಚಿತವಾಗಿಯೇ ಬರಲಿರುವ ಇತಿಹಾಸ ಸಂಘಟನೆಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಇದು ಮಹಾ ಆಶ್ಚರ್ಯಕರ ವಿಶೇಷ ಸಂಗತಿ !

ಅದೇನೆಂದು ಉದಾಹರಣೆಗಳ ಸಹಿತ ನಿರೂಪಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಪೋಲಿಯನ್ ಜನ್ಮ ದಿನಾಂಕ

ಆಗಸ್ಟ್ 15, 1769. ಇದರಲ್ಲಿನ ಅಂಕೆಗಳನ್ನು ಗುಣಿಸಿದರೆ 'ಅದೃಷ್ಟ ಸಂಖ್ಯೆ'ಯಾಗಿ 23 ಬರುತ್ತದೆ.

ಹೇಗೆ :

1+7+6+9=23

15 ಆಗಸ್ಟ್ 1769

ಸೇರಿಸಿದಾಗ 23

ಈತನು ಫ್ರೆಂಚ್ ಸರ್ಕಾರ ಸ್ಥಾಪನೆ ಮಾಡಿದ ಸಂವತ್ಸರ ಬರುತ್ತಿದೆ : 1769

23

ಫ್ರಾನ್ಸ್ ಇತಿಹಾಸದಲ್ಲಿ ಅದು ಮೈಲಿಗಲ್ಲು 1792

ಮತ್ತೆ ಇದಕ್ಕೆ 'ಅದೃಷ್ಟ ಸಂಖ್ಯೆ' ಸೇರಿಸಿದಾಗ 1792

ವಾಟರ್ಲೂ Waterloo ಯುದ್ಧದಲ್ಲಿ ಸೋಲನ್ನರಿಯದ ಮಹಾವೀರನಾಗಿ ಈತನ ಘೋರ ಪರಾಜಯ ; ನೆಪೋಲಿಯನ್ ಪತನ ನಡೆದ ಸಂವತ್ಸರ ಬರುತ್ತಿದೆ.

23

1815

Sri Vidyabharathi Book Centre, Sringeri

CC-O. In Public Domain. Digitized by eGangotri

ಈತನ 'ಜೀವನ ಸಂಘಟನೆ'ಗಳೆಲ್ಲವೂ ಮೇಲಿನ ಅಂಕೆಗಳೇ ಪುನ: ಎರಡನೇ ಪದ್ಧತಿಯಲ್ಲ ನೋಡಿದರೂ ಬರುತ್ತದೆ !

ನೆಪೋಲಿಯನ್ ಜನನ	=1769
1+7+6+9=23 ಸೇರಿಸಲು	23
	1792
ಯುದ್ಧದಲ್ಲಿ ಸೋಲನ್ನರಿಯದ ವೀರನಿಗೆ	
ಘೋರ ಪರಾಜಯ	1792
ಮತ್ತೆ ಈ ಸಂವತ್ಸರವನ್ನೇ ತೆಗೆದುಕೊಂಡರೆ	
1792=1+7+9+2=19	1792
	19
19–ಸೇರಿಸಿದರೆ	1811
ಬರುತ್ತದೆ. ಈತನ ಮಗ ಎರಡನೇ ನೆಪೋಲಿಯನ್-11 ಜನನ.	1811

(ಈತ ಫ್ರಾನ್ಸ್‌ಗೆ ಚಕ್ರವರ್ತಿಯಾದ)

ಮೇಲಿನ ಸಂಖ್ಯೆಗಳನ್ನು ಹಿಡಿದು ನೋಡದಾಗ-ಸ್ಪಷ್ಟವಾಗಿ, ಒಬ್ಬ ವ್ಯಕ್ತಿ ಜೀವನದಲ್ಲಿ 'ಸಂಖ್ಯೆಗಳು' ಹೇಗೆ ಕೆಲಸ ಮಾಡುತ್ತವೋ ಆದೇ ಭವಿಷ್ಯತ್ತನ್ನು ಬದಲಾಯಿಸುವ ಕರ್ಮಫಲವನ್ನು ಹೇಗೆ ಸೂಚಿಸುತ್ತವೋ-ಗೊತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುತ್ತದೆ. ಇದು ವ್ಯಕ್ತಿಗಳ ಒಂದು ವಿಷಯದಲ್ಲೇ ಆಲ್ಲದೆ-ಹೀಗೆಯೇ ದೇಶಗಳ ಭವಿಷ್ಯತ್ತು ಕೂಡಾ ಹೇಗೆ ಕಾರ್ಯ ನಿರ್ವಹಿಸುತ್ತವೋ ನೋಡಿದರೆ ಇನ್ನೂ ಆಶ್ಚರ್ಯವೆನಿಸುತ್ತದೆ.

ಇನ್ನೊಂದು ಉದಾಹರಣೆ :

ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (United States of America) ಸ್ವಾತಂತ್ರ್ಯಗೊಂಡು ಒಂದು ಹೊಸ ದೇಶವಾಗಿ ಏರ್ಪಟ್ಟಿದ್ದು 1776ರ ಸಂವತ್ಸರದಲ್ಲಿ.

ಮೇಲಿನ ಸಂಖ್ಯೆಗಳನ್ನು ಸೇರಿಸಿದರೆ $=1+7+7+6=21$

ಮೇಲಿನ ಸಂಖ್ಯೆಯ ಸಂವತ್ಸರ ಸಂಖ್ಯೆಗೆ

ಸೇರಿಸಿದರೆ 1776

ಫ್ರಾನ್ಸ್ ನೌಕಾ ಯುದ್ಧ ಲೂಯಿಜಾನಾ ರಾಷ್ಟ್ರ

ಅಮೆರಿಕೆಯೊಂದಿಗೆ ಸೇರಿಸಿಕೊಂಡದ್ದು ನಡೆದದ್ದು 1797

ಮೇಲಿನ ಸಂಖ್ಯೆ ಸೇರಿಸಿದರೆ $=1+7+9+7=24$

'ಸ್ಪೆಯಿನ್' (Spain) ಗೆದ್ದ ಅಮೆರಿಕಾ

'ಲಾರಿಡಾ' ರಾಷ್ಟ್ರವನ್ನು ಗೆದ್ದುಕೊಂಡಿದ್ದು 1821

ಇದನ್ನು ಮತ್ತೆ ಸೇರಿಸಿದರೆ $=1+8+2+1=12$

ಮೆಕ್ಸಿಕೋ ರಾಷ್ಟ್ರ ಸ್ವಾತಂತ್ರ್ಯ ಪ್ರಾರಂಭ 1833

1833ನ್ನು ಮತ್ತೆ ಸೇರಿಸಲು $=1+8+3+3=15$

ಮೆಕ್ಸಿಕೋದಲ್ಲಿ ಯುದ್ಧಪೂರ್ತಿ. ಅರ್ಜಿನ್‌ಟೈನಾ, ಕಾಲಿಫೋರ್ನಿಯಾ,

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯೂ ಮೆಕ್ಸಿಕೋ, ಊಟಾ ರಾಷ್ಟ್ರಗಳು ಅಮೆರಿಕಾ ಗೆದ್ದುಕೊಂಡಿದ್ದು 1848.

ಮತ್ತೆ ಮೇಲಿನ ಸಂಖ್ಯೆಗಳನ್ನು ಸೇರಿಸಲು $=1+8+4+8=21$

ಪರಿಪೂರ್ಣ ಅಮೆರಿಕಾ ಪ್ರಭುತ್ವ ಆಸ್ಥಾದಲ್ಲಿ ಸ್ಥಾಪಿಸಿದ್ದು 1869

ವಾಹಾಯಿ ರಾಷ್ಟ್ರದೊಂದಿಗೆ ಅಮೆರಿಕಾ ಅಧಿಕಾರ

(ನಂತರ ಅಮೆರಿಕಾದಲ್ಲಿ ವಿಲೀನ) ನಡೆಯಿತು ! 1893

ಮತ್ತೆ ಸೇರಿಸಲು $=1+8+9+3$ $=21$

1914

ಮೊದಲ ಪ್ರಪಂಚ ಯುದ್ಧ ಪ್ರಾರಂಭವಾದ ಸಂವತ್ಸರ 1914 ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಪ್ರಪಂಚ ಯುದ್ಧ

ನಮ್ಮಲ್ಲಿ ಇತಿಹಾಸ ಓದಿದವರಿಗೆ ಮೊದಲ ಪ್ರಪಂಚ ಯುದ್ಧ ಕುರಿತು, ಅದರಲ್ಲಿ ಪ್ರಪಂಚದಲ್ಲಿನ ಮುಖ್ಯ ದೇಶಗಳೆಲ್ಲ ಪಾಲ್ಗೊಂಡಿದ್ದು ಮಾನವ ಚರಿತ್ರೆಯಲ್ಲಿ ಜರಗಿದ್ದು ಭಾರತ ಯುದ್ಧ ನಂತರ ಇದೇ ಮೊದಲ ಸಾರಿ. ಹೀಗೆ ಅನೇಕ ದೇಶಗಳು ಒಂದೇ ಸಾರಿ ಒಟ್ಟಾಗಿ ಅದು 'ಪ್ರಪಂಚ ಯುದ್ಧ' ವಾಗಿ ಮಾರ್ಪಟ್ಟಿದ್ದು—ಎಲ್ಲ ದೇಶಗಳ ಕರ್ಮದೊಂದಿಗೆ ಸಂಬಂಧಿಸಿದ ವಿಷಯ ! ಇದೇ ನಿಜವಾದರೆ ಪ್ರಪಂಚ ಯುದ್ಧ ಪ್ರಾರಂಭವಾದ ಸಂವತ್ಸರವು ಇತರ ದೇಶಗಳ ಚರಿತ್ರೆಯಲ್ಲೂ ಕೂಡಾ ಪ್ರಮುಖವಾದುದಾಗಿ ಕಾಣಿಸಬೇಕು– ಇಲ್ಲವೇ ಸಂಖ್ಯಾಶಾಸ್ತ್ರದಿಂದ ಲೆಕ್ಕಕ್ಕೆ ಬರಬೇಕು.

ಮೇಲಿನ ಉದಾಹರಣೆಯಲ್ಲಿ ಅಮೆರಿಕಾ ಜಾತಕದಲ್ಲಿ 1914 ಸಂವತ್ಸರ ಸಂಖ್ಯಾಶಾಸ್ತ್ರ ಪ್ರಕಾರ ಮೈಲಿಗಿಲ್ಲಾಗಿ ಉಳಿಯಿತು. ಸ್ವಾತಂತ್ರ್ಯ ಸಂವತ್ಸರ ಆದ 1776 ರಿಂದ ಗಣಿತ ಮಾಡಲು !

ಜರ್ಮನಿ

ಜರ್ಮನ್ ಚರಿತ್ರೆಯಲ್ಲಿ 'ವಿಲಿಯಂ' ರಾಜ (Prince William) ರಷ್ಯಾದೊಳಗೆ ವ್ಯಾಪಿಸಬೇಕು ಅನ್ನೋ ಚರಿತ್ರಾತ್ಮಕ ಸಂಘಟನೆಗಳಿಂದ ಪ್ರಾರಂಭವಾಯಿತು ಎಂದು ಹೇಳಬಹುದು. ಹೀಗೆ ರಷ್ಯಾ, ಜರ್ಮನೀ ದೇಶಗಳ ಕರ್ಮ ಕೂಡಿ ಬರಲಿಕ್ಕೆ ದಾರಿ ಮಾಡಿಕೊಟ್ಟ ಸಂಘಟನೆ 'ವಿಲಿಯಂ' ರಾಜನ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಮದುವೆ ರಷ್ಯಾ ರಾಜಕುಮಾರಿ 'ಆರಿಷಾ' ಜೊತೆ ನಡೆದಿದ್ದು. ಈ ಎರಡು ರಾಜವಂಶಗಳನ್ನು ಕೂಡಿಸುವ ಚರಿತ್ರಾತ್ಮಕ ವಿವಾಹ 1829ರಲ್ಲಿ ನಡೆಯಿತು. ಇದು ಆಧುನಿಕ ಜರ್ಮನ್ ಇತಿಹಾಸದಲ್ಲಿ ರಷ್ಯಾ, ಜರ್ಮನಿಗಳ ಕೂಡುವಿಕೆಗೆ ನಾದಿಯಾಗಿ ಏರ್ಪಟ್ಟಿತು. ಇಲ್ಲಿಂದ ಈ ಸಂಖ್ಯಾಶಾಸ್ತ್ರ ಪ್ರಕಾರ ಲೆಕ್ಕಹಾಕಿ ನೋಡೋಣ.

ವಿಲಿಯಂ ರಾಜನ ವಿವಾಹ	=1829
ಸಂಖ್ಯೆಗಳಾಗಿ ಸೇರಿಸಲು 1+8+2+9	= 20
ಜರ್ಮನ್ ಸಾಮ್ರಾಜ್ಯ ಪ್ರಾರಂಭ	1849
ಈ ಅಂಕೆಗಳನ್ನು ಪುನಃ ಸೇರಿಸಲು 1+8+4+0=	22
ವಿಲಿಯಂ ರಾಜ ಜರ್ಮನ್ ಸಾಮ್ರಾಜ್ಯಕ್ಕೆ ಸಾಮ್ರಾಟ	1871
ಮತ್ತೆ ಈ ಅಂಕೆಗಳನ್ನು ಸೇರಿಸಲು 1+8+7+1+1=	17
ವಿಲಿಯಂ ಚಕ್ರವರ್ತಿ ಮರಣ	1888
ಈ ಅಂಕೆಗಳನ್ನು ಸೇರಿಸಲು 1+8+8+8=	25
ಮೊದಲ ಪ್ರಪಂಚ ಯುದ್ಧಕ್ಕೆ ಜರ್ಮನೀ ಸನ್ನದ್ಧ	1912

ಮುಂದಿನ ಸಂವತ್ಸರ ಅಂದರೆ 1914 ಆಗಸ್ಟ್‌ನಲ್ಲಿ 8ನೇ ತಿಂಗಳನಲ್ಲಿ ಪ್ರಪಂಚ ಯುದ್ಧ ಪ್ರಾರಂಭವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲಿನ ಎರಡು ಉದಾಹರಣೆಗಳನ್ನು ಪರಿಶೀಲಿಸಿದರೆ ಅಮೆರಿಕಾ, ಜರ್ಮನಿ ದೇಶಗಳಿಗೆ ಸಂಖ್ಯೆಗಳಲ್ಲಿ ಪ್ರಪಂಚ ಯುದ್ಧಕ್ಕೆ ದಾರಿ ತೆಗೆದ ಸಂವತ್ಸರ (1913-14) ಸ್ಪಷ್ಟವಾಗಿ ಕಾಣಿಸುತ್ತದೆ. ಪ್ರಪಂಚ ಯುದ್ಧಗಳು ಮಾನವ ಜಾತಿ ಕರ್ಮಕ್ಕೆ ಫಲಗಳೇ ಎಂದು ನಿರೂಪಿಸುತ್ತಿದೆಯೇ ಈ ಅಂಕೆಗಳು !!

ಫ್ರಾನ್ಸ್ ಚರಿತ್ರೆಯಲ್ಲಿ ಸಂಖ್ಯಾಶಾಸ್ತ್ರದಲ್ಲಿನ ಸೂತ್ರಗಳು ಇನ್ನೊಂದು ಉದಾಹರಣೆಯಾಗಿ 14 ಅಂಕೆ ಹೇಗೆ ಈ ದೇಶ ಭವಿಷ್ಯತ್ತನ್ನು ನಿರ್ಣಯಿಸಿತೋ ಇದಕ್ಕೆ ಮುಂಚೆಯೇ ಗಮನಿಸಿದ್ದೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಷ್ಯಾ ಚರಿತ್ರೆ

ಯೂರೋಪ್ ದೇಶಗಳ ಜೀವನದಲ್ಲಿ ಪ್ರಪಂಚ ಯುದ್ಧಗಳು ಎಂಥಹ ಬದಲಾವಣೆಯನ್ನು ತಂದುವೋ ಹಾಗೆಯೇ ರಷ್ಯಾ ಚರಿತ್ರೆಯಲ್ಲೂ ಕೂಡಾ ಬೋಲ್ಷಿವಿಕ್ ವಿಪ್ಲವ (1916-17) ಅಂತಹ ಮುಖ್ಯವಾದ ಬದಲಾವಣೆಯನ್ನು ತಂದಿತು.

ಇದಕ್ಕೆ ಕಾರಣ ರಷ್ಯಾ ಚರಿತ್ರೆಯನ್ನು ನಡೆಸುವ ಅಂಕೆಗಳು ; ಅದರ ಕರ್ಮಗತಿ ಬೇರೆ, ಯೂರಪ್ ದೇಶದಲ್ಲಿನ ಜನತೆಯ ಕರ್ಮಫಲ 'ಬೇರೇ' ಯಾಗಿ ಇದೆ. ಇದು ಅವುಗಳ ಸಂಖ್ಯೆಗಳೇ ಸ್ಪಷ್ಟವಾಗಿ ಖಚಿತಪಡಿಸುತ್ತವೆ. ಇದರ ಫಲವಾಗಿಯೇ ಯೂರಪ್ ದೇಶದಲ್ಲಿ ಏರ್ಪಟ್ಟ ಪ್ರಭುತ್ವಗಳು ಪ್ರಜಾಸ್ವಾಮ್ಯ (Democracy)ವಾಗಿಯೂ, ರಷ್ಯಾದಲ್ಲಿ ಏರ್ಪಟ್ಟ ವ್ಯವಸ್ಥೆ 'ಕಮ್ಯೂನಿಜಂ' ಆಗಿಯೂ ಬೇರೆ ಹಾದಿಗಳು ಬಿಟ್ಟು ಹೋಗಿ ಪ್ರಯಾಣಿಸಿತು. ಆದ್ದರಿಂದ ಪ್ರಪಂಚ ಯುದ್ಧಗಳ ಪ್ರಭಾವ ಯೂರಪ್ ನಲ್ಲಿನ ಇತರ ದೇಶಗಳ ಮೇಲೆ ಕಾಣಿಸಿಕೊಂಡಂತೆಯೇ ಕಮ್ಯೂನಿಷ್ಟು ಕ್ರಾಂತಿಯ ಒಂದು ಪ್ರಭಾವ ರಷ್ಯಾ ಜಾತಕದಲ್ಲೂ ಕೂಡಾ ಅಂಥಹ ಪ್ರಭಾವವನ್ನೇ ತೋರಿಸಿತು. ಇದಕ್ಕೆ ಸಾಕ್ಷಿ ಏನು ? ಅಂದರೆ ರಷ್ಯಾದಲ್ಲಿ ಅಷ್ಟಕ್ಕೆ ಮುಂಚೆ ನಡೆದ ಸಂಘಟನೆಗಳ ತಾರೀಖುಗಳನ್ನು, ತೆಗೆದುಕೊಂಡರೆ ಅವುಗಳ ಸಂಖ್ಯೆಗಳೊಟ್ಟಿಗೆ ಗಣಿತದಿಂದಲೇ ರಷ್ಯನ್ ವಿಪ್ಲವ ಪ್ರಾರಂಭವಾದ ಸಂವತ್ಸರ (1916-17) ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಷ್ಯಾ ಇತಿಹಾಸ ಅದರ ಪ್ರಥಮ 'ಜಾರ್' ಚಕ್ರವರ್ತಿ ಹುಟ್ಟಿದಾಗಲೇ ಪ್ರಾರಂಭವಾಯಿತು ! ಪ್ರಥಮ ಜಾರ್ ಆದ ಅಲೆಗ್ಜಾಂಡರ್—1 (Alexander)—

ಆಗಲಿರುವ ಜಾರ್....		1777
ಸೇರಿಸಿದರೆ 1+7+7+7		22
ನೆಪೋಲಿಯನ್ ಮಾರಿಕೊಂಡ		1799
ಅಲೆಗ್ಜಾಂಡರ್‌ನ ಸಿಂಹಾಸನದ ಮೇಲೆ ಕೂರಿಸಿದ್ದು		
ಮೇಲಿನ ಅಂಕೆಗಳನ್ನು ಸೇರಿಸಲು	1+7+9+9=	1799
	=	26
ಅಲೆಗ್ಜಾಂಡರ್—1 ಮರಣ		1885
ನಿಕೋಲಾಸ್—1 ಆಳ್ವಿಕೆ		1885
ಮತ್ತೆ ಸೇರಿಸಲು 1+8+2+5	=	16
ರಷ್ಯಾದಲ್ಲಿ ಇಂಗ್ಲೀಷ್ ಸಂಧಿ		1841
(ಟರ್ಕೀ ಮೇಲೆ ಅಧಿಕಾರ)		
ಮತ್ತೆ ಸೇರಿಸಲು	1+8+4+1=	14
ಕ್ರಿಮಿಯಾ ಯುದ್ಧ (ನಿಕೋಲಾಸ್ ಮರಣ)	=	1855
ಅಲೆಗ್ಜಾಂಡರ್-II ಆಳ್ವಿಕೆ ಬರುತ್ತದೆ		1855
ಸೇರಿಸಲು 1+8+5+5	=	19
ರಷ್ಯಾದಲ್ಲಿ ವಿಲೀನ		1874
ಮತ್ತೆ ಸೇರಿಸಲು 1+8+7+4	=	20
ಅಲೆಗ್ಜಾಂಡರ್-III ಮರಣ		**1894**

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಕೋಲಾಸ್–II ಆಳ್ವಿಕೆ

ಮತ್ತೆ ಸೇರಿಸಲು $1+8+9+4 = 22$

ಜಾರು ಸಾಮ್ರಾಜ್ಯ ಪತನ 1916

ಕಮ್ಯೂನಿಷ್ಟು ಆಳ್ವಿಕೆ ಆರಂಭ 1916

ಮೇಲಿನ (1916) ಸಂವತ್ಸರದಲ್ಲಿ ರಷ್ಯಾ ಚರಿತ್ರೆಯಲ್ಲಿ ಒಂದು ಅಧ್ಯಾಯ ಮುಗಿಯಿತು. ನಂತರ ಸಂವತ್ಸರ (1917) 'ನೂತನ ವ್ಯವಸ್ಥೆ' ಹೊಸ ಚರಿತ್ರೆ ಪ್ರಾರಂಭವಾಯಿತು.

ಆದ್ದರಿಂದ ಮೇಲಿನ ಲೆಕ್ಕಗಳು 1916ರಲ್ಲಿ ನಿಂತು ಬಿಡುತ್ತದೆ. (ಒಬ್ಬ ವ್ಯಕ್ತಿ ಮರಣಿಸಿದಂತೆ, ದೇಶದಲ್ಲಿ ಒಂದು ವ್ಯವಸ್ಥೆ ಮರಣ) ಅನಂತರದ ಭವಿಷ್ಯತ್ 1917 ರಿಂದ ಸಂಖ್ಯಾಶಾಸ್ತ್ರ ಪ್ರಕಾರ ಲೆಕ್ಕ ಹಾಕಿದರೆ ಈಗಿನ ಕಮ್ಯೂನಿಷ್ಟ ಸರ್ಕಾರದ ಒಂದು ಭವಿಷ್ಯತ್ತು ತಿಳಿಯುತ್ತದೆ.

ಕಮ್ಯೂನಿಷ್ಟ್ ವ್ಯವಸ್ಥೆ

ರಷ್ಯಾ ಚರಿತ್ರೆಯಲ್ಲಿ 'ಬೋಲ್‌ಷಿವಿಕ್ ವಾದ' 1917ರಲ್ಲಿ ಕ್ರಾಂತಿಯೊಂದಿಗೆ ಕೊನೆಗೊಂಡು 'ನಾಸ್ತಿಕವಾದ' ಭೌತಿಕವಾದ ಅಧಿಕಾರ ಸಿದ್ಧಾಂತಗಳಾಗಿ ನೂತನ ಪ್ರಭುತ್ವ ಪ್ರಾರಂಭಿಸಿತು. ಮದ್ಯ ನಿಷೇಧ, ದೇವರನ್ನು ನಂಬದ, ಜ್ಯೋತಿಷ್ಯ, ಸಂಖ್ಯಾಶಾಸ್ತ್ರಗಳೆಂದು ಸುಳ್ಳುಗಳನ್ನು ಪ್ರಚಾರ ಮಾಡುವ ಕಮ್ಯೂನಿಷ್ಟ್ ಪಾರ್ಟಿ ಅಧಿಕಾರಕ್ಕೆ ಬಂದಿದ್ದು 1917ರಲ್ಲೇ.

ಕಮ್ಯೂನಿಷ್ಟರು ಸಂಖ್ಯಾಶಾಸ್ತ್ರ ನಂಬದೆ ಹೋದರೂ—ಈ ಅಂಕೆಗಳ ಮೂಲಕ ರಷ್ಯಾ ಭವಿಷ್ಯತ್ತು ಹೇಗಿರುತ್ತದೋ ಎಂಬುದನ್ನೆ ಕಾಣಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉದಾರಣೆಗೆ 'ಬೊಲ್‌ಷಿವಿಕ್' ಪ್ರಭುತ್ವ 1917
ಸಂಖ್ಯೆಗಳನ್ನು ಸೇರಿಸಲು $1+9+1+7 = 18$
1935

ಸ್ಟಾಲಿನ್ ಆಳ್ವಿಕೆಯಲ್ಲಿ ಪ್ರತ್ಯರ್ಥಿಗಳು
ಪ್ರಕ್ಷಾಳನ, ಹತ್ಯೆಗಳು ಇತ್ಯಾದಿ
ಅಧ್ಯಾಯಗಳು 1935
ಸಂಖ್ಯೆಗಳನ್ನೂ ಸೇರಿಸಲು $1+9+3+5= 18$
1953

ಸ್ಟಾಲಿನ್ ಮರಣ ವ್ಯಕ್ತಿ ಆರಾಧನಾ ಸ್ಟಾಲಿನಿಜಂ ಅಂತ್ಯ 1953
ಈ ಸಂಖ್ಯೆಗಳನ್ನು ಸೇರಿಸಲು $1+9+5+3= 18$
1971

ಕ್ರುಶ್ಚೇವ್ ಮರಣ. ಸ್ಟಾಲಿನ್ ಸಿದ್ಧಾಂತದಲ್ಲಿ ಬದಲಾವಣೆ.
ಈ ಸಂಖ್ಯೆಗಳನ್ನು $1+9+7+1= 18$
1989

Sri Vidyabharathi Book Centre, Sringeri

CC-O. In Public Domain. Digitized by eGangotri

ರಷ್ಯಾದಲ್ಲಿ 'ಬೋಲ್‌ಷಿವಿಕ್' ಪ್ರಭುತ್ವ ಒಂದು ಹೊಸ ಆಧ್ಯಾತ್ಮಿಕ ವ್ಯವಸ್ಥೆಯ ಆರಂಭ.

(ಸತ್ಯಯುಗ ಮುನ್ನ ಮಾನವಜಾತಿ ಚರಿತ್ರೆಯಲ್ಲಿ 'ಯುಗಸಂಧಿ' ಮೊದಲು)

ರಷ್ಯಾದಲ್ಲಿ ಕಮ್ಯೂನಿಜಂ ಎಂಥಾದ್ದೋ ತಿಳಿದವರಿಗೆ ಸಂಖ್ಯಾಶಾಸ್ತ್ರ ಪ್ರಕಾರ ಮೇಲೆ ಏರ್ಪಟ್ಟ ಭವಿಷ್ಯತ್ ಅಸಂಭವವಾಗಿ ಕಾಣಿಸುತ್ತದೆ !

ನಿಜವೇ! ಆದರೆ ಆಶ್ಚರ್ಯ ಭವಿಷ್ಯತ್ತು ಕಮ್ಯೂನಿಸ್ಟರ ಆಧೀನದಲೂ ಕೂಡ ಇಲ್ಲ. (ಎಷ್ಟೇ ನಾಸ್ತಿಕರಾದರೂ ದೇವರನ್ನೂ ನಂಬದೆ ಹೋದರೂ). ಇದರ ಫಲವಾಗಿ ರಷ್ಯಾ ಚರಿತ್ರೆಯಲ್ಲಿ 1971 ರಿಂದ ರಷ್ಯಾದಲ್ಲಿ ರಹಸ್ಯವಾಗಿ ಒಂದು 'ಆಧ್ಯಾತ್ಮಿಕ' ತರಂಗ ಪ್ರಾರಂಭವಾಯಿತು. ತೋರಿಕೆಗೆ ವಾರ್ತಾ ಪತ್ರಿಕೆಗಳು ಓದುವವರಿಗೆ ಹೇತುವಾದ, ನಾಸ್ತಿಕವಾದ, ಜಾರಿಗೆ ತರುವ ಕಮ್ಯೂನಿಷ್ಟು ಪಾರ್ಟಿನೇ ರಷ್ಯಾನ ಇನ್ನೂ ಆಳುತ್ತಿದ್ದರೂ ಕಮ್ಯೂನಿಷ್ಟು ಪಾರ್ಟಿಯು ಬಲ ಕ್ಷೀಣ ದಶೆಯಲ್ಲಿ ಬಿದ್ದಿದೆ. ಫಲವಾಗಿ ನಾಸ್ತಿಕತ್ವ ಮೇಲೆ ಗಿಣಿ ಮಾತುಗಳಾಗಿ ನುಡಿಯುತ್ತಿದ್ದರೂ ದೇಶದಲ್ಲಿ ಮೇಧಾವಿಗಳು, ವಿಜ್ಞಾನಿಗಳು, ಆಧ್ಯಾತ್ಮಿಕ ಸತ್ಯವನ್ನು ಪರಿಶೋಧನೆಗಳನ್ನು ಮಾಡಿ ಯಾಥಾರ್ಥಗಳೆಂದು ಕಂಡುಕೊಳ್ಳುವುದು ಪ್ರಾರಂಭವಾಗಿದೆ.

ಅಂದರೆ ಮೇಲೆ ಏನೂ ಕಾಣಗೊಡದೆ ಜಾಪೆ ಕೆಳಗೆ ನೀರು ಸೇರಿದಂತೆ ನಾಸ್ತಿಕವಾದದ ಅಡಿಯಲ್ಲಿ ಆಧ್ಯಾತ್ಮಿಕ ಸತ್ಯಗಳು ನಿಜವೆಂದು ರುಜುವಾತು ಮಾಡಿವ ಮೇಧಾವಿಗಳ ಬಲ ಬೆಳೆಯತೊಡಗಿದೆ. ತತ್ಫಲವಾಗಿ ಇಂದು ರಷ್ಯಾದಲ್ಲಿ ಬಹಳ ಮಂದಿ ರುಕೀಯವಾಗಿ ಕಮ್ಯೂನಿಷ್ಟು ಪಾರ್ಟಿ ಬ್ಯಾಡ್ಜು ಧರಿಸಿ

Sri Vidyabharathi Book Centre, Tübingen

CC-O. In Public Domain. Digitized by eGangotri

ದರೂ ಒಳಗೆ ಆಧ್ಯಾತ್ಮಿಕ ಸತ್ಯವನ್ನು ಗುರ್ತಿಸುವುದು ಪ್ರಾರಂಭವಾಗಿದೆ. ಇದಕ್ಕೆ ಸಾಕ್ಷಿ ಏನು ? ಎಂದು ಕೇಳಬಹುದು ! ರಷ್ಯಾದ ಎಲ್ಲಾ ಶಾಲೆಗಳಲ್ಲೂ ಯೊಗ ಶಿಕ್ಷಣ ಆರಂಭಿಸುವುದು ನಡೆದಿದೆ. ಇದು ಮೊದಲ ಮೆಟ್ಟಿಲು. ಭಾರತೀಯರ ಆಧ್ಯಾತ್ಮಿಕ ಗ್ರಂಥವಾದ ಮಹಾಭಾರತ 1957ರಲ್ಲಿ ರಷ್ಯಾದಲ್ಲಿ ಅನುವಾದಿಸಲ್ಪಟ್ಟಿತು. ಆನಂತರ ಹಿಂದುಗಳ ಪವಿತ್ರ ಗ್ರಂಥವಾದ ಭಗವದ್ಗೀತೆ ರಷ್ಯಾನ್ ಭಾಷೆಯಲ್ಲಿ ಅನುವಾದಿತವಾಯಿತು. ಕಡೆಗೆ ಎಲ್ಲಕ್ಕಿಂತಲೂ ವಿಚಿತ್ರ ಶ್ರೀಕೃಷ್ಣ ಭಕ್ತಿಯನ್ನು ವಾಮಜಪವನ್ನು ನಂಬುವ ಭಕ್ತಿವೇದಾಂತ ಪ್ರಭು ಪಾದರು ಸ್ಥಾಪಿಸಿದ 'ಹರೇ ಕೃಷ್ಣ' ಸಂಕೀರ್ತನ ಶಾಖೆ ಮಾಸ್ಕೋದಲ್ಲಿ ಪ್ರಾರಂಭವಾಯಿತು.

ನಂತರ ಹಂತದ ಮೇಲಿನ ಲೆಕ್ಕ ಪ್ರಕಾರ ನೋಡಿದರೆ 1989 ರಲ್ಲಿ ಬರಬಹುದು. (ಬಂದೇ ಬಂದಿತು! ಈ ಪುಸ್ತಕ ಪ್ರಕಟಿಸಿದ (1987) ಎರಡು ವಷ-ಕ್ಕೆ 1989 ರ ಅಂಚಿನಲ್ಲಿ 'ಫೆರಿಸ್ಟ್ರೋಯಿಕಾ' ರೂಪದಲ್ಲ ಪ್ರಾರಂಭವಾಗಿ ಕಡೆಗೆ 'ವ್ಯಕ್ತಿಗತ ಆಸ್ತಿ' -ಅಧ್ಯಕ್ಷ ತರದ ರಾಜ್ಯಾಂಗ. ಜರ್ಮನಿಯರ ವಿಲೀನದ ವರೆಗೂ 1990 ರಲ್ಲಿ ಬಂದಿತು ! ಗೋರ್ಬಚೇವ್ ಪುಣ್ಯವಾ ಎಂದು ಕಮ್ಯೂನಿಸಂ ನಶಿಸಿಹೋಯಿತು!)

ಮೇಲಿನ ಲೆಕ್ಕಗಳಲ್ಲಿನ ವಿಚಿತ್ರವೇನೆಂದರೆ 1917 ರ ನಂತರ ಚರಿತ್ರೆ ಎಲ್ಲಾ ಒಂದೇ ಆದೃಷ್ಟ ಸಂಖ್ಯೆ -18 ಪ್ರತಿ ಸಾರಿ ಬರುವುದನ್ನು ಗಮನಿಸಿದ್ದಿರಾ! ಈ ಅದೃಷ್ಟ ಸಂಖ್ಯೆ 18 ಮಹಾಭಾರತದ ಪರ್ವಗಳನ್ನು ಭಗವದ್ಗೀತೆಯಲ್ಲಿ ಅಧ್ಯಾಯಗಳನ್ನು ವ್ಯಾಸ ಮಹರ್ಷಿ ಬರೆದ 18 ಪುರಾಣಗಳನ್ನು ಜ್ಞಾಪಕಕ್ಕೆ ತರುವ 'ಆಧ್ಯಾತ್ಮಿಕ ಸಂಖ್ಯೆ' ಎಂದು ತಿಳಿದುಕೊಳ್ಳು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದು ಅಷ್ಟೇನೂ ಕಷ್ಟವಾದ ಕೆಲಸವಲ್ಲ ಈಗ ನಾಸ್ತಿಕರು ಏನು ಹೇಳುತ್ತಾರೆ? ಸಂಖ್ಯಾ ಶಾಸ್ತ್ರ ಮೂಢ ವಿಶ್ವಾಸ ಅಲ್ಲವೆಂದು, ಕಮ್ಯೂನಿಷ್ಟರ ಮೇಲೆ (ನಾಸ್ತಿಕರಿಗೆ) ಕೂಡಾ ಕಾರ್ಯ ನಿರ್ವಹಿಸುವ ಒಂದು ಅದ್ಭುತ ಆಧ್ಯಾತ್ಮಿಕ ವಿಜ್ಞಾನ ಶಾಸ್ತ್ರವೆಂದು ಶಕ್ತಿ ಉಳ್ಳವನು ಉತ್ತರವನ್ನು ಹೀಗೇ ಊಹಿಸಿಕೊಳ್ಳ ಬಲ್ಲ.

'ತಸ್ಮೈ ಸಂಖ್ಯಾತ್ಮನೇ ನಮಃ'

(ಸಂಖ್ಯಾತ್ಮಕನಾದ ಆ ಭಗವಂತನಿಗೆ ನಮಸ್ಕರ)

ವ್ಯಾಸ ಮಹರ್ಷಿ ಮಹಾ ಭಾರತ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ-3

ದೇಶಗಳ ಭವಿಷ್ಯತ್ತು - ಸಂಖ್ಯಾ ಶಾಸ್ತ್ರ

ಇಷ್ಟರವರೆಗೂ ಪರಿಶೀಲಿಸಿದ ಉದಾಹರಣೆಗಳಿಂದ ಸಂಖ್ಯೆಗಳು ಒಬ್ಬ ಮನುಷ್ಯನವೊಂದು ಜೀವನದಲ್ಲಿ ನಡೆಯಲಿರುವ ಭವಿಷ್ಯತ್ತನ್ನು, ಅದರಲ್ಲಿನ ಸಂಘಟನೆಗಳನ್ನು ಮೊದಲೇ ಸೂಚಿಸುತ್ತದೆ ಎಂಬ ಸತ್ಯ ಗಮನಿಸಿದೆವು.

ಮನುಷ್ಯ ಜೀವನದಂತೆಯೇ ದೇಶಗಳ 'ಜೀವನ'ದಲ್ಲೂ ಕೂಡಾ ಈ ಸಂಖ್ಯೆಗಳು ತಮ್ಮ ಪ್ರಭಾವವನ್ನು ತೋರುತ್ತದೆಯೇ ? ಸಂಖ್ಯೆಯಲ್ಲಿನ ಅದೃಷ್ಟ ಶಕ್ತಿ (Power of Fate) ಆಶ್ಚರ್ಯಕರವಾದ ರೀತಿಯಲ್ಲಿ ದೇಶ ಭವಿಷ್ಯತ್ತನ್ನು ಹೇಗೆ ನಿರೂಪಿಸುತ್ತಿವೆಯು ಇಲ್ಲಿ ಇಲ್ಲಿ ಪರಿಶೀಲಿಸೋಣ.

ಅಂಕೆ–ಸಂಖ್ಯೆ ವ್ಯತ್ಯಾಸ

ಹೀಗೆ ಪರಿಶೀಲಿಸುವ ಮುನ್ನ ನಿಜಕ್ಕೂ ಈ ಸಂಖ್ಯೆಗಳಿಗೆ ಈ ಶಕ್ತಿ ಎಲ್ಲಿಂದ ಬಂದಿತೋ ಯೋಚಿಸಬೇಕು. 'ಸಂಖ್ಯ' ಅನ್ನುವಂಥಾದ್ದು ಕಣ್ಣಿಗೆ ಕಾಣಿಸದ ಒಂದಾನೊಂದು ಅದೃಷ್ಟ 'ಶಕ್ತಿ'ಯೊಂದರ (Power) ಕಣ್ಣಿಗೆ ಕಾಣಿಸುವ ಚಿಹ್ನೆ ಹೊರಗೆ ಕಾಣಿಸುವುದು 'ಅಂಕೆ' Numerical, ಅದರ ಹಿಂದೆ ಅಡಗಿದೆ, ಸಂಖ್ಯ (Number) ! ಈ ಅಂಕೆ ಕಣ್ಣಿಗೆ ಕಾಣಿಸುವ ಒಂದು ಸಂಕೇತವೇ. ಹಿಸಲ್ಪಟ್ಟ ಸಂಖ್ಯೆ ಎಂಬ ಕಣ್ಣಿಗೆ ಕಾಣಿಸದ ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕೃತಿ ಸತ್ಯ (Reality of Nature). ಲೆಖ್ಖ ಹಾಕಲಿಕ್ಕೆ ಈ ಸಂಖ್ಯೆ ಉಪಯೋಗ ಬರುತ್ತದೋ ಆ ಲೆಕ್ಕದಲ್ಲಿ ಯಾವ ಯಾವ ಸಂಖ್ಯೆಗಳು ಬರುತ್ತವೋ ಇವುಗಳನ್ನು ನಿರ್ಣಯಿಸುವ ಗಣಿತ (Counting) ಕೂಡಾ ತನ್ನಲ್ಲಿ ಅಡಗಿಸಿಕೊಂಡಿರುತ್ತದೆ. ಅದಕ್ಕೆ ಒಂದು ಸಂಖ್ಯೆಯಿಂದ ಏರ್ಪಡುವ ಅನೇಕ ಫಲಿತಗಳು ಆ 'ಸಂಖ್ಯೆ'ಯಲ್ಲಿ ಮೊದಲೇ ನಿರ್ಣಯವಾಗಿದ್ದು–ಆ ಮೊದಲ ಸಂಖ್ಯೆಯಲ್ಲೇ ಅಡಕವಾಗಿರುತ್ತದೆ. ಅಂದರೆ ಭವಿಷ್ಯತ್ತನ್ನು ನಿರ್ಣಯಿಸುವ 'ದೈವಶಕ್ತಿ' (God Force) ಇಲ್ಲವೇ 'ಅದೃಷ್ಟ' ಎಂದು ಕರೆಯಲ್ಪಡುವ ಕರ್ಮಶಕ್ತಿ (Law of Karma) ಸಂಖ್ಯೆಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಈ ಸಂಖ್ಯೆಗಳನ್ನು ಕಣ್ಣುಗಳಿಗೆ ಕಾಣಿಸುವಂತೆ ತೋರಗೂಡುವುದೇ ಅಂಕೆಗಳು !

ಬಹಳ ಮುಂದಿ ಸಂಖ್ಯೆ ಅಂದರೆ ಅದು ತೋರುವ ವಸ್ತುಗಳೆಂದು ಭ್ರಮೆ ಪಡುತ್ತಾರೆ. ಆದರೆ ಹಾಗಲ್ಲ ! ಉದಾಹರಣೆಗೆ 'ನಾಲಕ್ಕು' ಮಾವಿನ ಹಣ್ಣು, 'ನಾಲ್ಕು ಕಿಲೋ ಸಕ್ಕರೆ' ಎಂದಾಗ, ಆ ಮಾವಿನ ಹಣ್ಣು ಅಲ್ಲ, ಆ ಸಕ್ಕರೆಯೂ ಅಲ್ಲ. ಸಂಖ್ಯೆ ಅಂದರೆ ಆ ಎರಡನ್ನೂ ಅಳೆಯುವ ಒಂದಾನೊಂದು ಕಣ್ಣಿಗೆ 'ಕಾಣಿಸದ ಯಥಾರ್ಥ ಸತ್ಯ !' ಸಂಖ್ಯೆ ಅಂದರೆ ಕಣ್ಣಿಗೆ ಗೋಚರಿಸುವ ಈ ಪ್ರಪಂಚದ ಹಿಂದಿನಿಂದ ಕಣ್ಣಿಗೆ ಗೋಚರವಾಗದ ದೈವ ಶಕ್ತಿ ಹೇಗೆ ಕಾರ್ಯ ನಿರ್ವಹಿಸುತ್ತಿರುತ್ತದೋ, ನಿಮಗೆ ತಿಳಿಸುವ ಉದಾಹರಣೆ ! ಹಾಗೆಯೇ ಕಣ್ಣಿಗೆ ಗೋಚರಿಸುವ 'ಅಂಕೆ'ಗಳ ನೇಪಥ್ಯದಿಂದ ಅಗೋಚರ 'ಸಂಖ್ಯೆಗಳು' ಕಾರ್ಯ ನಿರ್ವಹಿಸುತ್ತಿರುತ್ತದೆ.

ಹಾಗೆಯೇ ನಾಲ್ಕು ಲೀಟರ್ ಹಾಲು ಅಳೆದು ಒಂದು ಪಾತ್ರೆಯಲ್ಲಿ ಹಾಕಿದರೆ ಎಲ್ಲವೂ ಬೆರೆತು ಹಿಂದಾಗಿ ಬಿಡುತ್ತದೆ | ಅಂದರೆ 1+1+1+1

CC-O. Vidyabharathi Book Centre, Sringeri

CC-O. In Public Domain. Digitized by eGangotri

=1 ಮತ್ತೆ ಅದೇ ಹಾಲನ್ನು ಅರ್ಧ ಲೀಟರ್ ಲೋಟದಿಂದ ಅಳೆದರೆ ಅದೇ ಎಂಟಾಗಿ '8' ಅಳೆಯಲ್ಪಡುತ್ತದೆ. ಇದರಲ್ಲಿ ಸಂಖ್ಯೆಯೊಂದರ ಅಳತೆ ನಾವು ಬಳಸುವ 'ಮಾನವು' (Massure) ದಿಂದ ಬದಲಾಗುತ್ತದೆ, ಎಂದು ಸ್ಪಷ್ಟವಾಯಿತು. ಅದೇ ರೀತಿಯಾಗಿ ಒಬ್ಬ ಮನುಷ್ಯನ ಜೀವಿತ ಕಾಲವನ್ನು ಅಳೆಯುವಾಗ ಸಂವತ್ಸರ ಹೇಗೆ ಅಳತೆ ಮಾಡುವುದೋ ಹಾಗೆ ಒಂದು ದೇಶದ ಚರಿತ್ರೆಯಲ್ಲಿ ಒಂದು ಶಕದ ಇಲ್ಲವೇ ಒಂದು ಶತಾಬ್ದವೂ ಕೂಡಿ ಅಷ್ಟೇ ತೂಗುತ್ತದೆ. ಮೇಲಿನ ಉದಾಹರಣೆಯಿಂದ ನೋಡಿದರೆ ಸಂಖ್ಯೆ ಅನ್ನೋದು ಒಂದು 'ಸತ್ಯ' (Truth) ಅಳೆಯಲಾಗದ 'ಅನಂತತ್ವವನ್ನು' (Intinity) ಭಾಗಿಸಬಲ್ಲ ಅಳತೆ 'ಇಲ್ಲವೇ' 'ತೂಕ' (Messure) ಎಂದು ಗ್ರಹಿಸಬಹುದು. ಹೀಗೆ ನೋಡಿದರೆ ಜೀವಿತದ ಭವಿಷ್ಯತ್ತನ್ನು ಅಳೆಯುವ ಮೈಲಿ ಕಲ್ಲುಗಳಂಥಾದ್ದೇ ಸಂಖ್ಯೆಗಳು.

ಕಾಲ ಪ್ರವಾಹದಂತೆ ಪ್ರತಿಕ್ಷಣ ಮುಂದಕ್ಕೆ ಉರುಳಿ ಹೋಗುತ್ತಿದ್ದರೆ ಗತದಿಂದ, ವರ್ತಮಾನದೊಳಕ್ಕೆ, ವರ್ತಮಾನದಿಂದ ಭವಿಷ್ಯತ್ ಕಡೆಗೆ ಅದರಲ್ಲಿ ಕಳೆಯಬೇಕಾದ ಮೈಲಿಗಲ್ಲಿನಂಥಾದ್ದು, ಭವಿಷ್ಯತ್ ಸಂವತ್ಸರಗಳು ! 'ಕಳೆದ' ಮೈಲಿ ಗಲ್ಲುಗಳೇ 'ಗತ' ಎಂದಾಯಿತು ! ಹಿಂದಿರುವ ಕಂಬಗಳನ್ನು ದಾಟಿ ಬ್ರಿಡ್ಜ್ (Bridge) ಮೇಲೆ ಓಡುವ ರೈಲು ಬರಲಿರುವ ಸ್ತಂಭಗಳತ್ತ ಹೋಗುವಂಥಾತ್ತೇ ಕಾಲದಲ್ಲಿ ನಮ್ಮ ಪ್ರಯಾಣ! ಒಟ್ಟು ಎಷ್ಟು ನಿಲ್ದಾಣ (ಸ್ಟೇಷನ್ಸ್) ಗಳವೆಯೂ ತಿಳಿದಿದ್ದರೆ ಬರಲಿರುವ 'ಭವಿಷ್ಯತ್' ನಿಲ್ದಾಣಗಳ ಸಂಖ್ಯೆ, ತಿಳಿಯುತ್ತದೆ ಎಂಬ ಸತ್ಯವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿವ್ವೇ ಶಾಸ್ತ್ರ ! ಇದರಲ್ಲಿನ ಅಂಕೆಗಳನ್ನೆಲ್ಲ ನಾವು ನೋಡಬೇಕಾದ್ದು ! ಸಂಖ್ಯೆಯನ್ನೂ ಇದನ್ನು 'ಕರ್ಮಶಕ್ತಿ' ಇಲ್ಲವೇ ನಡೆಯಲಿರುವ ಕರ್ಮಗತಿಗಳನ್ನು 'ಅಳೆದು'

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಶ್ಚಯಿಸುವ ದೈವ ಶಕ್ತಿ' (God force) ಕುರಿತು-ಎಂದು ಯೋಚಿಸ ಬಲ್ಲ ಪರಿಶೀಲಂಗೆ ತಿಳಿಯದೆ ಇರಲಾರದು !

ಜನ್ಮ ದಿನಾಂಕ ಸಂಖ್ಯೆ

ಈಗ ದೇಶಗಳ ಭವಿಷ್ಯತ್‌ನಲ್ಲಿ ಸಂಖ್ಯೆಗಳು ಹೇಗೆ ಕಾರ್ಯ ನಿರ್ವ ಸುತ್ತದೆಯೋ ನಿರೂಪಿಸುತ್ತೇನೆ. ಮನುಷ್ಯ ಹುಟ್ಟಿದ ದಿನಾಂಕ ನಮ್ಮ ಜನ್ಮ ದಿನಾಂಕ ನಮಗೆ ಹೇಗೋ, ದೇಶಕ್ಕೂ ಕೂಡಾ ಹಾಗೆಯೇ ! ಒಂದು ದೇಶ ವನ್ನೇ 'ಅಮೆರಿಕಾ' ಒಂದು ಸ್ವತಂತ್ರ ದೇಶವಾಗಿ ಉದ್ಭವಿಸಿದ ದಿನಾಂಕವನ್ನು-ಉದಾಹರಣೆಯಾಗಿ ತೆಗೆದುಕೊಂಡು ನಿರೂಪಿಸುತ್ತೇನೆ, ಸಈತ್ಯವನ್ನು !

ಅಮೆರಿಕಾ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿ ಕಡೆಗೆ ತಾನು ಒಂದು ಸ್ವತಂತ್ರ ದೇಶವಾಗಿ 4 ಜುಲೈ, 1776ರಲ್ಲಿ ಅವತರಿಸಿತೆಂದು ಯೂರಪ್ ಇತಿಹಾಸ ತಿಳಿಸುತ್ತದೆ ! ಅಂದರೆ ಸಂಖ್ಯಾಶಾಸ್ತ್ರ ಪ್ರಕಾರ 'ನಾಲಕ್ಕು' (4) ಸಂಖ್ಯೆ ಅಮೆರಿಕಾ ಅದೃಷ್ಟ ಸಂಕೇತವಾಗಿ ಆ ದೇಶ ಅದೃಷ್ಟವನ್ನು ಪರಿ ಪಾಲಿಸುತ್ತಿದೆ.

ಹೆಸರಿನಲ್ಲಿ ಸಂಖ್ಯೆ

ಹಾಗೆಯೇ ಇದು ಸ್ವತಂತ್ರ್ಯ ದೇಶವಾಗಿ ಅವತರಿಸಿದಾಗ United States of America' (U.S.A.) ಎಂಬ ಹೆಸರಿನಿಂದ 1776 ಸಂವತ್ಸರದಲ್ಲಿ ಅವತರಿಸಿತು ! ಈ ಹೆಸರಲ್ಲಿ ಒಟ್ಟು 21 ಅಕ್ಷರಗಳಿವೆ ! ಹಾಗೆಯೇ 1776ರ ಸಂವತ್ಸರದಲ್ಲಿನ ಅಂಕೆಗಳನ್ನು ಸೇರಿಸಲು 21 ಸಂಖ್ಯೆನೇ ಮತ್ತೆ ಬರುತ್ತದೆ !

CC-O. Vidyabharathi Book Centre, Sringeri

CC-O. In Public Domain. Digitized by eGangotri

ಈ ದೇಶ ಒಂದು ಸ್ವತಂತ್ರ್ಯ ರಾಷ್ಟ್ರವಾಗಿ ಕೂಡಿದ್ದು-13 ರಾಷ್ಟ್ರಗಳು ! ಈ ಅಂಕೆ '13' ಅಮೆರಿಕಾ ಚರಿತ್ರೆಯಲ್ಲಿ ಹೇಗೆ ಹಿಂಬಾಲಿಸಿತೋ ನೋಡಿದರೆ ಆಶ್ಚರ್ಯ ಉಂಟಾಗುತ್ತಾದೆ ! ಈ ದೇಶ ಆಯ್ದುಕೊಂಡ ರಾಷ್ಟ್ರಧ್ವಜ (Nationl Flag) ಮೇಲೆ ನಕ್ಷತ್ರಗಳು ಬಿಳಿ ಗೆರೆಗಳು (Stars a Stripes) ಲೆಕ್ಕಿಸಿದರೆ ಸರಿಯಾಗಿ.

ನಕ್ಷತ್ರಗಳು (Stars) = 13 ಇವೆ.

ಗೆರೆಗಳು (Stripes) ಕೂಡಾ—13 ಇವೆ.

ನಮ್ಮದೇಶ ಆಯ್ಕೆ ಮಾಡಿಕೊಂಡ ರಾಷ್ಟ್ರೀಯ ಚಿಹ್ನೆ. (National Emblem) ಮೂರು ಅಶೋಕ ಸಿಂಹಗಳು ! ಹಾಗೆಯೇ ಅಮೆರಿಕೆಗೆ-ಒಂದು ಹದ್ದು, ರೆಕ್ಕೆ ಬಿಚ್ಚುತ್ತಾ ಕಾಲಿನಲ್ಲಿ ಒಂದರಲ್ಲಿ ಬಾಣಗಳು, ಎರಡನೆಯದರಲ್ಲಿ ಆಲಿವ್ (Olive) ಮರದ ಕೊಂಬೆಯಿದ್ದು ಅದರ ಅಡಿಯಲ್ಲಿ ಒಂದು 'ಜಾತೀಯ ನಿನಾದ' ಬರೆದಿದೆ ! ವಿಚಿತ್ರ ಏನೆಂದರೆ ಈ ಹದ್ದು ರೆಕ್ಕೆಯಲ್ಲಿನ ಗರಿಗಳು ಲೆಕ್ಕಹಾಕಿದರೆ ಸರಿಯಾಗಿ 13 ಇದೆ ! ಅಂದುಕೊಳ್ಳದೆ ಎರಡನೇ ರೆಕ್ಕೆ ನೋಡಿದರೆ ಅದರಲ್ಲೂ ಸರಿಯಾಗಿ 13 ಪುಕ್ಕಗಳೇ ಲೆಕ್ಕಕ್ಕೆ !

ಇದು ಇಷ್ಟಕ್ಕೆ ನಿಲ್ಲುವುದಿಲ್ಲ ! ಹದ್ದು ಕಾಲಿನ ಉಗುರಿನಿಂದ ಹಿಡಿದು ಕೊಂಡ ಬಾಣಗಳು ಲೆಕ್ಕ ಹಾಕಿದರೆ ಅವು ಸರಿಯಾಗಿ 13-ಇದೆ ! ಎರಡನೇ ಕಾಲಿನ ಉಗುರಿನಲ್ಲೂ ಹಾಗೇ 'ಆಲಿವ್' ಕೊಂಬೆಗಳಲ್ಲಿನ ಎಲೆಗಳನ್ನು ಲೆಕ್ಕ ಹಾಕಿದರೆ ಅವೂ ಸರಿಯಾಗಿ (13) ಹದಿಮೂರೇ ಇದೆ ! ಆ ಅಡಿಯಲ್ಲಿ ಬರೆದಿರುವ 'ಜಾತಿಯ ನಿನಾದ' (Motto)ದಲ್ಲೂ ಕೂಡಾ ಸರಿಯಾಗಿ 13 ಅಕ್ಷರಗಳೇ ಇವೆ. ಅಂದರೆ ಈ ಅಮೇರಿಕಾ ದೇಶ ಜಾತಕದಲ್ಲಿ-ಈ ಸಂಖ್ಯೆ 13

Sri Vidyabharathi Book Centre, Sringeri

CC-O. In Public Domain. Digitized by eGangotri

(ಹದಿಮೂರು) ಭವಿಷ್ಯತ್ತನ್ನು ಪರಿಪಾಲಿಸುವ 'ಅದೃಷ್ಟ ಸಂಖ್ಯೆ' (Fate Number) ಆಗಿದೆ ಎರದಾಯ್ತು ! ಅಂದರೆ ಎಲ್ಲದರಲ್ಲೂ ಈ ಸಂಖ್ಯಾ ಅಮೆರಿಕಾ ಚುತ್ರೈಯಲ್ಲಿ ಕಾಣಿಸಿ ತೀರಬೇಕು ಅಂತ ! ಅದು ಹೇಗೆ ನೋಡೋಣ !

ಪ್ರೆಸಿಡೆಂಟ್

ಅಮೆರಿಕಾ ಅಧ್ಯಕ್ಷರಲ್ಲಿ 13ನೇಯವನು James Buchanan (ಜೇಮ್ಸ್ ಬುಡಾನನ್) ಆತನ ಹೆಸರಿನಲ್ಲಿನ ಅಕ್ಷರಗಳು ಕೂಡಾ ಸರಿಯಾಗಿ-13 ಇದೆ ; ಈತ ಆಯ್ಕೆಯಾದ ದಿನಾಂಕದಲ್ಲಿ ಸ್ವಂತ ಕ್ಷೇತ್ರವಾ Pennsylvenian ರಾಷ್ಟ್ರದ ಹೆಸರಿನಲ್ಲೂ ಸಹ ಅಕ್ಷರಗಳು 'ಹದಿಮೂರೇ' !

ಈತನ ಆಳ್ವಿಕೆಯಲ್ಲಿ 'ದಕ್ಷಿಣ ಕೆರೊಲಿನಾ South Carolina ರಾಷ್ಟ್ರ ಅಮೆರಿಕಾ ರಾಜ್ಯದಿಂದ ಪ್ರತ್ಯೇಕ ಗೊಂಡು ಬೇರೆಯಾಯಿತು. ಇದರ ಹೆಸರು South Carolinaದಲ್ಲೂ ಕೂಡಾ ಅಕ್ಷರಗಳು ಹದಿಮೂರೇ ! ಅಷ್ಟೇ ಅಲ್ಲದೆ ಪ್ರತ್ಯೇಕವಾದಿಗಳ ವರ್ಗದವರು ಇಟ್ಟುಕೊಂಡಿದ್ದು ಕೂಡಾ 13 ಅಕ್ಷರಗಳಿರುವ ಹೆಸರು (Seccessiorist) ಈ ಪಾರ್ಟಿ ಕಾರ್ಯಕಲಾಪ ಗಳಲ್ಲಿ ಪ್ರಮುಖ ಪಾತ್ರವಹಿಸಿ ನಡೆಸಿದ War Department ಹೆಸರಿ ನಲ್ಲೂ 13-ಅಕ್ಷರಗಳೇ ! ಇವರ ನಾಯಕರು, ಜಾಕಬ್ ಥಾಮ್ಸನ್ (Jacob Thompson) ಹೆಸರಿನಲ್ಲೂ 13 ಅಕ್ಷರಗಳೇ ಇರುವುದೇ ಅಲ್ಲದೆ ಆತ ಹುಟ್ಟಿದ್ದು ಕೂಡಾ 13 ಅಕ್ಷರಗಳಿರುವ ದಕ್ಷಿಣ ಕೆರೊಲಿನಾ (South Carolina) ರಾಷ್ಟ್ರವೇ !

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮೆರಿಕಾ ಕಾರ್ಯದರ್ಶಿ

ಇದು ಸಾಲದೆಂಬಂತೆ ಕಾರ್ಯದರ್ಶಿ (Secretany of State) ಯಾಗಿ ಕೆಲಸಮಾಡಿದ ಜೆರಿಮಿಯಾನ್ ಬ್ಲಾಕ್ (Jeremian Black) ಹೆಸರಿನಲ್ಲಿ 13-ಅಕ್ಷರಗಳೇ ಅಲ್ಲದೆ ಸೇನಾನಿಯಾದ ವಿನ್ ಫೀಲ್ಡ್‌ಸ್ಕಾಟ್ (Winfield Scott) ಹೆಸರಿನಲ್ಲೂ ಕೂಡಾ 13-ಅಕ್ಷರಗಳೇ ಇರುವುದು ಕೇವಲ ಕಾಕತಾಳೀಯವಾಗಿ ನಡೆದುದು ಎನ್ನಲಾರೆವು.

ಹಾಗೆಯೇ ಅಮೆರಿಕನ್ ಸರ್ವ ಸೈನ್ಯಾಧ್ಯಕ್ಷವಾಗಿ ಆಗ ಪ್ರೆಸಿಡೆಂಟ್ ಸರ ಕೆಲಸಮಾಡಿದ 'ಮೇಜರ್ ಅಂಡರ್ಸನ್' (Major Anderson) ಹೆಸರಿನಲ್ಲಿ ಹದಿಮೂರು ಅಕ್ಷರಗಳೇ ! ಅತನ ಮುದ್ದಿನ ಹೆಸರು 'ಬಾಬೀ ಅಂಡರ್ಸನ್' (Bobby Anderson) ಆ ಹೆಸರಿನಲ್ಲೂ ಕೂಡಾ 13 ಅಕ್ಷರಗಳು ! ಏನಿದು ಚರಿತ್ರೆ ನಡೆಸುವ ಚಿತ್ರ ? ಇದು ಸಂಖ್ಯೆಗಳನ್ನು ನಡೆಸುವ ಕರ್ಮಶಕ್ತಿಯೇ ? ದೈವಶಕ್ತಿಯೇ ?

ಅಮೆರಿಕಾ ಚರಿತ್ರೆಯಲ್ಲಿ ಆಶ್ಚರ್ಯಕರವಾದ-13

ಈ ಹದಿಮೂರು 13-ಸಂಖ್ಯೆ ತನ್ನ ಅಚ್ಚರಿಕರವಾದ ಪ್ರಭಾವವನ್ನು ಅಧಿಕಾರವನ್ನು-ಹೀಗೆ ಅಮೆರಿಕಾ 13ಜನ ಪ್ರೆಸಿಡೆಂಟರ ಕಾಲದಲ್ಲಿ ಬೀರಿ ಇಷ್ಟಕ್ಕೆ ನಿಲ್ಲಲಿಲ್ಲ.

ಸೇನಾನಿ ಅಂಡರ್ಸನ್ ವಶಪಡಿಸಿಕೊಳ್ಳಲು ಹೋದ ಕೆರೊಲೀನಾ ಕೋಟೆಯಲ್ಲಿನ Carolina fcrts ಹೆಸರಿನಲ್ಲೂ 13-ಅಕ್ಷರಗಳೇ ! ಅದರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಅಂಡರ್ಸನ್ ವಶವಾಡೊಡನೆ ಮೇಲಿನ ಧ್ವಜದಲ್ಲಿ (Stares and Stripes) ಎಂಬ ಹೆಸರಿನೊಂದಿಗೆ ಹಾರಿಸಿ ಬಿಟ್ಟ ಇದರಲ್ಲೂ 13-ಅಕ್ಷರಗಳೇ ! ಇದು ಯುದ್ಧ ಆದ ನಂತರ 'ಸುಮ್ಟರ್ ಕೋಟೆ' (Fort Sumter) ಯಾಗಿ ಹೆಸರಾಯಿತು. ಇದೂ 13-ಅಕ್ಷರಗಳೇ ! ಇನ್ನೂ ವಿಶೇಷ ನೋಡಬೇಕೆಂದರೆ ಈ ಇತಿಹಾಸ ಆಗೆದಂತೆಲ್ಲಾ ಇದೆ-ನಾವು ತಾಳ್ಮೆಯಿಂದ ಪರಿಶೀಲಿಸಿ ಪರಿಶೋಧನಾ ದೃಷ್ಟಿಯಿಂದ (Research) ಚರಿತ್ರೆಯನ್ನು ಓದಬೇಕೆವಿನಾ !

ಈ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ ಯುದ್ಧ ನೌಕೆ (Star of the West)-13 ಅಕ್ಷರಗಳೇ ! ಇದರ ಜೊತೆಗೆ ಕೆಲಸ ಮಾಡಿದ ನೌಕೆ-(David Farragut) 13-ಅಕ್ಷರಗಳು ಇದರ ಕಾರ್ಯನಿರ್ವಹಿಸಿದ ಕೆಪ್ಟೆನ್ ಬಾರ್ಲೆಸ್ R. ವುಡ್ಸ್ Charles R. Woods 13–ಅಕ್ಷರಗಳು-ಯುದ್ಧ ಮಾಡುತ್ತಾ ವಿಜಯವಂತವಾಗಿ ಬರುತ್ತಿರುವಾಗ ಒಂದು ದ್ವೀಪ Charie-stod Bar 13-ಅಕ್ಷರಗಳು) ಎಂಬ ಸ್ಥಳಕ್ಕೆ ಬಂದೊಡನೇ ಫಿರಂಗಿ ಏಟು ತಗುಲಿ ಹಿಂದಕ್ಕೆ ಹೋಗಬೇಕಾಯಿತು. ಕಡೆಗೆ ಈ ಸುಮ್ಟರ್ ಕೋಟೆ ವಶವಾಗದೆ ಹೋಗಲು ಅಮೆರಿಕಾ ಸಂಯುಕ್ತ ಸೇನಾನಿ, (P.T.G. Beauregard 13-ಅಕ್ಷರಗಳು) ಸೋತ ಶರಣಾದಂತೆ-(Louis Towigbar) 13-ಅಕ್ಷರಗಳು ಕಾಗದ ಬರೆದು ಕೊಟ್ಟ. ಈ ಷರತ್ತುಗಳ ಫಲವಾಗಿ ಹಳೆಯ ಧ್ವನಿ ಇಳಿಸಿ ಅಮೆರಿಕಾ ಧ್ವಜ Stars and Stripes (13-ಅಕ್ಷರಗಳು) ಎತ್ತಿ ಮತ್ತೆ ಈ ಕೋಟೆಯ ಮೇಲ್ಗಡೆಗೆ ಹಾರಿಬಿಟ್ಟ ದಿನ ಕೂಡಾ 13 ಏಪ್ರಿಲ್, 1861 ಆಗಿತ್ತು. ಇದರ ದಿನಾಂಕ ಕೂಡಾ 'ಹದಿನಮೂರೇ' ಆಗಿದೆ. ಕಡೆಗೆ ಅಂಗಳ ಸಂಖ್ಯೆ 9 ಸೇರಿಸಿದರೆ 13+9=22

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೆ ಇದರಲ್ಲಿ 2+2 ಸೇರಿಸಿದರೆ 4 ಬರುತ್ತದೆ. ಈ 'ನಾಲ್ಕು' ಸಂಖ್ಯೆ ಅಮೆರಿಕಾ ಸ್ವಾತಂತ್ರ್ಯ ಅವತರಿಸಿದ ದಿನಾಂಕ 4 ಸಂಖ್ಯೆಯಿಂದಲೇ !

ಜನ್ಮದಿನ ಸಂಖ್ಯೆ ದೇಶದ ಒಂದು ಭವಿಷ್ಯತ್ತನ್ನು ಹೇಗೆ ಕಡೆದು ರೂಪಿಸುವುದು ಇದಕ್ಕಿಂತಲೂ ಯಾವ ವಿಜ್ಞಾನ (ಸೈನ್ಸ್) ಸ್ಪಷ್ಟವಾಗಿ ತೋರಿಸ ಬಲ್ಲದು ? ಕಾಲ ಬರೆದ–ಚರಿತ್ರೆಯನ್ನು ತಪ್ಪು ಲ್ಲಿ ಅಡಗಿಸಿಕೊಂಡು 'ಸಂಖ್ಯೆ ಗಳು' ಹೀಗೆ ಮುಂಚಿತವಾಗಿಯೇ ಬರಲಿರುವ ಭವಿಷ್ಯತ್ತನ್ನು ಸೂಚಿಸುವುದೇ ಅಲ್ಲದೆ–ಭವಿಷ್ಯತ್ತಿನಲ್ಲಿನ ಪ್ರತಿ ಸಣ್ಣ ಸಂಘಟನೆಗಳನ್ನು ಕೂಡಾ ಇವುಗಳನ್ನು ಪ್ರತಿಯೊಬ್ಬನಿಗೂ ಕಾಣಿಸುವಂತೆ ನಗ್ನ ಸತ್ಯವಾಗಿ ಪರಿಪಾಲಿಸುತ್ತವೆ ಎಂದು–ನಿರೂಪಿರುತ್ತಿವೆ ಈ ಸಂಖ್ಯಾಶಾಸ್ತ್ರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ-4

ಸಂಖ್ಯಾ ಜ್ಯೋತಿಷ್ಯ–ಆಧ್ಯಾತ್ಮಿಕ ವಿಜ್ಞಾನ

ಈ ದಿನ ಬಹಳ ಜನಕ್ಕೆ 'ಆಧ್ಯಾತ್ಮಿಕ ವಿಜ್ಞಾನ' ಅಂದರೇನೇ ಗೊತ್ತಿಲ್ಲ! 'ವಿಜ್ಞಾನ'ಕ್ಕೂ ಆಧ್ಯಾತ್ಮಿಕ ವಿಜ್ಞಾನಕ್ಕೂ ವ್ಯತ್ಯಾಸ ಏನೋ ಕೂಡ ಗೊತ್ತಿಲ್ಲ.

'ವಿಜ್ಞಾನ' ಅಂದರೆ ಹೊರಗೆ ಪ್ರಕೃತಿಯಲ್ಲಿನ ಒಂದು ಯಥಾರ್ಥದ ಮೇಲೆ ನಿತ್ಯಾವಾದ ವಿಷಯದ ಮೇಲೆ ಆಧಾರ ಪಟ್ಟಿರುವ ನಿರ್ದಿಷ್ಟವಾದ ವಿಷಯ ಪರಿಜ್ಞಾನ, ಇದನ್ನು ಇಂಗ್ಲಿಷ್‌ನಲ್ಲಿ 'ಸೈನ್ಸ್'ನೊಂದಿಗೆ ಸರಿ ಹೋಲಿಸಬಹುದು ! ಆದರೆ ಸೈನ್ಸ್ ನಿರ್ಧಿಷ್ಟವಾದ ವಿಜ್ಞಾನ ಅಲ್ಲವಲ್ಲ ! ಯಾವಾಗ ಅಂದರೆ ಆಗ ತನ್ನ ಸೂತ್ರಗಳನ್ನು ಬದಲಾಯಿಸಿಕೊಳ್ಳುವ ಸೈನ್ಸ್‌ಗೆ 'ವಿಜ್ಞಾನ' ಎಂಬ ಮಾತು ಸರಿಯಾದ ಅರ್ಥ ಆಗುವುದಿಲ್ಲ! ಮತ್ತೆ ನಿರ್ಧಿಷ್ಟವಾದ (exact) ವಿಜ್ಞಾನ (knowledge) ಎಂದು ಹೇಳಬಲ್ಲ ಶಾಸ್ತ್ರ ಯಾವುದು ? ಎಂದು ಆಲೋಚಿಸಿದರೆ ಇದಕ್ಕೆ ಸಂಖ್ಯಾ ಗಣಿತ (Arithmetic), ಕ್ಷೇತ್ರ ಗಣಿತ (Geometry) ಎಂದು ಹೇಳಬಹುದು. ಏಕೆಂದರೆ ಒಂದರಿಂದ ಒಂಬತ್ತರವರೆಗೂ ಅಂಕೆಗಳೂ 'ಸೊನ್ನೆ' ಸಂಖ್ಯೆಯನ್ನು ಭಾರತೀಯ ಋಷಿಗಳು ಯಾವಾಗ ಕಂಡುಕೊಂಡರೋ ತಿಳಿಯದಾದರೂ –ಇಂದಿನವರೆಗೂ ಯಾರೂ ಬೇರೊಂದು ಅಂಕೆ ಹೆಚ್ಚಾಗಿ ಯಾಗಲಿ, ಒಂದು ಅಂಕೆಯಲ್ಲಿ ಏನಾದರೂ ಲೋಪ ವಾಗಲಿ ಕಂಡುಹಿಡಿಯ ಲಾರದೆ ಹೋದರೆಂದರೆ- ಇಂದಿನ ಸೈನ್ಸ್‌ಗೆ ಇದೆಷ್ಟು ಭೇದವೋ ಊಹಿಸ ಬಹುದು !

Sri Vidyabharathi Book Centre, Sringeri

ಇದರಿಂದಾಗಿ ವಿಜ್ಞಾನ ಅಂದರೆ ಋಷಿಗಳ ಭಾಷೆಯಲ್ಲಿ ಅರ್ಥ ಏನೋ ಊಹಿಸಬಹುದು ! ಈ ವಿಜ್ಞಾನ ಎರಡು ವಿಧ. ಒಂದು ಭೌತಿಕವಾದ..... ಅಂದರೆ ಈ ಪದಾರ್ಥ ಪ್ರಪಂಚಕ್ಕೆ ಸಂಬಂಧಪಟ್ಟ ವಿಷಯಗಳ ಕುರಿತ ವಿಜ್ಞಾನ ಇದು 'ಗಣಿತ' (Mathematics), ಎರಡನೆಯದು ಆಧ್ಯಾತ್ಮಿಕ ವಿಷಯ ಗಳಿಗೆ ಸಂಬಂಧಿಸಿದ ವಿಜ್ಞಾನ. ಇಲ್ಲಿ ಆಧ್ಯಾತ್ಮಿಕ - ಎಂದೊಡನೇ 'ಮತ' 'ದೇವರು' 'ಪೂಜೆಗಳು' 'ನಂಬಿಕೆಗಳೂ' 'ವಿಶ್ವಾಸಗಳೂ' ಎಂದ ಭಯಪಡ ಬಾರದು !

'ಆಧ್ಯಾತ್ಮಿಕ' ವಿಷಯವೆಂದರೆ ಕಣ್ಣುಗಳಿಗೆ ಗೋಚರಿಸದ ಒಂದಾ ನೊಂದು ಶಕ್ತಿ ಈ ಪ್ರಪಂಚವನ್ನೆಲ್ಲ ಕ್ರಮ ತಪ್ಪದಂತೆ ನಡೆಸುತ್ತಿರುವುದು ಯಾವುದಾದರೆ ಇದೆಯೋ – ಅಂದರೆ ಸೂರ್ಯ ಹುಟ್ಟುವುದಕ್ಕೆ ಈ ಜೀವರಾಶಿ ಜನಿಸುವುದಕ್ಕೆ, ಪ್ರತಿ ಸೆಕೆಂಡೂ ನಮ್ಮ ಉಸಿರು, ಗುಂಡಿಗೆ ಹೊಡೆದುಕೊಳ್ಳು ತ್ತಿರುವ ಹಾಗೆ ನೋಡುವ ಶಕ್ತಿ ತನಗೆ ತಾನು 'ಇದ್ದೇನೆ' ಎಂದು ತಿಳಿಸುವ 'ನಾನು' ಎಂಬ ಅನುಭೂತಿಯನ್ನು ಉಂಟುಮಾಡುವುದು ಸೈನ್ಸ್‌ನಲ್ಲಿ ಹೆಸರು ಇಲ್ಲದ್ದು, ಯಾವುದಾದರೆ ಇದೆಯೋ ಅದಕ್ಕೆ ಸಂಬಂಧ ಪಟ್ಟದ್ದು – ಎಂದು ಹೇಳಬಹುದು ! ಕಣ್ಣಿಗೆ ಕಾಣಿಸದೆ, ಇಲ್ಲವೇನೋ ಅನಿಸಿದರೂ -- ಗಾಳಿಯಂತೆ ಮನಸ್ಸಿನಂತೆ, ಬದುಕಿದ್ದೇನೆ ಎಂಬ ಸತ್ಯದಂತೆ -ಅನುಭವದಿಂದ 'ಇರುವುದು' ಎಂದು ನಮ್ಮೆಲ್ಲರಿಗೂ ತಿಳಿಸುವುದು 'ಆಧ್ಯಾತ್ಮಿಕ ವಿಜ್ಞಾನ' (Spritul Knowledge).

ಆಧ್ಯಾತ್ಮಿಕ ವಿಜ್ಞಾನ ಅಂದರೆ ಈ ಕಂಗಳಿಗೆ ಗೋಚರಿಸುವ ಜಗತ್ತಿನ ಹಿಂದೆ ನಿಂತು ಕಂಗಳಿಗೆ ಕಾಣಿಸದ ಅನೇಕ ವಿಷಯಗಳ ಕುರಿತ ರಹಸ್ಯ ವಿಜ್ಞಾನ 'ರಹಸ್ಯ' ಏಕೆಂದರೆ - ಯಾರೋ ಹೇಳದೇ ಬಚ್ಚಿಟ್ಟಿದ್ದಾರೆ ಎಂದು (ಬ್ರಾಹ್ಮ

CC-O. In Public Domain. Digitized by eGangotri

ಗಾರು) ಅಲ್ಲ ಪ್ರಕೃತಿಯಲ್ಲೇ ರಹಸ್ಯವಾಗಿ ಅಡಗಿರುವ, ಆಳವಾಗಿ ಏಕಾಗ್ರತೆಯಿಂದ ಹುಡುಕಿದರ ಹೊರತು (ಲೆಕ್ಕದ ಉತ್ತರಕ್ಕಾಗಿ ಹೊಡೆದಾಡಿದಂತೆ ಹುಡಿಕಿದರೆ) ತಿಳಿಯದ ಅನುಭೂತಿಯಾಗಿ ಸಿಗುವುದು, ಎಂದು ಅರ್ಥ ! ಮೇಲೆ ಅಡಗಿರುವುದು, ಎಂದು ಅರ್ಥ ಅದು ರಹಸ್ಯ ವಿಜ್ಞಾನ ಅಂದರೆ !

ಇದಕ್ಕೆ ಮುನ್ನ 'ಭೌತಿಕ ವಿಜ್ಞಾನ' ಕ್ಕೆ ಉದಾಹರಣೆ ಹೇಗೆ ಇರುವುದೋ ಹೇಳುತ್ತಾ ಸಂಖ್ಯಾಗಣಿತ (Arthimetic) ಉದಾಹರಿಸಿದೆ.

ಈಗ 'ಆಧ್ಯಾತ್ಮಿಕ ವಿಜ್ಞಾನ' ಹೇಗಿರುತ್ತದೋ ಉದಾಹರಣೆಯೊಂದಿಗೆ ತಿಳಿಸಬೇಕೆಂದರೆ 'ಸಂಖ್ಯಾ ಶಾಸ್ತ್ರ' (Knowledge of the Secrct power of Numbers) ಸಂಖ್ಯಾಜ್ಯೋತಿಷ್ಯ (Astro Numerology) ಗಳೆಂದು ಹೇಳಬಹುದು.

ಸಂಖ್ಯಾ ಗಣಿತ–ಸಂಖ್ಯಾಶಾಸ್ತ್ರ ವ್ಯತಾಸ ?

ಎರಡೂ ಅಂಕೆಗಳ ಕುರಿತೇ ಅಲ್ಲವೇ ! ವ್ಯತ್ಯಾಸ ಏನೆಂದು ಅಂದು ಕೊಳ್ಳಬಹುದು ತಿಳಿಯದವರು ! ವ್ಯತ್ಯಾಸವಿದೆ. ಆ ವ್ಯತ್ಯಾಸ ಒಂದೇ.

ಒಂದು ಭೌತಿಕ ಪ್ರಪಂಚ (Extrnal world) ಕುರಿತು. ಇದು ಸಂಖ್ಯಾ ಗಣಿತ ! ಹೊರ ಪ್ರಪಂಚದಲ್ಲಿ ವಸ್ತುಗಳನ್ನು ಲೆಕ್ಕ ಹಾಕಲಿಕ್ಕೆ ಗುಣಿಸಲಿಕ್ಕೆ ಸಂಖ್ಯೆಗಳನ್ನು ಅಂಕೆಗಳಿಂದ ಅಳೆಯುವುದಕ್ಕೆ ಇದು ಕೆಲಸಕ್ಕೆ ಬರುತ್ತದೆ.

ಎರಡು ಹೊರಗಿನ ಪ್ರಪಂಚದಲ್ಲಿನ ವಸ್ತುಗಳಿಗೆ ಅತೀತವಾದ,

Sri Vidyabharathi Book Centre, Shirgeri

CC-O. In Public Domain. Digitized by eGangotri

ಪ್ರಪಂಚವನ್ನೇ ನಡೆಸುವ 'ದೈವ ಶಕ್ತಿ'ಗೆ ಸಂಬಂಧಿಸಿದ್ದು ! ಇದು ಇದೆ ಎಂದೇ ಸೈನ್ಸ್‌ಗೆ ತಿಳಿಯದು.

ಇದು ಇಲ್ಲವೆಂದು 'ನಾಸ್ತಿಕರ' ವಾದ ! ಈ ಕಣ್ಣಿಗೆ ಕಾಣಿಸದ 'ಶಕ್ತಿ' 'ಆದೃಷ್ಟ ಶಕ್ತಿ' ಇಲ್ಲವೇ Fate ಇಲ್ಲವೇ ಕಾಲದವೊಂದು ಗತಿ. 'ಮೂಢ ವಿಶ್ವಾಸ' ಎಂದು ವಾದಿಸುತ್ತಾರೆ ! ಇದರ ಕುರಿತು ಹೀಗೇಕೆ ವಾದ ಜರುಗುತ್ತದೆ ಎಂದರೆ - ಈ 'ವಿಜ್ಞಾನ' ಎಲ್ಲರಿಗೂ ಎಟುಕುವಂತೆ ಇಡದೆ ಪ್ರಾಚೀನ ಋಷಿಗಳು ರಕ್ಷಿಸುತ್ತಾ ಬಂದ ಆಧ್ಯಾತ್ಮಿಕ ವಿಜ್ಞಾನಕ್ಕೆ ಸಂಬಂಧಿಸಿದ್ದರಿಂದ !

ಈ 'ರಹಸ್ಯ ವಿಜ್ಞಾನ' ಮೂಢ ನಂಬಿಕೆ ಅಲ್ಲವೆಂದು 'ಪರಮ ಗುರುಗಳ' ಹತ್ತಿರ ಬಚ್ಚಿಟ್ಟ ವಿಜ್ಞಾನ ಎಂದು ಅದು ಸೈನ್ಸ್ ಗಿಂತಲೂ ಭಯಂಕರವಾದ ಶಕ್ತಿಯುಳ್ಳ 'ವಿಜ್ಞಾನವೆಂದು' ಅದು ಪ್ರತಿಯೊಬ್ಬನ ಕೈಯಲ್ಲಿ ಇಟ್ಟರೆ ಮಾನವ ಜಾತಿಗೆ ವಿನಾಶ ಎಂದು 'ರಹಸ್ಯ' ವಾಗ ಬಚ್ಚಿಟ್ಟರು ಎಂದು ಹೆಳುತ್ತಾ ಈ ರಹಸ್ಯ ವಿಜ್ಞಾನ ಎಂಥದ್ದೋ ನಿಮಗೆ (ಸಾಧಕರು ಆದ್ದರಿಂದ) ಪರಿಚಯಿಸುತ್ತೇನೆ ! ಆಂದರೆ ಎಲ್ಲವನ್ನೂ ಹೇಳುತ್ತೆನೆ ಎಂದಲ್ಲ ! ನಿಜಕ್ಕೂ 'ಆಧ್ಯಾತ್ಮಿಕ ವಿಜ್ಞಾನ' ಅನ್ನೋದು ಸುಳ್ಳಲ್ಲ - ಆದು ಈ ಕಾಲದಲ್ಲಿ ನಡೆದಿದ್ದು, ನಡಿಯಲಿರುವುದನ್ನು ಮುಂಚಿತವಾಗಿ ತಿಳಿಸುವ ಮಹಾ ವಿಜ್ಞಾನ ಎಂದು ತಿಳಿಯಪಡಿಸುವುದುರವರೆಗಷ್ಟೇ ಈ ಪರಿಚಯ.

ಈ ಆಧ್ಯಾತ್ಮಿಕ ವಿಜ್ಞಾನದಲ್ಲಿನ ಸಾವಿರ ಕಿರಣಗಳಲ್ಲಿ ಒಂದು ಮಾತ್ರವೇ ಈ 'ಸಂಖ್ಯಾಶಾಸ್ತ್ರ' ! ಆಥವಾ ಸಂಖ್ಯಾ ಜ್ಯೋತಿಷ್ಯ. ಇದು ವ್ಯಕ್ತಿಗಳ ಕರ್ಮವನ್ನೂ ದೇಶಗಳ ಭವಿಷ್ಯತ್ತನ್ನೂ ಮೊದಲೇ ನಿರ್ಣಯಿಸುವ 'ವಿಧಿ' (Fatc) 'ದೈವ ನಿರ್ಣಯ' (Providedic or Distiny) ವನ್ನು ಹೇಗೆ ಅರಿಯಲಿಕ್ಕೆ ಉಪಯೋಗ ಪಡುತ್ತದೋ ಉದಾಹರಣೆಯೊಂದಿಗೆ ನಿರೂಪಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲು ಇದು 'ಮೂಢ ವಿಶ್ವಾಸ' ಎಂಬ ಭಾವನೆಯನ್ನು ಒಂದು ಪಕ್ಕಕ್ಕೆ ನೆಟ್ಟು ಖಾಲಿ ಮನಸ್ಸಿನಿಂದ ಕೇಳಿರಿ - ಪಕ್ಷಪಾತವಿಲ್ಲದ ನಿರ್ಮಲವಾದ ಬುದ್ಧಿಯಿಂದ ಈ ಸಂಖ್ಯೆಗಳನ್ನು ಓದಿರಿ ! ಯೋಚಿಸಿರಿ ! ನಿರ್ಣಯ ನಿಮ್ಮ ಅದೃಷ್ಟಾನೇ !

ಹೆಸರು–ಅದೃಷ್ಟ

ಉದಾಹರಣೆಗೆ ಒಬ್ಬ ವ್ಯಕ್ತಿ ಹೆಸರು ಆತ ಹುಟ್ಟಿದ ಜನ್ಮ ದಿನಾಂಕ ದೊಂದಿಗೆ ಸರಿಬರುತ್ತದೋ ಇಲ್ಲವೋ ನೋಡುವುದರ ಮೂಲಕ ಆ ಮನುಷ್ಯನ ನಿತ್ಯ ಜೀವನದಲ್ಲಿ ನಡೆಯುವ ಅದೃಷ್ಟ. (Good-luck) ದುರದೃಷ್ಟ (Bad-luck)ವನ್ನು ತಿಳಿದುಕೊಳ್ಳಬಹುದು.

ಪ್ರಪಂಚದಲ್ಲಿನ ವ್ಯಕ್ತಿಗಳನ್ನು ಮೂರು–ವಿಧಗಳಾಗಿ ವಿಂಗಡಿಸಬಹುದು. 1. ಸಾಮಾನ್ಯ ಮನುಷ್ಯರು (ಮಧ್ಯಮ ವರ್ಗದ ಅದೃಷ್ಟ) 2. ವಿಪರೀತ ವಾದ ಅದೃಷ್ಟವಂತರು (Very lucky) 3. ಹಾಗೆಯೇ ಕಡು ದುರ ದೃಷ್ಟವಂತರು (Bad luck) ಈ ಮೂರು-ವಿಧವಾದ ಮನುಷ್ಯರನ್ನು ಉದಾಹರಣೆಯಿಂದ ತೋರಬೇಕೆಂದರೆ ಅಮೆರಿಕಾ ಅಧ್ಯಕ್ಷ ಜಾರ್ಜಿ ವಾಷಿಂಗ್‌ಟನ್, ಇಂಗ್ಲೆಂಡ್ ರಾಜ ಆರನೇ ಜಾರ್ಜಿ ಚಕ್ರವರ್ತಿ ಅಥವಾ ಪ್ರಪಂಚವನ್ನೆಲ್ಲಾ ಸೂರ್ಯ ಅಸ್ತಮಿಸದ ದೊಡ್ಡ ಸಾಮ್ರಾಜ್ಯಕ್ಕೆ ಮಹಾ ರಾಣಿಯಾದ (Queen Victoria) ವಿಕ್ಟೋರಿಯಾ ರಾಣಿ, ಈ ದರ್ಜೆಯ ವ್ಯಕ್ತಿಗಳ ಜಾತಕಗಳು, ತುಂಬಾ ಅದೃಷ್ಟವಂತರ ದರ್ಜೆಗೆ ಸೇರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರದೃಷ್ಟವಂತರು

ಹಾಗೆಯೇ ತುಂಬಾ 'ದುರದೃಷ್ಟವಂತರ' ಜಾತಕಗಳು ಕೆಲವು ಪ್ರತ್ಯೇಕವಾಗಿ ಪರಿಶೀಲನಾ ದೃಷ್ಟಿಯಿಂದ ನಿಮ್ಮಂತಹ ವಿದ್ಯಾರ್ಥಿಗಳು ತಿಳಿದುಕೊಳ್ಳುವುದಕೋಸ್ಕರ ಕೊನೆಯಲ್ಲಿ ತೋರಿಸಲಾದ ಅನುಬಂಧದಲ್ಲಿ ಕೊಡಲಾಗಿದೆ. ಇಂಥಹ ವ್ಯಕ್ತಿಗಳ ಜನ್ಮ ದಿನಾಂಕದಲ್ಲಿನ ಅಂಕೆಗಳು 'ದುರದೃಷ್ಟವನ್ನು' ತೋರಿಸುವುದೇ ಅಲ್ಲದೆ ಅವರ ಹೆಸರಿನಲ್ಲಿನ ಸಂಖ್ಯೆಗಳು ಕೂಡಾ ಮತ್ತಷ್ಟು ದುರದೃಷ್ಟರನ್ನು ಸೂಚಿಸುತ್ತದೆ ! ಹಾಗಿಯೇ ಇವರು ಹುಟ್ಟಿದ ಸಂವತ್ಸರ ಸಂಖ್ಯೆ—ಜನ್ಮ ದಿನಾಂಕ ಸಂಖ್ಯೆ, ಹುಟ್ಟಿದ ಸಂವತ್ಸರ ಸಂಖ್ಯೆಗಳು ಕೂಡಾ ಒಂದನ್ನು ಇನ್ನೊಂದು ಮತ್ತಷ್ಟು ಬಲಪಡಿಸಿ ಇರುವುದರಿಂದ ತುಂಬಾ ದುರದೃಷ್ಟವಂತರಾಗಿ, ಹುಟ್ಟುತ್ತಾರೆ.

ಹಾಗೆ ಆಗದೆ ಕಲಬೆರಕೆಯಾಗಿ ಒಳ್ಳೆಯದು-ಕೆಟ್ಟದ್ದು ಕೂಡಿ ಹೆಸರು ಜನ್ಮತೇದಿ ಮಾಸ, ಸಂವತ್ಸರದಲ್ಲಿನ ಸಂಖ್ಯೆಗಳು ಏರ್ಪಟ್ಟರೆ ಮಧ್ಯಮವರ್ಗ-ಅಂದರೆ 'ಸಾಮಾನ್ಯ ಅದೃಷ್ಟವಂತರು' ಹುಟ್ಟುತ್ತಾರೆ.

ಈ ಮಧ್ಯಮ ವರ್ಗ ಮನುಷ್ಯರಿಗೆ ಸ್ವಲ್ಪ ಮಟ್ಟಿಗಾದರೂ ತಮ್ಮ ಸಂಖ್ಯೆಯಲ್ಲಿನ ಅದೃಷ್ಟವನ್ನು ಮೆರಗುಪಡಿಸಿಕೊಳ್ಳಬಹುದು. ಅದು ಹೇಗೆ ?

ಅದೃಷ್ಟ ಬದಲಾಯಿಸಿಕೊಳ್ಳುವುದು ಹೇಗೆ ?

ತನ್ನ ಹುಟ್ಟಿದ ದಿನಾಂಕವನ್ನು ಬದಲಾಯಿಸಲಾರನಲ್ಲ ! ಹಾಗೆಯೇ ಹುಟ್ಟಿದ ತಿಂಗಳು, ಸಂವತ್ಸರ ಕೂಡಾ ಬದಲಾಯಿಸಿಕೊಳ್ಳಲು ಅವಕಾಶವಿಲ್ಲ!

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ಬದಲಾಯಿಸಿಕೊಳ್ಳಲಿಕ್ಕೆ ಇರುವ ಅವಕಾಶವೆಲ್ಲಿ ಹೆಸರಿನಿಂದ ಏರ್ಪಡುವ ಸಂಖ್ಯೆಗಳ ಅದೃಷ್ಟವನ್ನೇ.

ಅಂದರೆ ತನ್ನ ಹೆಸರಿನಲ್ಲಿನ ಅಂಕೆಗಳು ತನ್ನ ಹುಟ್ಟಿದ ತಾರೀಖಿನಲ್ಲಿನ ಸಂಖ್ಯೆಗಳಂತೆ ಸರಿದಿದ್ದುಕೊಳ್ಳುವುದಾದರೆ ಜೀವನದಲ್ಲಿ ಬಹಳ ಬದಲಾವಣೆಗಳು ಸರಳವಾಗಿಯೂ, ಏರುಪೇರುಗಳಲ್ಲದೆಯೂ ಸಾಗಿ ಬಿಡುತ್ತದೆ! ಇದು 'ಮಧ್ಯಮ ವರ್ಗದ ಅದೃಷ್ಟವಂತರಿಗೆ' ಮಾತ್ರವೇ ಸಾಧ್ಯವೂ ಆಗತ್ಯವೂ ಕೂಡಾ! ಇಷ್ಟಕ್ಕೂ ಹೆಸರಿನಲ್ಲಿನ ಅಕ್ಷರಗಳ ಸಂಖ್ಯೆಗಳನ್ನು ಅವುಗಳ ಅದೃಷ್ಟವನ್ನು ತಿಳಿದುಕೊಳ್ಳುವುದು ಹೇಗೆ?

ಹೆಸರಿನಲ್ಲಿನ ಅದೃಷ್ಟ ತಿಳಿಯುವುದು ಹೇಗೆ?

ಮೊದಲು ನಿಮ್ಮ ಹೆಸರು ಇಂಗ್ಲೀಷ್‌ನಲ್ಲಿ ಬರೆದು ಅದಕ್ಕೆ ಸಂಖ್ಯಾ ಶಾಸ್ತ್ರ ಪ್ರಕಾರ ಗಣಿತ ಮಾಡಿ ಲೆಕ್ಕ ಹಾಕುವುದು.

ಇದು ಮಾಡೋದು ಹೇಗೆ? ಇಂಗ್ಲೀಷ್‌ನಲ್ಲಿ ಪ್ರತಿ ಅಕ್ಷರಕ್ಕೂ ಒಂದು ಸಂಖ್ಯೆ ಬೆಲೆಯಿದೆ. ಅದು ಗೊತ್ತಾಗಬೇಕು! ಇದು ಗೊತ್ತಾಗಬೇಕೆಂದರೆ 'ರಹಸ್ಯ ಸಂಖ್ಯಾ ನಿಘಂಟವು' (Mystic Secret Alphabet) ತಿಳಿಯಬೇಕು! ಇದು ಬಹಳ ಕಾಲ ಗುಪ್ತವಾಗಿ ಇಡಲಾಗಿತ್ತು. ಅದು ಈ ನಂತರ ಕೊಡಲಾಗಿರುವ ಪಟ್ಟಿಕದಲ್ಲಿ ತೋರಿಸಲಾಗಿದೆ.

ಮೇಲಿನ ಪದ್ಧತಿ ಪ್ರಕಾರ ನಿಮ್ಮ ಪೂರ್ತಿ ಹೆಸರು ಬರೆಯಬೇಕು. ಪ್ರತಿ ಅಕ್ಷರವು ಅದರ ಎದುರಿನಲ್ಲಿ ಇರುವ ಸಂಖ್ಯೆಯನ್ನು ನೋಟ್ (Note)

Sri Vidyabharathi Book Gallery, Sringeri

CC-O. In Public Domain. Digitized by eGangotri

ಮಾಡಿಕೊಳ್ಳಬೇಕು ! ಹಾಗೆ ಬಂದ ಅಂಕೆಗಳನ್ನು ಕೂಡಿದರೆ ಉಂಟಾಗುವ ಸಂಖ್ಯೆಗಳಿಂದ ನಿಮ್ಮ ಹೆಸರು ಅದೃಷ್ಟವಾದುದೋ ದುರಾದೃಷ್ಟವಾದುದೋ ತಿಳಿದು ಬಿಡುತ್ತದೆ ! ನಿಮ್ಮ ಹೆಸರಿನಲ್ಲಿನ ಅಂಕೆಗಳು ಒಟ್ಟಾಗಿ ಕೂಡಿದರೆ ಬರುವ ಸಂಖ್ಯೆ—ನಿಮ್ಮ ಹುಟ್ಟಿದ ದಿನಾಂಕದೊಂದಿಗೆ ಸರಿ ಹೋದರೆ ಅದು ತುಂಬಾ ಅದೃಷ್ಟ ಇಲ್ಲವೇ ! ಹುಟ್ಟಿದ ದಿನಾಂಕದಲ್ಲಿನ ಸಂಖ್ಯೆ, ನಿಮ್ಮ ಹೆಸರಿನಲ್ಲಿನ ಸಂಖ್ಯೆ ಸೇರಿಸಿದರೆ—ಒಂದು ಎರಡನೇ ತರಗತಿ ! ಇಲ್ಲವೇ ನಿಮ್ಮ ಜನ್ಮ ದಿನಾಂಕ, ಹೆಸರು ಸೇರಿಸಿದರೆ ಒಂದು 'ದುರದೃಷ್ಟ'ವಾದ ಸಂಖ್ಯೆ, ಬಂದರೆ ಇದರ ಫಲ ಪೂರಾ ವ್ಯತಿರೇಕವೆಂದೇ ಹೇಳಬೇಕು.

ಸಾಧಾರಣವಾಗಿ ಒಂಟಿ ಸಂಖ್ಯೆಗಳ (Single digits)ಲ್ಲಿ ಇವು ಗಳನ್ನು 1,3,6,9, ಅದೃಷ್ಟದ ಸಂಖ್ಯೆಗಳಾಗಿ ಭಾವಿಸುತ್ತಾರೆ. ಆದರಲ್ಲೂ 6,1,3, ಮತ್ತಷ್ಟು ಶುಭಕರದಾದ ಫಲಗಳನ್ನು ನೀಡುತ್ತದೆ. ಹಾಗೆಯೇ 6 ಅಂಕೆ ತುಂಬಾ ವ್ಯತಿರೇಕ ಫಲಗಳನ್ನು ಕೊಡುವ ಸಂಖ್ಯೆ ; 4 ಸಂಖ್ಯೆ, ಜೀವನದಲ್ಲಿ ಪರೀಕ್ಷೆಗಳನ್ನು ಹೆಚ್ಚು ಕಡಿಮೆಗಳನ್ನು ಸೂಚಿಸುತ್ತದೆ. ಇವು ಒಂಟಿ ಅಕ್ಷರಗಳ ಲಕ್ಷಣ.

ಹೆಚ್ಚು ಅಂಕೆಗಳ ಸಂಖ್ಯೆಗಳು (Compouud Numbcrs)

ಈ ಸಂಖ್ಯಾಶಾಸ್ತ್ರದಲ್ಲಿ 1 ರಿಂದ 9ರವರೆಗೂ ಬರುವುದು.

'ಒಂಟಿ ಸಂಖ್ಯೆಗಳು.' ಹಾಗಲ್ಲದೆ 10ಆದಕ್ಕೆ ಮೀರಿ ಬರುವ ಸಂಖ್ಯೆ ಗಳು 'ಹೆಚ್ಚು ಅಂಕೆಗಳ ಸಂಖ್ಯೆ'ಗಳು ಹೀಗೆ ಹೆಚ್ಚು ಅಂಕೆಗಳಿರುವ ಸಂಖ್ಯೆ ಗಳಲ್ಲಿ 13, 16, 22, 26, ತುಂಬಾ ವ್ಯತಿರಿಕ್ತ ಫಲಗಳನ್ನು ಕೊಡುವ ಸಂಖ್ಯೆಗಳು ! ಹಾಗೆನೆ 19, 27, 32, 36, ಅದೃಷ್ಟ ಸೂಚಕಗಳು.

ನಿಮ್ಮ ಜನ್ಮದಿನಾಂಕದ ಸಂಖ್ಯೆಯನ್ನು ಹೆಸರಿನಲ್ಲಿ ಸೇರಿಸಿದರೆ ಬರುವ ಸಂಖ್ಯೆಗಳು, ಯಾವ ಸಂಖ್ಯೆಗಳಲ್ಲಿ ಏರ್ಪಾಡುತ್ತವೋ ಇದರ ಮೂಲಕ ಅದೃಷ್ಟ ಫಲ ದುರದೃಷ್ಟ ಫಲಗಳನ್ನು ನೀಡುವುದು ಸ್ಪಷ್ಟವಾಗುತ್ತದೆ !

ಈ ಸಂಖ್ಯೆಗಳ ಕುರಿತು ವಿವರಗಳು ಮುಂದಿರುವ ಅಧ್ಯಾಯದಲ್ಲಿ ತಿಳಿಸು ತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ-5

ನಿಮ್ಮ ಹೆಸರಿನಲ್ಲಿನ ಅಂಕೆ-ನಿಮ್ಮ ಅದೃಷ್ಟ

ಹಿಂದಿನ ಅಧ್ಯಾಯದಲ್ಲಿ ನಿಮ್ಮ 'ಜನ್ಮ ದಿನಾಂಕ'ದಿಂದ ಲೆಕ್ಕ ಮಾಡಿ 'ಅದೃಷ್ಟ ಸಂಖ್ಯೆ'ಯನ್ನು ತಿಳಿದುಕೊಳ್ಳುವ ಪದ್ಧತಿ ತಿಳಿಸುತ್ತೇನೆ.

ಅದಕ್ಕೆ ಮೊದಲು ನಿಮ್ಮ ಹೆಸರನ್ನು ಇಂಗ್ಲೀಷ್ ಅಕ್ಷರದಲ್ಲಿ ಬರೆಯಬೇಕು ! ಹೀಗೆ ಬರೆಯುವಾಗ ಒಂದೊಂದು ಅಕ್ಷರವನ್ನೂ, ಬಿಡಿಬಿಡಿಯಾಗಿ ಬರುವಂತೆ-ಬರೆಯಬೇಕು ಆನಂತರ ನಿಮ್ಮ ಹೆಸರಿನಲ್ಲಿನ ಪ್ರತಿ 'ಅಕ್ಷರಕ್ಕೂ' ಸಮಾನವಾದ 'ಸಂಖ್ಯೆ'ಯನ್ನು ಹಾಕಿ, ನಿಮ್ಮ ಹೆಸರನ್ನು ಅಂಕೆಗಳಾಗಿ ಬದಲಾಯಿಸಬೇಕು ! ಅವುಗಳಿಗೆ ಯಾವ ಅಕ್ಷರಕ್ಕೆ ಯಾವ ಅಂಕೆ ಹಾಕಬೇಕೋ ಈ ಪಕ್ಕದ ಪುಟದ ಪಟ್ಟಿಕೆ ನೋಡಿದರೆ ನಿಮಗೆ ಗೊತ್ತಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಿಕ

ನಿಮ್ಮ ಹೆಸರಿನಲ್ಲಿನ ಅಕ್ಷರಗಳು–ಅಂಕೆಗಳು

A—1	N—5
B—2	O—7
C—2	P—8
D—4	Q—1
E—5	R—2
F—8	S—3
G—3	T—4
H—8	U—6
I—1	V—6
J—1	W—6
K—2	X—6
L—3	Y—1
M—4	Z—7

ಮೇಲಿನ ಪಟ್ಟಿಕ (Table)ವಲ್ಲಿ ತೋರಿಸಿರುವ ರೀತಿಯಲ್ಲಿ ಪ್ರತಿ ಅಕ್ಷರಕ್ಕೂ ಎದುರಿನಲ್ಲಿರುವ ಸಂಖ್ಯೆಯನ್ನು ಬರೆದು ಕೊಳ್ಳಬೇಕು: ಹಾಗೆ ಬರೆದ ಅಂಕೆಗಳು ಕೂಡಿದಕೆ ಬರುವ ಸಂಖ್ಯೆ ನಿಮ್ಮ ಹೆಸರಿನಲ್ಲಿನ 'ಅದೃಷ್ಟ' ಇಲ್ಲವೇ 'ದುರದೃಷ್ಟ'ದ ಬಗ್ಗೆ ತಿಳಿಸುತ್ತದೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ಹೇಗೆ ಮಾಡಬೇಕು ಎಂದು ಗುಣಿಸುವ ಕ್ರಮವನ್ನು ಈ ಕೆಳಗೆ ಉದಾಹರಣೆಯೊಂದಿಗೆ ನಿಮಗೆ ಚೆನ್ನಾಗಿ ಅರ್ಥವಾಗುವ ರೀತಿ ವಿವರಿಸುತ್ತೇನೆ.

ಉದಾಹರಣೆಗೆ–'ಎನ್. ಟಿ. ರಾಮರಾವ್' ಅನ್ನೋ ಹೆಸರನ್ನು ತೆಗೆದು ಕೊಳ್ಳೋಣ.

ಆ ಹೆಸರಿಗೆ ಅದೃಷ್ಟ ಸಂಖ್ಯೆ (Lucky number) ಬೇಕು ! ಆ ಹೆಸರನ್ನು ಇಂಗ್ಲೀಷ್‌ನಲ್ಲಿ ಬರೆಯಬೇಕು.

N.T.RAMARAO ಹೀಗೆ.

N=5	A=1	R=2
T=4	M=4	A=1
R=2	A=1	O=7
	ಒಟ್ಟು	27, 2+7=9

ಮೇಲಿನ ವಿಧವಾಗಿ ಗಣಿತ ಮಾಡಿದ ಸಂಖ್ಯೆಯಿಂದ ಏರ್ಪಟ್ಟ 'ನಿಮ್ಮ ಹೆಸರಿನ ಒಂದು ಅದೃಷ್ಟ ಸಂಖ್ಯೆ' (Lucky Numberof Name) ಎಂದಾಯಿತು ! ಇದು ಸಂಖ್ಯಾ ಶಾಸ್ತ್ರದಿಂದ ನಿಮ್ಮ ಹೆಸರು ಅದೃಷ್ಟವನ್ನು ಸೂಚಿಸುತ್ತದೋ ಇಲ್ಲವೋ ತಿಳಿದುಕೊಳ್ಳಲಿಕ್ಕೆ ಮುಖ್ಯವಾದ ಆಧಾರ. ಹೀಗೆ ಹೆಸರಿನ ಮೂಲಕ ಏರ್ಪಟ್ಟ ಸಂಖ್ಯೆಗಳಿಗೆ ಫಲಗಳು ಈ ಕೆಳಗಿನ ಪಟ್ಟಿಕದಲ್ಲಿ ತೋರಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು-1

ಸೃಷ್ಟಿಗೆ ಆದಿ ಆದ ಸೂರ್ಯನಿಗೆ ಸಂಕೇತ. ವಾರಗಳಲ್ಲಿ ಮೊದಲನೆಯದಾದ 'ಆದಿವಾರ' ಇದಕ್ಕೆ ಒಳ್ಳೆಯ ದಿನ.

ಈ ಸಂಖ್ಯೆ ಹೆಸರುಳ್ಳ ಅಂಕೆಯಲ್ಲಿ ಜನಿಸಿದವರಿಗೆ ತಮ್ಮ ವೃತ್ತಿಯಲ್ಲಿ (Job) ಇಲ್ಲವೇ ಜೀವನೋಪಾಧಿಯಲ್ಲಿ (Career) ಪ್ರಥಮ ಸ್ಥಾನ ಹೊಂದಬೇಕು ಅನ್ನೋ ಆಕಾಂಕ್ಷೆ ತೀವ್ರವಾಗಿರುತ್ತದೆ, ವಿದ್ಯಾರ್ಥಿಗಳಾದರೆ ಕ್ಲಾಸಿನಲ್ಲಿ ಫಸ್ಟ್ (First) ನಲ್ಲೇ ಇರಬೇಕೆಂದು ಇಲ್ಲವೇ ತಾನು ಕ್ಲಾಸ್‌ಗೆ 'ಲೀಡರ್' ಆಗಿ ಯಾವುದೋ ವಿಧವಾದ ನಾಯಕತ್ವಕ್ಕಾಗಲಿ ಪ್ರಯತ್ನಿಸುವ ಸ್ವಭಾವ ಇವರಲ್ಲಿ ಇರತ್ತದೆ.

ಜೀವನದಲ್ಲಿ ಇವರ ಆದರ್ಶ (Idel) ಉನ್ನತ ಪದವಿಗಳಿಗಾಗಿ, ಸಮಾಜದಲ್ಲಿ ಅಗ್ರಸ್ಥಾನಕ್ಕಾಗಿ ಇಲ್ಲವೇ ದೊಡ್ಡ ದೊಡ್ಡ ಅಧಿಕಾರಕ್ಕಾಗಿ-ಇವರ ಸ್ವಭಾವ ಆಕರ್ಷಿಸಲ್ಪಡುತ್ತದೆ. ಇವರಲ್ಲಿ ಬಹಳ ಜನ ದೇಶನಾಯಕರೋ ಸರ್ಕಾರಿ ಅಧಿಕಾರಿಗಳೋ ಅಥವಾ ಕಲೆಗಳಲ್ಲೋ ವಿದ್ಯಾ ವಿಷಯಗಳಲ್ಲೋ ಅಗ್ರಸ್ಥಾನ ವಹಿಸಿದ ಪ್ರಮುಖ ವ್ಯಕ್ತಿಗಳಲ್ಲೂ ಕೂಡ ಈ -9ರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ.

ಸಾಧಾರಣವಾಗಿ ಇವರಿಗೆ ಸಂಸಾರದಲ್ಲಿ ಇವರ ಹೆಂಡತಿಯಾಗಲಿ, ಗಂಡನಾಗಲಿ ಇವರ ನಡತೆಯನ್ನು ಅರ್ಥಮಾಡಿ ಕೊಳ್ಳದೆ ಇರುವುದು, ಅಥವಾ ಸಹಿಸಲಾರದೆ ಹೋಗುವುದು ನಡೆಯುತ್ತದೆ. ಹತ್ತಿರದ ಬಂಧುಗಳ ಸಹಕಾರವಿಲ್ಲದೆ ಹೋಗುವುದು ಕೂಡಾ ಸೂಚಿಸಲ್ಪಡುತ್ತದೆ. ವಿದೇಶಗಳಲ್ಲೋ

Sri Vidyabharathi Book Centre, Shringeri

CC-O. In Public Domain. Digitized by eGangotri

ಇಲ್ಲವೇ ಮನೆಯಲ್ಲೂ, ಸಮಾಜದಲ್ಲೂ ತನ್ನ 'ಸ್ವಂತಸ್ಥಾನ' ಅಲ್ಲದ ಕಡೆ ಇವರಿಗೆ ಮನ್ನಣೆ ಇದನ್ನು ಸಂಖ್ಯೆಗಳಲ್ಲಿ ಅದೃಷ್ಟ ಸಂಖ್ಯೆಯಾಗಿ ಭಾವಿಸುತ್ತಾರೆ ಇದಕ್ಕೆ ಸರಿಹೊಂದುವ ಇತರ ಸಂಖ್ಯೆಗಳಲ್ಲಿ 3, 6. 9, ಸಂಖ್ಯೆಗಳು ಅವರೊಂದಿಗೆ ಹೆಚ್ಚು ಮೈತ್ರಿ ಲಾಭಸಾಟಯಾಗಿರುತ್ತದೆ. ಹಾಗೆಯೇ 8, 7, ಸಂಖ್ಯಾಗಳವರು ಕೂಡಾ ಇವರಿಗೆ ಹತ್ತಿರದವರಾಗುತ್ತರೆ. ಇವರೆಂದರೆ ಹೆಚ್ಚು ಆತ್ಮೀಯತೆ ತೋರಿಸುತ್ತಾರೆ.

ಇವರಿಗೆ ಅದೃಷ್ಟವಾದ ಬಣ್ಣ ಆರೆಂಜ್ (Orange) ಕಲರ್. ಇಲ್ಲವೇ ಉದಯಿಸುವ ಸೂರ್ಯನ ರಂಗು. ದಾಸವಾಳದ ಹೂವು ರಂಗಿನ ಇಲ್ಲವೇ ಅರಿಶಿನ ತಿಳಿನೀಲಿ, ನೇರಳೆ ಬಣ್ಣ ಮೇಲಿನ ಸಾಲಿನಲ್ಲಿ ಅದೃಷ್ಟವಾದುದು.

ಇವರು ವಿಮರ್ಶೆಯನ್ನು ಸಹಿಸಲಾರರು ! ಕಪಟವಿಲ್ಲದ ನೇರ ಪ್ರವೃತ್ತಿ. ಇದ್ದದ್ದು ಇದ್ದ ಹಾಗೆ ಮಾತನಾಡುವುದರಿಂದ ಬಂಧುಗಳಲ್ಲಿ ವಿರೋಧ; ಹತ್ತಿರದವರ ಜೊತೆ ಶತೃತ್ವ ಉಂಟಾಗಬಹುದು. ಇವರನ್ನು ಹೊಗಳಿ ಇವರಿಂದ ಲಾಭ ಪಡೆಯಬೇಕು ಅನ್ನೋ ಅವರಿಂದ ನೀವು ಎಚ್ಚರಿಕೆಯಿಂದ ಇರಬೇಕು ! ರಕ್ತದ ಒತ್ತಡ ಕಣ್ಣಿನ ಕಾಯಿಲೆ, ಹಲ್ಲು-ಉದರ ಸಂಬಂಧವಾದ ಇಲ್ಲವೇ ಮಾನಸಿಕವಾದ ಕ್ಲೇಶ ಜೀವನದಲ್ಲಿ ಇಂಥವರು ಎಚ್ಚರಿಕೆ ವಹಿಸಬೇಕಾದ ಅಂಶಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು-2

2–ಈ ಸಂಖ್ಯೆ ಚಂದ್ರನಿಗೆ ಸಂಕೇತ. ವಾರದಲ್ಲಿ ಎರಡನೆಯದಾದ, 'ಸೋಮವಾರ' ಇವರಿಗೆ ಅನುಕೂಲಕರವಾದುದು. ಜೊತೆ ವಾರಗಳ ಬಗ್ಗೆ ಸಹಾನುಭೂತಿ, ಅಕ್ಕಪಕ್ಕದವರೊಂದಿಗೆ ಮೈತ್ರಿ, ಬಂಧುಗಳೆಂದರೆ ಅಭಿಮಾನಿಗಳೆಂದರೆ ತುಂಬಾ ಅನುಬಂಧ; ಇವರ ಸಂಖ್ಯೆಗೆ ಇಟ್ಟ ಹೆಸರು ! ಜಲ ಸಂಬಂಧವಾದ ವ್ಯಾಪಾರ, ಇಲ್ಲವೇ ವೃತ್ತಿ ಕಲೆಗಳಿಗೆ ಸಂಬಂಧಪಟ್ಟ ಲೇಖಕರಾಗಿ, ಕವಿಗಳಾಗಿ, ಉಪಾಧ್ಯಾಯರಾಗಿ ಜನಬಾಹುಳ್ಯದೊಂದಿಗೆ ಸಂಬಂಧವಿರುವ ಪ್ರಚಾರಕರಾಗಿ–ಟೆಲಿಫೋನ್ ಆಪರೇಟರುಗಳಾಗಿ ರಿಸೆಪ್ಷನ್ (Reception)ನಲ್ಲಿ ಕೆಲಸ ಮಾಡುವವರು, ಹೋಟೆಲ್, ಟೂರಿಜನಂಥ ಜನಗಳೊಂದಿಗೆ ಸಂಬಂಧಪಟ್ಟ ವೃತ್ತಿಗಳಲ್ಲೂ ಹೆಚ್ಚಾಗಿ ಇವರು ವಿರಾಜಿಸುತ್ತಾರೆ.

ಇವರು ಬಹಳ ಸುಲಭವಾಗಿ ನಿರುತ್ಸಾಹಿಗಳಾಗುವುದು, ಆಕಸ್ಮಿಕವಾಗಿ ಉದ್ರೇಕಗೊಂಡು ಮಹಾ ಉತ್ಸಾಹ ಹೊಂದುವುದು ನಡೆಯುತ್ತದೆ. ಕೈಯಲ್ಲಿ ಹಣ, ಬೇಕಾಬಿಟ್ಟಿ ಖರ್ಚು ಮಾಡುವುದು, ಅದಿಲ್ಲದಿದ್ದಾಗ ತೀವ ನೋವಿಗೆ ಒಳಗಾಗೋದು. ಈ ಎರಡು ದಶೆಗಳೂ ಕೂಡಿ ಬರುತ್ತವೆ ! ಹಾಗೆಯೇ ದುಡ್ಡು ಕೂಡಾ ಬಂದಾಗ ಜೇಬುಗಳು ತುಂಬಿ ಬಿಡುತ್ತವೆ, ಆದರೆ ಅದು ನಿಲ್ಲುವುದು ಕಷ್ಟ ! ಕೆಲವೊಮ್ಮೆ ಕೈಯಲ್ಲಿ ಪೈಸೆ ಕೂಡಾ ಇರುವುದಿಲ್ಲ. ಇದನ್ನು ನೆನಪಿಟ್ಟುಕೊಂಡು ಬಂದ ಹಣವನ್ನು ಕೈಯಲ್ಲಿ ಇಟ್ಟುಕೊಳ್ಳದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ಯಾಂಕಿನಲ್ಲೋ ಇಲ್ಲವೆ ಇತರ ನಿಧಿಗಳಲ್ಲೋ Fixed DIposit) ಹಾಕಿ, ಎಚ್ಚರಿಕೆವಹಿಸಬೇಕು !

ಸಾಮಾನ್ಯವಾಗಿ ಮುದ್ರಣ, ಪ್ರಕಾಶನಗಳಿಗೆ ಸಂಬಂಧಿಸಿದವರೂ, ರಾಜಕೀಯ ಧುರೀಣರೂ ; ವ್ಯಾಪಾರದಲ್ಲಿ ಬೆಲೆಗಳು ಥಟ್ಟನೆ ಬೆಳೆದು ಇಳಿದ ಕಾಲಕ್ಕೆ ಸಂಬಂಧಿಸಿದವರಾಗಿರುತ್ತಾರೆ.

ಇವರು ಅತಿ ಸ್ಥೂಲಕಾಯ ಇಲ್ಲವೆ ಅತಿ ಸಣ್ಣ ಶರೀರ ; ಮೈಯಲ್ಲಿ ನೀರು ಸೇರುವಿಕೆ, ಇಲ್ಲವೇ ಜಲಗಂಡ, ಬಂಧುಗಳಿಂದ ಮೋಸ ಹೋಗೋದು, ಒಳ್ಳೆಯದನ್ನು ಕೆಟ್ಟದ್ದಾಗಿಯೂ, ಕೆಟ್ಟದನ್ನು ಒಳ್ಳೆಯದಾಗಿಯೂ ಅಪಾರ್ಥಕ್ಕೆ ಒಳಗಾಗುವುದು, ಈ ಎರಡನೇ (2) ಸಂಖ್ಯೆಯವರ ಲಕ್ಷಣ.

ಇವರ ಅದೃಷ್ಟವಾದ ಬಣ್ಣ ಬಿಳುಪು ಇಲ್ಲವೇ ಮುತ್ತಿನ ಬಣ್ಣ. ಸೋಮವಾರ, ಗುರುವಾರ, ಭಾನುವಾರ ಇವರಿಗೆ ಅನುಕೂಲವಾದ ದಿನಗಳು! ಇವರಿಗೆ 8, 4, ಸಂಖ್ಯೆಯವರ ಜೊತೆ ಮೈತ್ರಿ ಸುಲಭವಾಗಿ ಆಗುತ್ತದೆ. ಆದರೆ 8 ಸಂಖ್ಯೆ ಆವರೊಂದಿಗೆ ಸಂಬಂಧ ಇವರಿಗೆ ದುರದೃಷ್ಟ, ಪ್ರಮಾದ. (ಅಪಾಯ)

ಇವರ ಜನ್ಮ ದಿನ ಹೆಸರು ಸೇರಿಸಿದರೆ 6,5,9 ಸಂಖ್ಯೆಗಳು ಬರುವಂತೆ ನೋಡಿಕೊಂಡರೆ ಈ ಪ್ರಮಾದಗಳನ್ನು ನಿವಾರಿಸಿಕೊಳ್ಳಬಹುದು. ಹೂವುಗಳು, ಅತ್ತರುಗಳು, ಬಿಳಿ ಬಟ್ಟೆಗಳು, ನೂತನ ವಸ್ತ್ರಗಳು, ಮೃಷ್ಟಾನ್ನ ಭೋಜನ, ಅಂದರೆ ಇವರಿಗೆ ಪ್ರೀತಿ. ಲಾಟರಿಗಳು, ಪಂದ್ಯಗಳಂಥವುಗಳಲ್ಲಿ ನಂಬಿಕೆಯಿರುತ್ತದೆ. ಆಕಸ್ಮಿಕವಾಗಿ ಲಕ್ಷಗಳನ್ನು ಸಂಪಾದನೆ ಮಾಡಿದವರನ್ನೇ ಯಾವತ್ ಧನ ಕಳೆದುಕೊಳ್ಳುವವರೂ, ಈ ಸಂಖ್ಯೆಯಲ್ಲಿ ಕಂಡು ಬರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರು_3

ಈ ಸಂಖ್ಯೆ ಗ್ರಹಗಳಲ್ಲಿ 'ಗುರುವು' ಇಲ್ಲವೇ ಬೃಹಸ್ಪತಿಗೆ ಸಂಕೇತ ! ಅದೃಷ್ಟವಾದ ಸಂಖ್ಯೆ ! ಮೂರುಗೆ ತಿಳ ನೀಲ ಬಣ್ಣ, ಕೇದಿಗೆ ಹೂ ರಂಗು ಇಲ್ಲವೇ ನೇರಳೇ ಬಣ್ಣ–ಅದೃಷ್ಟವಾದ ಬಣ್ಣಗಳು. ಗುರುವಾರ ಪ್ರೀತಿ ! ಪುಷ್ಯರಾಗ (Topaz) ಕನಕ ಪುಷ್ಯರಾಗ (Golden Topaz) ಇವರಿಗೆ ಸಂಬಂಧಪಟ್ಟ ಹರಳು (ಕಲ್ಲು) ಸಮಾಜದಲ್ಲಿ ಗೌರವವನ್ನು, ಅಧಿಕಾರವನ್ನು ಗಳಿಸುವ ಪಂಡಿತರೂ, ವಿದ್ವಾಂಸರೂ, ಮತ ಗುರುಗಳೂ ಪೀಠಾಧಿಪತಿಗಳಂಥ ಪವಿತ್ರ ಭಾವನೆಗಳನ್ನು ಆಕರ್ಷಿಸುವ ಲಕ್ಷಣವುಳ್ಳ ವ್ಯಕ್ತಿಗಳು–ಈ ಸಂಖ್ಯೆಯಡಿಗೆ ಬರುತ್ತಾರೆ.

ವಿದ್ಯೆ ಕಲಿಸಿದ ಗುರುವು, ಆಧ್ಯಾತ್ಮಿಕ ವಿಜ್ಞಾನ ನೀಡುವ ಸದ್ಗುರೂ, ಅಂದರೆ ಸಮಾಜಕ್ಕೆ ಮಾರ್ಗದರ್ಶಕರಾದ ಹಿರಿಯರೂ–ಈ 3ನೇ ಸಂಖ್ಯೆ ಪ್ರಭಾವದಡಿಗೆ ಬರುತ್ತಾರೆ.

ಸಂಸ್ಕೃತ ಪಾಂಡಿತ್ಯ, ವೇದವಿದ್ಯೆಯಲ್ಲಿ ಆಸಕ್ತಿ, ಋಷಿಗಳು, ಪುರಾಣಗಳು, ಮಂತ್ರಗಳಂಥ ಆಧ್ಯಾತ್ಮಿಕ ವಿಷಯಗಳ ಮೇಲೆ ಆಸಕ್ತಿ-ಪ್ರಭಾವ ಈ ಸಂಖ್ಯೆಗಳಿಂದ ಸೂಚಿಸಲ್ಪಡುತ್ತವೆ. ಅಧಿಕಾರದಲ್ಲಿ ಇರೋರಿಗೆ ಸಲಹೆಗಾರರಾಗಿ (ಗುರುಸ್ಥಾನ) ಆಗಲಿ ಸಹಾಯಕರು, ಪ್ರಾಧಾನ ಮಂತ್ರಿಗಳು, ಮುಖ್ಯ ಕಾರ್ಯದರ್ಶಿಗಳು, ವಿದ್ಯಾಲಯಗಳಲ್ಲಿ ಪ್ರಾಚಾರ್ಯರೂ, ಜಡ್ಜಿಗಳು (Judge), ಪ್ರಮುಖ ನ್ಯಾಯವಾದಿಗಳು, ನಗರಪಾಲಕರು, ಮೇಯರ್‌ಗಳು, ಮುನಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಲ್ ಫೇರ್‌ಮೆನ್' ಅಂಥವರು ಉನ್ನತ ಪದವಿಗಳಲ್ಲಿ ಸಾಮಾನ್ಯವಾಗಿ ಇವರು ಕಂಡು ಬರುತ್ತಾರೆ.

ಇವರಿಗೆ ಜಾತಕದಲ್ಲಿ 'ರಾಜ ಯಾಗ' ಕೂಡಾ ಕೂಡಿ ಬಂದರೆ, ವಿದೇಶ ಗಳಲ್ಲಿ ರಾಯಭಾರಿಗಳಾಗಿ (Ambassadors) ಇಲವೇ ನೂತನ ಸಂದೇಶ ಗಳು ನೀಡುವ ಪ್ರವರ್ತಕರಾಗಿಯೂ ಕೂಡಾ ಈ ಸಂಖ್ಯೆಯಲ್ಲಿ ಜನಿಸುವುದು ನಡೆಯುತ್ತದೆ. ಇದು ಸಮಾಜದಲ್ಲಿ ಆರ್ಥಿಕದಿಂದ ಕೂಡಿರುವ ಸ್ಥಿರತೆ, ಮಾತಿನ ಮನ್ನಣೆ ಸೂಚಿಸುವ ಸಂಖ್ಯೆ 1,6,9 ಸಂಖ್ಯೆಯವರು ಸ್ನೇಹ ಮಾಡಿದರೆ ಅದೃಷ್ಟ. ಮಂತ್ರಶಾಸ್ತ್ರ, ಜ್ಯೋತಿಷ್ಯ, ಪ್ರಾಚೀನ ಋಷಿಜ್ಞಾನ, ದೈವಭಕ್ತಿ, ಇವರಿಗೆ ಪ್ರತ್ಯೇಕ ಲಕ್ಷಣಗಳು ; ಆತ್ಮ ವಿಶ್ವಾಸವುಳ್ಳವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಲ್ಕು-4

ನಿಮ್ಮ ಜನ್ಮ ದಿನಾಂಕ ಸಂಖ್ಯೆ ಏನಾದರೂ ನಾಲ್ಕು-4 ಬಂದರೆ, ನಿಮ್ಮ ಜೀವನದಲ್ಲಾಗಲಿ, ನಿಮ್ಮ ವೃತ್ತಿಯಲ್ಲಾಗಲಿ-ಒಂದು ಪ್ರತ್ಯೇಕತೆ ಇರುತ್ತದೆ ! ಯಾವ ವಿಷಯದಲ್ಲಾದರೂ ನಿಮ್ಮದು ತಲೆ ಬಗ್ಗಿಸಿಕೊಂಡು ನಾಲ್ವರನ್ನು ಅನುಸರಿಸುವ ತತ್ವ ಅಲ್ಲ. ಒಂದು ಪ್ರತ್ಯೇಕತೆ, ಒಂದು ವಿಶೇಷತೆ ಇದೆ.

ಸಾಮಾನ್ಯವಾಗಿ ಸಂಘ ಸಂಸ್ಥರ್ತರಾಗಿ ಸಮಾಜದಲ್ಲಿ ನಡೆಯುವ ಪೂರ್ವಾಚಾರಗಳಿಲ್ಲದೆ ಇಲ್ಲವೇ ಕುರುಡಾಗಿ ನಡೆಯುವ ಸಾಮಾಜಿಕ ಆರ್ಥಿಕ ಅಭ್ಯಾಸಗಳನ್ನು ವಿರೋಧಿಸುವ ಸ್ವಭಾವ ನಾಲ್ಕನೇ ಸಂಖ್ಯೆಯವರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಸತ್ಯವನ್ನು ಮಡಕೆಯೊಡೆದಂತೆ ಹೇಳುವುದು, ಎದುರು ವ್ಯಕ್ತಿಯಲ್ಲಿನ ದೋಷಗಳೂ, ಲೋಪ ನಿಮಗೆ ಎಷ್ಟೇ ಸನ್ನಿಹಿತರಾದರೂ, ಬಂಧುಗಳಾದರೂ, ಕಡೆಗೆ ನಿಮ್ಮ ಹೆತ್ತ ಮಕ್ಕಳಾದರೂ– ಇದ್ದದ್ದು ಇದ್ದ ಹಾಗೆ ವಿಮರ್ಶಿಸುವುದರಿಂದ ಸಮಸ್ಯೆಗಳು, 'ಕ್ರಾಂತ್ರಿಕಾರಿಯ ಬದಲಾವಣೆಗಳು' ನೂತನ ಪಂಥಗಳು ಸಂಸ್ಕರಣಗಳು ಸಾಂಘಿಕ ರಾಜಕೀಯ ಸೂಚನೆಗಳು ಸೃಷ್ಟಿಸುವ ಲಕ್ಷಣ ಇರುವ – ಈ 4 ಸಂಖ್ಯೆ !

ಆದ್ದರಿಂದಲೇ ನಿಮ್ಮ ಜೀವನದಲ್ಲಿ ಏರಿಳಿತಗಳು ತಪ್ಪದು ! ಗೆಳೆಯರೊಂದಿಗೆ ವಿವಾದ-ಕೆಲವೊಮ್ಮೆ ಮಿತ್ರರೇ ಶತ್ರುಗಳಾಗಿ ಬದಲಾಗುವ ಸಾಧ್ಯತೆಯೂ ಇದೆ. ನಿಮ್ಮ ಮನೆಯಲ್ಲಿನವರೇ ನಿಮಗೆ ವಿರೋಧ, ವ್ಯತಿರೇಕ –ನೇಲೆ ತೋರುಗೊಡದೆ ನವಿರಾಗಿ ಮಾತನಾಡುತ್ತಾ ಹಿಂದೆ ನಿಮ್ಮ ಬಗ್ಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದುಷ್ಪ ಪ್ರಚಾರ ಮಾಡುತ್ತಾರೆ! ಸ್ವಂತ ಮನೆಯೇ ನಿಮಗೆ ಮುಳ್ಳಿನ ಹಾದಿ! ಉದ್ಯೋಗವೇ ನಿಮಗೆ ಮುಳ್ಳಿನ ಕಿರೀಟ ಆಗುವ ಅಪಾಯವಿದೆ. ಇದಕ್ಕೆ ನೀವು ಇತರರನ್ನು ಮುಖದ ಮೇಲೆ ವಿಮರ್ಶಿಸದಂತೆ ಇರುವುದು ಅಗತ್ಯ. ಜನತೆ ಯಥಾರ್ಥಕ್ಕಿಂತಲೂ, ಸ್ವಾರ್ಥವನ್ನು ಕುಹಕವನ್ನು ಹೆಚ್ಚಾಗಿ ಕೇಳಲು ಇಷ್ಟಪಡುತ್ತಾರೆ ಅನ್ನೋ ಸತ್ಯವನ್ನು ನೀವು ಗಮನಿಸುವಿರಿ. ಸತ್ಯಕ್ಕೆ ಎದುರು ವ್ಯಕ್ತಿಗಳ ಸ್ವಾರ್ಥಕ್ಕೆ ಮಧ್ಯೆ ಸಮನ್ವಯಕ್ಕಾಗಿ ಪ್ರಯತ್ನಿಸಬಹುದು.

ಯಾವುದೋ ತಿಳಿಯದ 'ಆಧ್ಯಾತ್ಮಿಕ ಶಕ್ತಿ' ನಿಮ್ಮ ಜೀವನದಲ್ಲಿ ಇರುತ್ತದೆ! ನಿರೀಕ್ಷಿಸದ ಬದಲಾವಣೆಗಳಾಗುವುದು ಆಕಸ್ಮಿಕವಾಗಿ ಪದವಿಯಲ್ಲಾಗಲಿ ಉನ್ನತಕ್ಕೆ ಹೋಗುವ ಸಂದರ್ಭ ಹಾಗೆಯೇ ಅಚಾನಕವಾಗಿ ಗುಪ್ತ ಶತ್ರುಗಳಿಂದ ನಿಮ್ಮ ಜೀವನೋಪಾಧಿಗೆ, ನಿಮ್ಮ ಸ್ಥಿತಿಗೆ ಅಪಾಯ ಸಂಭವಿಸುವಂಥ ಬದಲಾವಣೆಗಳು ಬರಬಹುದು.

ನಿಮ್ಮ ಸ್ವಭಾವದಲ್ಲಿ ನಿಸ್ವಾರ್ಥ, ಸಮಾಜದಲ್ಲಿ ಸೇವೆ ಮಾಡಬೇಕು ಅನ್ನೋ ಕಾಳಜಿ ಬೆಳೆಸಿಕೊಂಡರೆ ಆಧ್ಯಾತ್ಮಿಕವಾದ ಮಾರ್ಗದಲ್ಲಿ ನಿಮಗೆ ಒಳ್ಳೆಯ ಉನ್ನತಿಯಾಗುತ್ತದೆ. ಅಂದುಕೊಳ್ಳದೆ ಸಿದ್ಧ ಪುರುಷರಾಗಲಿ, ಗುರುಗಳಾಗಲಿ ಭೇಟಿಯಾಗುವುದು ಇಲ್ಲವೇ, ಅವರ ಆಶೀರ್ವಾದ ಪಡೆಯುವುದು ನಡೆಯಬಹುದು.

ಇವರಿಗೆ ಅದೃಷ್ಟವಾದ ದಿನ ಸೋಮವಾರ ಇಲ್ಲವೇ ಬುಧವಾರ, ಭಾನುವಾರ. ಬಣ್ಣಗಳು ಎಳೇ ಸಿಮ್ಮೆಂಟ್ ರಂಗು, ಇಲ್ಲವೇ ನವಿಲುಗರಿಯ ಬಣ್ಣವಾಗಲಿ, ಬಣ್ಣಬಣ್ಣದ ಥಳಥಳ ಹೊಳೆಯುವ ಬಣ್ಣಗಳಾಗಲಿ ಇವರಿಗೆ ಅದೃಷ್ಟ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದೃಷ್ಟವಾದ ಕಲ್ಲು ಮುತ್ತಾಗಲಿ, ಸೋಮಕಾಂತ (Moon Stone) ಕಲ್ಲಾಗಲಿ ಇಲ್ಲವೇ ಗರುಡಪಚ್ಚೆ ಮತ್ತು Turguoise ಕಲ್ಲು ಶ್ರೇಷ್ಠ. ಆಧ್ಯಾತ್ಮಿಕ ಶಕ್ತಿಯನ್ನು ದುರ್ವಿನಿಯೋಗ ಮಾಡುವುದರಿಂದ ಉಂಟಾಗುವ ಪ್ರಮಾದಗಳು ಇಲ್ಲವೇ ತಾಂತ್ರಿಕ ಪ್ರಯೋಗಗಳು, ಭೂತ ಮಂತ್ರ ರಹಸ್ಯ ಶಸ್ತ್ರತ್ವದಿಂದ ಕಷ್ಟಗಳು ಬಾರದಂತೆ ಇವರು ಎಚ್ಚರ ವಹಿಸುವುದು ಅಗತ್ಯ. ಆಗಸ್ಟ್, ಏಪ್ರಿಲ್, ಜನವರಿ ತಿಂಗಳಲ್ಲಿ ಹುಟ್ಟಿದವರು ಇವರಿಗೆ ಅನುಕೂಲರು, ಮಿತ್ರರು ಆಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಐದು-5

ಜನ್ಮ ದಿನಾಂಕ, 5ನೇ ತಾರೀಖು ಆಗಲಿ, ಹೆಸರಿನಲ್ಲಿನ ಸಂಖ್ಯೆಯಾಗಲಿ ಐದು (5) ಬಂದರೆ ಇವರಿಗೆ ಸಾಮಾನ್ಯವಾಗಿ ಸಮಾಜದಲ್ಲಿ ಹೆಚ್ಚು ಜನರೊಂದಿಗೆ ಪರಿಚಯ, ಸ್ನೇಹವಿದ್ದು ಹತ್ತು ಜನರೊಂದಿಗೆ ಓಡಾಡುವವರಾಗಿರುತ್ತಾರೆ. ಸಾಧಾರಣವಾಗಿ ಅವರು ಇತರರನ್ನು ಒಟ್ಟುಗೂಡಿಸುವ ಮಧ್ಯವರ್ತಿಗಳಾಗಿಯೂ, ಪರಸ್ಪರ ಪರಿಚಯ ಮಾಡಿಸುವ ಮಿತ್ರರಾಗಿಯೂ ಒಳ್ಳೆಯ ಹೆಸರು ಗೌರವವುಳ್ಳವರಾಗಿರುತ್ತಾರೆ.

ಚುರುಕಾದ ಬುದ್ಧಿ, ವಾಚಾಳಿತನ, ಪ್ರಯತ್ನವಿಲ್ಲದೆಯೇ ಇತರರ ಹೊಟ್ಟೆ ತುಂಬುವಂತೆ ಮಾತನಾಡುವುದು–ಇವರಿಗೆ ಹುಟ್ಟಿನೊಂದಿಗೆ ಬಂದ ವಿದ್ಯೆ ! ಬುದ್ಧಿ ಕುಶಲತೆ, ಎದುರು ವ್ಯಕ್ತಿಗಳ ಮನಸ್ಸು ನೋವಾಗಿಸದೆ ಕಾರ್ಯ ಸಾಧಿಸುವ ಜಾಣ್ಮೆ ಚಾತುರ್ಯ ಚಾಕಚಕ್ಯತೆ ಇರುತ್ತದೆ. ಒಳ್ಳೆಯ ಜ್ಞಾನ ಶಕ್ತಿ ಏನಾದರೂ ಕೇಳಿದ ಕೂಡಲೇ (ಹೆಸರು, ವ್ಯಕ್ತಿಗಳ ವಿಳಾಸ) ಅದನ್ನು ಕೆಟ್ಟದಾಗಿ ಬಳಸಿಕೊಳ್ಳುವ ಉಪಾಯ ಥಟ್ಟನೆ ಹೊಳೆಯುತ್ತದೆ. ಆದ್ದರಿಂದ ವ್ಯಾಪಾರದಲ್ಲಿ ಕಮೀಷನ್ ಏಜೆಂಟರಾಗಿಯೂ, ಪ್ರಚಾರವಾಗದ ಸಮಾಚಾರ ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲುಪಿಸಲಿಕ್ಕೆ ಇಲ್ಲವೇ ಸರಕುಗಳ ರವಾನೆ ಅಥವಾ ವ್ಯಾಪಾರವಾಗಲಿ ಇಲ್ಲವೇ ಬಸ್, ರೈಲುಗಳಲ್ಲಿ ಪ್ರಯಾಣ ಮಾಡುವ ವೃತ್ತಿಯಂಥಾದ್ದಾಗಲಿ ಇವರಿಗೆ ಸರಿ ಹೊಂದುತ್ತದೆ.

ಆರೋಗ್ಯದ ಬಗ್ಗೆ ನರಗಳ ಸಂಬಂಧವಾದ ಇಲ್ಲವೇ ಉದರ ಕೋಶ ಲಿವರ್ ಪೈತ್ಯ ಸಂಬಂಧವಾದುದು, ಹೊಟ್ಟೆ ಉರಿಯಂತಹವುಗಳಿಂದ ಎಚ್ಚರ ವಹಿಸಬೇಕು. ಆಗಿಂದಾಗ್ಗೆ ಮಲಗಿದ್ದಲ್ಲಿಂದ ರಾತ್ರಿ ನಿದ್ರೆಬಾರದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿ ಸಣ್ಣ ವಿಷಯಕ್ಕೂ, ಅತಿಯಾಗಿ ಚಿಂತಿಸುವುದು-ಇವರು ನಿಯಂತ್ರಿಸಿ ಕೊಳ್ಳಬೇಕು.

ಬುಧವಾರ ಇವರಿಗೆ ಅದೃಷ್ಟದ ದಿನ ! ಎಳೆ ಹಸಿರು ಬಣ್ಣ ಇಲ್ಲವೇ ನವಿಲು ಗರಿಯ ಬಣ್ಣ ಒಳ್ಳೆಯದು. ಸಾಧಾರಣವಾಗಿ ಎರಡು ಬಣ್ಣದ ಬೆರಕೆಯ ಬಟ್ಟೆಗಳು, ಚಿತ್ತಾರದ ಉಡುಪುಗಳು, ಇವರಿಗೆ ಅದೃಷ್ಟ.

ಐದನೇ ಸಂಖ್ಯೆಯವರು ಸುಮಾರಾಗಿ ಎಲ್ಲ ಇತರ ಸಂಖ್ಯೆಯೊಂದಿಗೆ ಸ್ನೇಹದಿಂದ ಇರಬಲ್ಲದು. ಸಾಮಾನ್ಯವಾಗಿ 6 ಸಂಖ್ಯೆಯವರಿಗೆ 9 ಸಂಖ್ಯೆಯವರೊಂದಿಗೆ ಹೆಚ್ಚು ಗಾಢವಾದ ಅನುಬಂಧ ಏರ್ಪಡುತ್ತದೆ. ಜೂನ್, ಸೆಪ್ಟೆಂಬರ್ ಇವರಿಗೆ ಅದೃಷ್ಟದ ತಿಂಗಳು ; ಕಲಾವಿದರಿಗೆ, ಚಿತ್ರಕಲೆ, ಚಲನ ಚಿತ್ರ, ಸಂಗೀತ, ನೃತ್ಯ ಇಂತಹ ಲಲಿತಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಸೂಚಿಸುತ್ತದೆ. ಸ್ತ್ರೀಯರಿಂದ, ಸ್ತ್ರೀ ಸಂಬಂಧವಾದ ವೃತ್ತಿಗಳಿಂದ ಸಹಾಯ ಸಹಕಾರ ಪಡೆಯುತ್ತಾರೆ. ಸಾಹಿತಿಗಳು, ಸಂಗೀತಗಾರರು ಈ ಸಂಖ್ಯೆ ಸಾಲಿಗೆ ಬರುತ್ತಾರೆ. ಸುಖವಾಗಿ, ಉಲ್ಲಾಸದಿಂದ, ದುಗುಡ-ಚಿಂತೆಗಳಿಲ್ಲದೆ ಬಾಳಬೇಕು ಅನ್ನೋದೇ ಇವರ ನಿಲುವು ! ದೊಡ್ಡ ಆತಯಗಳು, ಆದರ್ಶ ಎಂದೆಲ್ಲ ಅಂದುಕೊಳ್ಳುತ್ತಾ ಜೀವನದಲ್ಲಿ ತೊಳಲಾಡದೆ ಇರುವ ಸ್ವಭಾವ !

ಮಿತ್ರರಿಗೆ ಔತಣ ನೀಡುವುದು, ಘನವಾಗಿ ಆತಿಥ್ಯ ಕೊಡುವುದು ಇತರರನ್ನು ಸಂತಸಪಡಿಸುವುದು ಅಂದರೆ ಇವರಿಗೆ ಖುಷಿ. ವೃತ್ತಿಯಲ್ಲೂ ಕೂಡಾ ಹತ್ತು ಜನರಿಗೆ ಸೌಖ್ಯ, ಊಟ ಇತ್ಯಾದಿ ಸೌಲಭ್ಯಗಳು ಒದಗಿಸುವ ಕೆಲಸ ಯಾವುದಾದರೂ ಇವರಿಗೆ ಶೋಭಿಸುತ್ತದೆ. ಹೆಸರು ವಾಸಿ ಹೋಟೆಲ್ ಗಳಲ್ಲಿ ಮಾಲೀಕರಾಗಲಿ, ಬಾರ್‌ಗಳು, ಕ್ಲಬ್‌ಗಳು, ಕೂಲ್‌ಡ್ರಿಂಕ್ಸ್, ತಿನಿಸುಗಳು ಇಲ್ಲವೇ ವಿನೋದ-ವಿಲಾಸಗಳಂಥ ವ್ಯಕ್ತಿಗಳು ಇವರಿಗೆ ಮೆಚ್ಚುಗೆಯಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆರು-6

ಇವರಿಗೆ ಶುಕ್ರವಾರ ಅನುಕೂಲಕರವಾದ ಸಮಯ ! ಮುತ್ತು, ಇಲ್ಲವೇ ವಜ್ರ ಅದೃಷ್ಟದ ಕಲ್ಲು. ಬೆಳ್ಳಿ, ಬಂಗಾರ ಒಡವೆಗಳ ವರ್ತಕರು ಕೂಡಾ ಈ ವರ್ಗಕ್ಕೇ ಸಲ್ಲುತ್ತಾರೆ. ಆರೋಗ್ಯ ಚೆನ್ನಾಗಿರುತ್ತೆ. ಆದರೆ ಹೆಚ್ಚಾಗಿ ಶ್ರಮ ಪಡಲಾರರು. ಅಧಿಕ ಶ್ರಮ ತಿರುಗಾಟ ತಡೆಯಲಾರರು.

ಅಪವಾದಗಳು ಆಕಸ್ಮಾತ್ತಾಗಿ ಬರುವ ನಿಂದನೆಗಳಿಂದ ಇವರಿಗೆ ಅಪಾಯ. ಅಕ್ಕ-ಪಕ್ಕದಲ್ಲಿರುವ ಅವರ ಅಭಿಪ್ರಾಯದಿಂದ ಇವರ ಜೀವನ ಮೇಲೆ ಬರುವುದಕ್ಕೆ ಇಲ್ಲವೇ ನೆಲಕಚ್ಚುವುದಾಗಲಿ ಆಗುವಂಥ ವೃತ್ತಿ ಇವರದು. ಆದ್ದರಿಂದ 'ಜನವಾಕ್ಯ'ವನ್ನು ಅನುಸರಿಸಿ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಅಕ್ಟೋಬರ್, ಮೇ ತಿಂಗಳಲ್ಲಿ ಅನುಕೂಲವಾದ ಸಮಯ. ಚೆಲುವನ್ನು, ಕಲೆಗಳನ್ನು ಆರಾಧಿಸುವ ಸ್ವಭಾವ. ಮನೆ ಮುಂದಿಯೆಂದರೂ, ಬಂಧುಗಳೆಂದರೂ ಅಭಿಮಾನ. ಅಧಿಕಾರ, ಮನ್ನಣೆ, ಮೂತಿಗೆ ಗೌರವ, ಕೀರ್ತಿ ಸಂಬಂಧಿಸಿದ ಸಂಘಟನೆಗಳು, ಈ ಆರು ಸಂಖ್ಯೆಗಳಲ್ಲಿ ಬರುವ ವರ್ಷಗಳಲ್ಲಿ ನಡೆಸಬಹುದು. 3, 6 ಸಂಖ್ಯೆಯವರೊಂದಿಗೆ ಇವರಿಗೆ ಮೈತ್ರಿ ಉಂಟಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಳು–7

ಇದು, ಎಲ್ಲ ಮತಗಳಲ್ಲೂ, ದೈವಶಕ್ತಿಯನ್ನು ಸೂಚಿಸುವ ಅಂಕೆ ! ಸಪ್ತಮಹರ್ಷಿಗಳು, ಏಳು ಸ್ವರಗಳು, ಸೂರ್ಯ ಕಿರಣಗಳಲ್ಲಿನ-7 ಬಣ್ಣಗಳು ಮುಂತಾದ 'ಸೃಷ್ಟಿ-ರಹಸ್ಯಗಳು' ತನ್ನಲ್ಲಿ ನಿಲ್ಲಿಸಿಕೊಂಡ ಅದ್ಭುತವಾದ ಅಂಕೆ ! ಇವರಿಗೆ ಜುಲೈ, ಅಕ್ಟೋಬರ್ ಅನುಕೂಲಕರವಾದ ತಿಂಗಳುಗಳು.

ಇತರರ ಮನಸ್ಸನ್ನು ಹೀಗೇ ಗ್ರಹಿಸಬಲ್ಲ ಶಕ್ತಿ, ನೋಡಿದ ಕೂಡಲೇ ಎದುರು ವ್ಯಕ್ತಿಗಳ ಸ್ವಭಾವವನ್ನು ಅಳೆಯಬಲ್ಲ ಸಾಮರ್ಥ್ಯ ಇವರಿಗಿರುತ್ತದೆ. ಇವರ ಜೀವನದ ಹಿಂದೆಯಿದ್ದು ತಮಗೇ ತಿಳಿಯದ ಒಂದು 'ದೈವ ಶಕ್ತಿ' ನಡೆಸುತ್ತದೆ. ಆದರೆ ಬಹಳ ಜನ ಈ ಸಂಖ್ಯೆಯಲ್ಲಿ ಹುಟ್ಟಿದವರು ಈ ಶಕ್ತಿಯನ್ನು ಅರಿಯದೆಯೇ ಬಾಳುತ್ತಾರೆ. ಶಕ್ತಿಯನ್ನು ಗ್ರಹಿಸಬಲ್ಲ ಶಕ್ತಿ ಇರುವ ಎಲ್ಲೋ ಕೆಲವು ಜನರಿಗೆ ದೇಶಕ್ಕೆ ನಾಯಕರಾಗಿಯೋ, ದೊಡ್ಡ ಮತ ಪ್ರವರ್ತಕರಾಗಿಯೋ, ಜಗದ್ಗುರುಗಳಾಗಿಯೋ ಪ್ರಸಿದ್ಧಿಗೆ ಬರುವುದು ಕೂಡಾ ಉಂಟು. ಪ್ರಾಪಂಚಿಕ ವಿಷಯದಲ್ಲಿ ಇದು ದೊಡ್ಡ ಅದೃಷ್ಟ ಸಂಖ್ಯೆ ಅಲ್ಲ ! ಹಣ ಸಂಪಾದನೆಗಿಂತಲೂ ಜ್ಞಾನ, ವಿದ್ಯೆ, ನಿಗೂಢ ರಹಸ್ಯಗಳನ್ನು ತಿಳಿದುಕೊಳ್ಳಬೇಕು ಅನ್ನೋ ಆಸಕ್ತಿ, ಇರುತ್ತದೆ. ಇವರ ಸಂಸಾರದಲ್ಲಿ ಪರಸ್ಪರ ಬೇರೆಯಾಗಿರುವ ಮನಸ್ತತ್ವ ಮಾನಸಿಕ ಸಂಬಂಧವಾದ ಉತ್ಸಾಹ ನಿರುತ್ಸಾಹಗಳು, ಆರೋಗ್ಯ, ಅನಾರೋಗ್ಯಗಳು ಉಂಟಾಗುತ್ತದೆ.

ಯೋಗ, ಆಧ್ಯಾತ್ಮಿಕ ವಿದ್ಯೆ, ಮಂತ್ರಶಾಸ್ತ್ರ ಇಲ್ಲವೇ ಇಂಜನೀರಿಂಗ್, ಸೈನ್ಸ್ ಇವರ ಉನ್ನತಿಯ ರಂಗಗಳು. ವಿದೇಶೀ ಪ್ರಯಾಣಗಳು, ರಾಜಕೀಯ ಕ್ರಾಂತಿಗಳು, ಸಮಾಜದಲ್ಲಿ ದೊಡ್ಡ ಉದ್ಯಮಗಳಿಗೆ ಸಂಬಂಧಿಸಿದ ವ್ಯಕ್ತಿಗಳು, ಈ ಸಂಖ್ಯೆಯಲ್ಲಿ ಸಾಧಾರಣವಾಗಿ ಹುಟ್ಟುತ್ತಾರೆ.

CC-O. In Public Domain. Digitized by eGangotri

ಎಂಟು–8

ನಿಮ್ಮ ಅದೃಷ್ಟ ಸಂಖ್ಯೆ (8) ಎಂಟು ಬಂದರೆ ಅದಕ್ಕೆ ಅರ್ಥ ಹೊಣೆಗಾರಿಕೆಯಿಂದ ಕೂಡಿದ ಜೀವನ-ನಿಮ್ಮ ವಯಸ್ಸಿಗೆ ಮೀರಿದ ಭಾರ, ದಿಗಿಲು, ಚಿಂತೆಗಳು ಎದುರಾಗುವುದೆಂದು ಸೂಚನೆಯಾಗಿ ಗ್ರಹಿಸಬೇಕು !

ಎಂಟು ಸಂಖ್ಯೆ ಜಾತಕರಿಗೆ ಸಾಮಾನ್ಯವಾಗಿ ತಂದೆ ತಾಯಿಗಳೊಂದಿಗೆ ವಿರೋಧ ಇಲ್ಲವೇ ಭಿನ್ನಾಭಿಪ್ರಾಯ ಆದರೆ ಚಿಕ್ಕಂದಿನಲ್ಲಿ ಉಂಟಾಗಹುದು. ಸಾಧಾರಣವಾಗಿ ತಂದೆಯ ಬಗ್ಗೆ ತಿರುಗಿ ಬೀಳುವ ಧೋರಣೆ ; ಎದುರಿಸುವ ಸ್ವಭಾವದಿಂದ ಇವರಿಗೆ ಮನೆಯಲ್ಲಾಗಲಿ, ಸ್ಕೂಲ್‌ನಲ್ಲಾಗಲಿ ನೀವು ಮಾಡುವ ವೃತ್ತಿಯಲ್ಲಾಗಲೀ, ವಿರುದ್ರ ಪರಿಸ್ಥಿತಿ ಉಂಟಾಗುವ ಅಪಾಯವಿದೆ.

ಇವರು ಜೀವನದಲ್ಲಿ ಕಷ್ಟಗಳನ್ನು ಸಹನೆಯಿಂದ ಗ್ರಹಿಸ ಬಲ್ಲರು. ಎಷ್ಟೆ ಕಷ್ಟವಾದರೂ ಸಹನೆಯಂದ ನಿಭಾಯಿಸಬಲ್ಲರು. ಕೆಲವರು ಅದೃಷ್ಟ ಜಾತಕರು ಉನ್ನತವಾದ ಪದವಿಗಳು ಜವಾಬ್ದಾರಿಯಿಂದ ಕೂಡಿದ ಹುದ್ದೆ ವಹಿಸಿಕೊಳ್ಳಬೇಕಾದರೂ-ಆದರಲ್ಲಿ ಸುಖ-ಲಾಭಕ್ಕಿಂತಲೂ ಜವಾಬ್ದಾರಿ-ಶ್ರಮ, ಪ್ರಯಾಸ ಅಧಿಕವಾಗಿದ್ದು-ಕೆಲಸಗಳನ್ನು ಸುಲಭವಾಗಿ ಪರಿಗಣಿಸಲಿಕ್ಕೆ ಆಸ್ಪದ ವಿಲ್ಲದ ಜೀವನ.

ಚಿಕ್ಕಂದಿನಲ್ಲಿ ಅನಾರೋಗ್ಯ, ದುರಂತ ಇಲ್ಲವೇ ಜಲಗಂಡವಾಗಲಿ, ವಾಂತಿ ವಿರೋಚನಗಳು, ಸಿಡುಬು ಇತ್ಯಾದಿ ವ್ಯಾಧಿಗಳಿಂದ, ದುರಂತಗಳಿಂದಾಗಲಿ ಕಾಯ್ದುಕೊಳ್ಳಬೇಕು. ಪ್ರೆಸ್, ಮುದ್ರಣಕ್ಕೆ ಸಂಬಂಧಿಸಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲವೇ ಪೋಸ್ಟ್, ಟೆಲಿಗ್ರಾಂ, ರೈಲ್ವೇ ಬೋಗಿಗಳಲ್ಲಿ ಸಂಬಂದಪಟ್ಟ ಕೆಲಸ ಗಳಾಗಲಿ ಕೂಲಿ, ಕಾರ್ಮಿಕರ ಕೆಲಸಗಳಾಗಲಿ, ಟ್ರಾನ್ಸ್‌ಪೋರ್ಟ್, ಏಜೆನ್ಸೀ ಕಾರ್ಯಗಳಾಗಲಿ ಇವರಿಗೆ ಸರಿ ಹೋಲುವ ವೃತ್ತಿಗಳು !

ಇವರಿಗೆ ಮಸಕು ನೀಲಿ ಮಾಸಲು ಕಾಫೀ ರಂಗು, ಛಾಕ್ಲೆಟ್ ಬಣ್ಣ ಇವರಿಗೆ ಒಳ್ಳೆಯದು. ಆದರೆ ಬಾಳಿನಲ್ಲಿ ಬರುವ ದುರದೃಷ್ಟಗಳು ಎದುರಿಸ ಲಿಕ್ಕೆ ನವಿರು ಬಳಿ ತಿಳಿಯ ಗುಲಾಬಿ ಬಣ್ಣ, ತಿಳಿ ನೀಲಿ ರಂಗಿನ ಬಟ್ಟೆಗಳು ತೊಡುವುದು ಶುಭ ! ಹೆಚ್ಚಾಗಿ ಇವರು ಒಂಟಿಯಾಗಿ ಕಳೆಯಬಾರದು ! ಹತ್ತು ಜನರೊಂದಿಗೆ ಓಡಾಟ, ಸ್ನೇಹ ಮಾಡುವುದರಿಂದ ಇವರಿಗೆ ತಮ್ಮ ಸಮಸ್ಯೆಗಳಿಂದ ಉಂಟಾಗುವ ಮನೋವ್ಯಥೆ ಸೈರಿಸಿಕೊಳ್ಳಲು ಸಹಾಕಾರಿ ಯಾಗುವುದು.

ಹಣದ ವಿಷಯದಲ್ಲಿ ಇವರು ಶ್ರಮಪಟ್ಟುಗಳಿಸುತ್ತಾರೆ. ಸಂಪಾದಿಸಿ ಧನವಂತರಾಗುತ್ತಾರೆ. ಎಂಟನೇ ಸಂಖ್ಯೆಯಲ್ಲಿ ಪ್ರಪಂಚದಲ್ಲಿ ಕೋಟೆಶ್ವರರು ಹುಟ್ಟುತ್ತಾರೆ. ಇವರೆಲ್ಲರೂ ಚಿಕ್ಕಂದಿನಲ್ಲಿ ಕಷ್ಟಪಟ್ಟು ಮೇಲೆ ಬಂದವರೇ ! ಲಾಟರಿಗಳಂತೆ ಕೂಡಿಬಂದ ಜಾತಕರಲ್ಲ. ಅದಕ್ಕೇ ಶ್ರಮವೊಂದರ ಬೆಲೆ ಉಳಿತಾಯ ಇವರಿಗೆ ತುಂಬಾ ಚೆನ್ನಾಗಿ ಗೊತ್ತು.

ಇವರಿಗೆ ಸ್ನೇಹಿತರಂತೆ ನಟಿಸುವ ಮಿತ್ರದ್ರೋಹದಿಂದ ಅಪಾಯ ! ತಮ್ಮ ಸ್ವಾರ್ಥಕ್ಕಾಗಿ ಇವರಿಗೆ ಹತ್ತಿರ ಸಂಬಂಧಿಕರೊಂದಿಗೆ ಇವರಿಗೆ ವಿರೋಧ ತರುವ ಹೊರಗಿನ ಸ್ನೇಹಿತರಿಂದ ಇವರ Fate ಹೊಡೆತ ತಿನ್ನುವ ಅಪಾಯ ವಿದೆ. ಮಾನಸಿಕ ಆಂಧೋಳನ ಮೆದುಳಿಗೆ ಸಂಬಂಧಿಸಿದ, ಇಲ್ಲವೇ ನರಗಳಿಗೆ ಸಂಬಂಧಪಟ್ಟ ; ಆನಾರೋಗ್ಯದಿಂದ ಇವರು ಎಚ್ಚರಿಕೆಯಿಂದ ಇರಬೇಕು. ಅತಿ ಶ್ರಮದಿಂದ ಕಣ್ಣಿನ ದೃಷ್ಟಿಹಾಳಾಗದಂತೆ ಎಚ್ಚರಿಕೆಯೊಂದಿಗೆ ಇರಬೇಕು ಆಕ್ಟೋಬರ್, ಜನವರಿ, ಫೆಬ್ರವರಿ ತಿಂಗಳುಗಳು ವಿಪತ್ಕಾರಿಯಾದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂಬತ್ತು-9

ಅದೃಷ್ಟ ಸಂಖ್ಯೆ-9. ಒಂಬತ್ತಾಗಿ ಬಂದವರು ಓಳ್ಳೆ ಉದ್ರೇಕ ಸ್ವಭಾವ ಉಳ್ಳವರು. ಸಾಮಾನ್ಯವಾಗಿ ಸಹನೆ, ಕಷ್ಟಪಟ್ಟು ಕೆಲಸ ಮಾಡಬಲ್ಲ ಶಾರೀರಕ ಪಟುತ್ವ, ಇವರಿಗೆ ಇರುತ್ತದೆ. ಮನಸ್ಸು ಶರೀರ ಚುರುಕಾಗಿ ಶಕ್ತಿವಂತವಾಗಿದ್ದು ಯಾವ ಕೆಲಸವನ್ನಾದರೂ ಸರಿಯೇ ಆವೇಶದಿಂದ ಮುಂದಕ್ಕೆ ಧುಮುಕುತ್ತಾರೆ.

ಸಮಾಜದಲ್ಲಿ ನಾಯಕರು, ಸೈನಿಕ, ಪೋಲಿಸ್, ವೈದ್ಯಕೀಯ ವೃತ್ತಿಗಳಲ್ಲೂ ಇವರಿಗೆ ಅಭಿರುಚಿ ಇರುತತ್ತದೆ. ಯಂತ್ರಗಳೊಂದಿಗೆ, ಕಾರು, ವಿಮಾನ ನಡೆಸುವುದರಲ್ಲೂ ಇಲ್ಲವೇ ಇಂಜಿನೀರಿಂಗ್‌ನಲ್ಲೂ, ಮನೆ ಕಟ್ಟುವ ಭೂಸಂಬಂಧ, ವ್ಯಾಪರ ಸಂಬಂಧವಾದ, ಸ್ಥಿರಾಸ್ತಿ ಸಂಬಂಧವಾದ ಲೇವಾದೇವಿಗಳಿಂದ ಲಾಭ ಕಂಡುಬರುತ್ತದೆ. ಹಣ್ಣು, ತರಕಾರಿ ವ್ಯಾಪರ; ಕುಸ್ತಿ, ಕ್ರೀಡೆಗಳು, ಸ್ಪರ್ಧ ಪಂದ್ಯಗಳು ಪ್ರಪಂಚ ಕ್ರೀಡಾಕಾರರು, ನಟರು, ಸಂಗೀತ ವಿದ್ಯಾಂಸರು ಪ್ರಸಿದ್ಧ ಶಿಲ್ಪಿಗಳು ಈ ಸಂಖ್ಯೆಯಲ್ಲಿ ಜನಿಸುತ್ತಾರೆ. ಆದರೆ ಎಲ್ಲಕ್ಕಿಂತಲ್ಲೂ ಮುಖ್ಯ ಸೈನ್ಯಕ್ಕೆ, ಸೈನ್ಯಾಧಿಕಾರಿಗಳಿಗೆ ಮುಖ್ಯ ಮಂತ್ರಿಗಳಿಗೆ 'ಮುಖ್ಯವಾದ' ಸಂಖ್ಯೆ ಇದು.

ಅಕಸ್ಮಾತ್ತಾಗಿ ಕೋಪ, ಆವೇಶ ಬರುವುದು ಉದ್ರೇಕದಲ್ಲಿ ಮಾಡುವ ಆತುರದ ಕೆಲಸದಿಂದ ಅಪಾಯದಿಂದ -ಇವರು ಎಚ್ಚರವಹಿಸಬೇಕು ! ಹೊಡೆದಾಟ ಏಟುಗಳು ಆಕ್ಸಿಡೆಂಟ್ಸ್ ಇಲ್ಲವೇ ಆಪರೇಷನ್‌ನಿಂದ, ಸ್ನೇಹಿತರಿಂದ ದ್ರೋಹ, ಮೋಸ, ಹಣ ಕಳೆದುಕೊಳ್ಳುವುದು, ಕಳ್ಳತನ ಆಗುವ ಪ್ರಮಾದ

CC-O. In Public Domain. Digitized by Sri Vijayamahanthi Bodhi Gurukula Trust, Bangalore

CC-O. In Public Domain. Digitized by eGangotri

ಇರುತ್ತದೆ. ರಕ್ತದ ಒತ್ತಡ ಅತಿ ಶ್ರಮದಿಂದ ಎದೆಗೆ ಅನಾರೋಗ್ಯ ತಪ್ಪದಂತೆ ಎಚ್ಚರಿಕೆವಹಿಸಬೇಕಾಗುತ್ತದೆ.

ಇವರಿಗೆ ಅದೃಷ್ಟವಾದ ಕಲ್ಲೂ ಪಚ್ಚೆ ಇಲ್ಲವೇ Blood stone. ಅದೃಷ್ಟದ ತಿಂಗಳುಗಳು ಏಪ್ರಿಲ್, ನವಂಬರ್ ಡಿಸೆಂಬರ್, ಆಗಸ್ಟ್ ವೃತ್ತಿ ರೇಕದ ತಿಂಗಳು. ಬಣ್ಣದ ಕಡು ಕೆಂಪು ಇಲ್ಲವೇ ಜರಿಯೊಂದಿಗೆ ಗೈದ ಕೆಂಪು ಬುಟ್ಟಾ, ಥಳಥಳ ಹೊಳೆಯು ವತಾಮ್ರ, ಬಂಗಾರದ ಆಭರಣ ಅಲಂಕಣ ಗಳು ಇವರ ಶಕ್ತಿಯನ್ನು ಬೆಳೆಸುತ್ತದೆ..

ಹೆಂಡತಿಯ ಆಕಸ್ಮಿಕ ಮರಣ, ಇಲ್ಲವೇ ಆಪರೇಷನ್ ಅನಾರೋಗ್ಯ ಇತ್ಯಾದಿ ತೊಂದರೆಗಳ ಸೂಚನೆ. ಬೆಂಕಿಯಿಂದ, ಕಳ್ಳರಿಂದ, ಮಿತಿಮೀರಿದ ದುಬಾರಿತನ, ಅತಿ ಪುಕ್ಕಲುತನದಿಂದ ಯಾವುದೋ ಖರ್ಚುಗಳಿಂದ, ನಷ್ಟ ! ಜೇಳು, ಹಾವುಗಳಿಂದ ಅಪಾಯ ; ಆಕ್ಸಿಡೆಂಟ್ ನಿಂದ ತಲೆಗೆ ಪಾಯ ಈ ಸಂಖ್ಯೆಗೆ ಸೂಚಿತ.

ಇತರರನ್ನು ಅತಿಯಾಗಿ ನಂಬುವುದರಿಂದ, ನಂಬಿ ಕೊಟ್ಟ ದುಡ್ಡು ಹೋಗಿ ಮೋಸ ಹೋಗುವುದರಿಂದ ಇವರಲ್ಲಿ ಪ್ರತೀಕಾರ ಉಂಟಾಗಿ ಸಂಕ್ಷೋ ಭೆಯನ್ನು ಸೃಷ್ಟಿಸದೆ ಎಚ್ಚರವಹಿಸಬೇಕು ! ಕಾಲು, ಸೊಂಟ, ಮೊಳ ಕಾಲು ಗಳ ಬಲಹೀನತೆ ತೊಂದರೆ ಇರುತ್ತದೆ. ಸಾಮಾನ್ಯವಾಗಿ ಸಾಹಸಿಗರು ಸೈನಿಕ, ಪೊಲೀಸ್, ರಾಜಕೀಯ ನಾಯಕರು ಇಲ್ಲವೇ ಹೈಕೋರ್ಟ್ ಸುಪ್ರಿಮ್‌ಕೋರ್ಟ್‌ನಲ್ಲಿನ ನ್ಯಾಯಮೂರ್ತಿಗಳು ಈ ಸುಖ್ಯೆಯಲ್ಲಿ ಹುಟ್ಟು ತ್ತಾರೆ. ಸಾಮಾನ್ಯ ಮನೆತನದಲ್ಲಿ ಹುಟ್ಟಿದರೂ ರಾಜಸ, ಹೋರಾಟ ಇವರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಮಾರ ಸ್ವಾಮಿ ಆರಾಧನೆ, 'ಶರಣಭವ ಮಂತ್ರ' ಷಷ್ಟಿವ್ರತ, ಮಂಗಳವಾರ ಉಪವಾಸಗಳಂಥ ಆಧ್ಯಾತ್ಮಿಕ ಉಪಾಯದಿಂದ ಮಹತ್ತರ ಶಕ್ತಿಯನ್ನು ಪಡೆದು ಅದರಿಂದ ಶತೃಗಳಿಂದ ಪಾರಾಗಬಹುದು.

ಮೇಲಿನ ಒಂಬತ್ತು ಅಂಕೆಗಳೂ ಅವುಗಳ ಸ್ವಭಾವಗಳನ್ನು ಸೂಚನಾ ಸ್ವಾಯವಾಗಿ ಬಹಳ ಕ್ಲುಪ್ತವಾಗಿ ಕೊಡಲಾಗಿದೆ. ಹುಟ್ಟಿದ ದಿನಾಂಕ Date of Birth ಅದರೂ ಆಗಲಿ ಇಲ್ಲವೇ ಹೆಸರಿನ ಮೇಲೆ ಈ ಸಂಖ್ಯೆ ಬಂದರೂ ಈ ಫಲಗಳನ್ನು ವಿನಿಯೋಗಿಸಿ ಕೊಳ್ಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ಅದೃಷ್ಟ–ಸಂಖ್ಯೆಗಳು ಬಂದರೆ

ಒಂದು ವೇಳೆ ಹೆಸರಿನ ಮೂಲಕ ಒಂದು ಸಂಖ್ಯಾ ಜನ್ಮ ದಿನಾಂಕದ ಮೇಲೆ ಒಂದು ಸಂಖ್ಯೆ ಬಂದರೆ ಎರಡು ಲಕ್ಷಣಗಳು ಕೂಡಿರುತ್ತದೆ.

ಎರಡು ವಿರುದ್ಧ ಸಂಖ್ಯೆಗಳಾದರೆ–ಸಮಸ್ಯೆ ಬರುತ್ತದೆ ! ಎರಡೂ ಅನುಕೂಲ ಸಂಖ್ಯೆಗಳಾದರೆ ಜೀವನ ಕೀರ್ತಿವಂತವಾಗಿ ಸಂತೋಷದಿಂದ ಸಾಗುತ್ತದೆ. ಹೆಸರು, ಸಂಖ್ಯೆ, ಜನ್ಮದಿನಾಂಕ, ತಿಂಗಳ ಸಂಖ್ಯೆ, ಸಂದರೆ ಅದು ಮಹತ್ತರ್ಯಾದ ಜನ್ಮ ! ಜೀವನದಲ್ಲಿ ರಾಜಯೋಗ ವಿರುತ್ತದೆ. ಇಲ್ಲವೇ ಒಂಟಿ ಸಂಖ್ಯೆಗಳು Single Number ಅಲ್ಲದೆ ಸಮಿಷ್ಟಿ ಸಂಖ್ಯೆಗಳು Compund Number ಕೂಡಾ ಪ್ರತ್ಯೇಕ ಫಲಗಳನ್ನು ಕೊಡುತ್ತವೆ.

ಅದು ಹೇಗೆಂದರೆ 13, 22 ಸಂಖ್ಯೆಗಳನ್ನು ಸೇರಿಸಿದರೆ ಬರುವುದು 4-ಆದರೂ ಭವಿಷ್ಯತ್ತಿನಲ್ಲಿ ಯಾವ ವರ್ಷಕ್ಕೆ ಯಾವ ಸಂಖ್ಯೆ ಬರುವುದೋ ಅಂದಿನ ಫಲಗಳು ಹೆಸರಾಗಿರುತ್ತದೆ. 16, 23, 13 ಬಂದಲ್ಲಿ ಆ ಸಂವತ್ಸರದಲ್ಲಿ ಮರಣ ಸಂಭವಿಸಬಹುದು ಇಲ್ಲವೇ ಬದಲಾವಣೆಯೂ ಆಗಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮುಷ್ಟಿ–ಸಂಖ್ಯೆಗಳು

ಈ ವಿವರಗಳು ತಿಳಿಯಬೇಕೆಂದರೆ ಸಮಿಷ್ಟಿ ಸಂಖ್ಯೆಗಳು Compound Numbers ಕುರಿತು ಅಂದರೆ 9 ಕ್ಕೆಂತಲೂ ಹೆಚ್ಚು ಸಂಖ್ಯೆ ಬರುವುದರ ಕುರಿತು ತಿಳಿಯಬೇಕು. ಅವು ಮುಂದಿನ ಗ್ರಂಥ (ಪುಸ್ತಕ)ದಲ್ಲಿ ಬರುತ್ತದೆ 'ಸಂಖ್ಯೆಗಳು–ರಹಸ್ಯಗಳು' ಎಂಬ ಬರಲಿರುವ ನನ್ನ ಪುಸ್ತಕ ಓದಿರಿ !

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ॥ ವೇದವ್ಯಾಸ I.A.S., Ph.D

Sri Vidyabharathi Book Centre, Sringeri